ಕ್ರಿ. ಶ.
1987

ಯಕ್ಷಗಾನ ಛಂದೋವಿವೇಕ

ಶಾ. ಶ,
೧೯೦೮

ಕ. ಪು. ಸೀತಾರಾಮ ಕೆದಿಲ್ಲಾಯ, ಶಿಶಿಲ

ಬೆಲೆ
10-00

ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು-೨

ಕ್ರಿ. ಶ.
1987

ಯಕ್ಷಗಾನ ಛಂದೋವಿವೇಕ

ಶಾ. ಶ,
೧೯೦೮

ಕ. ಪು. ಸೀತಾರಾಮ ಕೆದಿಲ್ಲಾಯ, ಶಿಶಿಲ

ಬೆಲೆ
10-00

ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು-೨

ಯಕ್ಷಗಾನ ಛಂದೋವಿವೇಕ

ಕ. ಪ್ರ. ಸೀತಾರಾಮ ಕೆದಿಲ್ಲಾಯ, ಶಿಶಿಲ

ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು - ೨

YAKSHAGANA CHANDOVIVEKA

By: *K. P. Seetharama Kedillaya*
Shishila, D. K.

Published by Bharadwaja Prakashana
Kadri, Mangalore-575002

First Edition: 1987

Price Rs. 10-00

Printed at: **Prasanna Press, Puttur, D. K. 574201**
Phone: 6805

ಪ್ರಕಾಶಕರ ಎರಡು ಮಾತು

ಭಾರದ್ವಾಜ ಪ್ರಕಾಶನದ ಒಲವು ವೈಚಾರಿಕಸಾಹಿತ್ಯ ಪ್ರಸಾರದ ಕಡೆಗೇ ಸಾಗುವುದೆಂಬುದನ್ನು ಈವರೆಗಿನ ಪ್ರಕಟಣೆಗಳು ಸಾರುತ್ತವೆ. ಜನ ಪ್ರಿಯವಾದ ಕಲಾದರ್ಶನ ಮಾಸಪತ್ರಿಕೆ ಪ್ರತಿ ತಿಂಗಳಲ್ಲಿಯೂ ಕಲೆ–ಸಾಹಿತ್ಯ ಇತಿಹಾಸ - ಶಿಕ್ಷಣ – ಸಂಶೋಧನೆಗಳಿಗೆ ಮೀಸಲಾದ ಲೇಖನಗಳನ್ನು ಒಳ ಗೊಂಡು ಪ್ರಕಟವಾಗುತ್ತಿದೆ. ಅಲ್ಲದೆ ಪ್ರಬುದ್ಧ ಲೇಖಕರ ಸುಮಾರು ಇಪ್ಪತ್ತೈದು ಕೃತಿಗಳು ಹೊರಬಂದಿವೆ. ಇದಕ್ಕೆ ಸಾಹಿತ್ಯಾಭಿಮಾನಿಗಳ ಸಹಕಾರವೇ ಮೂಲಕಾರಣವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಆತ್ಮೀಯ ಮಿತ್ರರಾದ ಶ್ರೀ। ಕ. ಪ್ರ. ಸೀತಾರಾಮ ಕೆದಿಲಾಯರ "ಛಂದೋದರ್ಪಣಂ" ಎಂಬ ಶಾಸ್ತ್ರೀಯ ಗ್ರಂಥವು ಹಿಂದೆ ಇದೇ ಪ್ರಕಾಶನ ದಲ್ಲಿ ಪ್ರಕಟವಾಗಿ ವಿದ್ವಜ್ಜನರ ಆದರಕ್ಕೆ ಪಾತ್ರವಾಗಿದೆ. ಈಗ ಇವರು "ಯಕ್ಷಗಾನ ಛಂದೋವಿವೇಕ"ವನ್ನು ಭಾರದ್ವಾಜ ಪ್ರಕಾಶನದಲ್ಲಿ ಬೆಳಕು ಕಾಣಿಸಲು ಬಯಸಿರುವುದು ಅಭಿಮಾನದ ಸಂಗತಿ. ಕನ್ನಡಿಗರು ಈ ಕೃತಿಯನ್ನು ಕೊಂಡುಕೊಂಡು ಪ್ರೋತ್ಸಾಹಿಸಿದರೆ ಲೇಖಕ, ಪ್ರಕಾಶಕರ ಶ್ರಮವು ಸಾರ್ಥಕ ವಾಗುತ್ತದೆ.

ಇದೀಗ ಮೂಲ್ಕಿಯಲ್ಲಿ ಜರಗುವ ಮೂರನೆಯ ದಕ್ಷಿಣಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ವೇಳೆಗೆ ಬಿಡುಗಡೆ ಮಾಡಲು ಈ ಪುಸ್ತಕವನ್ನು ಒದಗಿಸಿಕೊಟ್ಟ ಗ್ರಂಥಕರ್ತರಿಗೂ ಇದನ್ನು ಸಕಾಲದಲ್ಲಿ ಮುದ್ರಿಸಿಕೊಟ್ಟ ಪುತ್ತೂರು ಪ್ರಸನ್ನ ಪ್ರೆಸ್ಸಿನ ಶ್ರೀ ಕೆ. ಚೆನ್ನಪ್ಪ ಗೌಡರು ಮತ್ತು ಬಳಗ ದವರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸಿ ಇದನ್ನು ವಾಚಕರ ಕೈಗೊಪ್ಪಿಸುತ್ತೇವೆ.

ಪ್ರಕಾಶಕರು:
ಭಾರದ್ವಾಜ ಪ್ರಕಾಶನ
ಕದಿರೆ, ಮಂಗಳೂರು

ಕ್ಷಯ ಪೌಷ ಬಹುಳ ೨
೧೭-೧-೧೯೮೭

ಅರಿಕೆ

ಕನ್ನಡದ ಯಕ್ಷಗಾನ ಕೃತಿಗಳಲ್ಲಿ ನಾನಾ ವಿಧದ ಛಂದೋಬಂಧಗಳು ಸಮಾವೇಶವಾಗಿವೆ. ಛಂದಶ್ಶಾಸ್ತ್ರ ಸಂಗೀತ ಶಾಸ್ತ್ರಗಳನ್ನು ಅವಲೋಕಿಸಿ ಕೆಲವು ಪದ್ಯಗಳ ಛಂದೋ ನಿಯಮವನ್ನು ಅರಿತುಕೊಳ್ಳಬಹುದು. ಆದರೆ ಆ ಗ್ರಂಥ ಗಳಲ್ಲಿ ಉಲ್ಲೇಖಿಸಿದ ಅನೇಕ ರಾಗತಾಳಬದ್ಧ ಗೀತಗಳು ಯಕ್ಷಗಾನ ಪ್ರಬಂಧ ಗಳಲ್ಲಿ ಗೋಚರಿಸುವುವು. ಆದುದರಿಂದ ಯಕ್ಷಗಾನ ಪದಗಳ ಛಂದೋಲಕ್ಷಣ ವನ್ನು ವಿವರಿಸುವ ಅವಶ್ಯವಿದೆ.

ಕೆಲವು ವರ್ಷಗಳ ಹಿಂದೆ ಪ್ರಕಟವಾದ ನನ್ನ "ಯಕ್ಷಗಾನ ಛಂದಸ್ಸು" ಎಂಬ ಪುಸ್ತಕವು ಯಕ್ಷಗಾನ ಕವಿಗಳಿಗೆ ಪ್ರಯೋಜನಕಾರಿಯಾಯಿತು. ಯಕ್ಷಗಾನ ಛಂದೋ ವೈಚಿತ್ರ್ಯದ ಕಡೆಗೆ ವಿದ್ವಾಂಸರ ಲಕ್ಷ್ಯವನ್ನು ಸೆಳೆಯಿತು. ಅನಂತರ ಕೆಲವು ವಿಶಿಷ್ಟ ಸಂಕಲನ ಗ್ರಂಥಗಳಲ್ಲಿ ಯಕ್ಷಗಾನದ ಛಂದೋ ರೂಪಗಳ ಕುರಿತು ನಾನು ಬರೆದ ಲೇಖನಗಳು ಪ್ರಕಟವಾದುವು. ಆದರೆ ಅವುಗಳಲ್ಲಿ ಯಕ್ಷಗಾನದ ಛಂದೋ ವೈವಿಧ್ಯವನ್ನು ಸವಿಸ್ತಾರವಾಗಿ ವಿವರಿಸಲು ಸಾಧ್ಯವಾಗಿರಲಿಲ್ಲ. ಆದುದರಿಂದ ಯಕ್ಷಗಾನ ಕವಿಗಳಿಗೆ ಇತರ ಛಂದೋ ಗ್ರಂಥ ಗಳ ಅಧ್ಯಯನ ಮಾಡದೆಯೇ ಕೃತಿಗಳನ್ನು ರಚಿಸಲು ಅನುಕೂಲವಾಗುವಂತೆ ಈ "ಯಕ್ಷಗಾನ ಛಂದೋವಿವೇಕ"ವನ್ನು ಬರೆದಿರುವೆನು.

ಈ ಪುಸ್ತಕದ ಪ್ರಕಟಣೆಗೆ ಸಹಕಾರವಿತ್ತ ಭಾರದ್ವಾಜ ಪ್ರಕಾಶನದ ಮುಖ್ಯಸ್ಥರಾದ ಶ್ರೀ ವಿ. ಬಿ. ಹೊಸಮನೆಯವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ, ಇದರ ಮುದ್ರಣಕಾರ್ಯವನ್ನು ಯುಕ್ತವಾಗಿ ನಿರ್ವಹಿಸಿದ ಪುತ್ತೂರಿನ ಪ್ರಸನ್ನ ಮುದ್ರಣಾಲಯದ ಶ್ರೀ ಚೆನ್ನಪ್ಪ ಗೌಡರಿಗೂ ಕಾರ್ಮಿಕ ಬಂಧುಗಳಿಗೂ, ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕ. ಪು. ಸೀತಾರಾಮ ಕೆದಿಲ್ಲಾಯ

ಯಕ್ಷಗಾನ ಛಂದೋವಿವೇಕ

ಪಾರಿಭಾಷಿಕಸಂಜ್ಞೆಗಳು

ಛಂದಶ್ಶಾಸ್ತ್ರದಲ್ಲಿ ಅನೇಕ ಪಾರಿಭಾಷಿಕಸಂಜ್ಞೆಗಳು ಪ್ರಯೋಗಗೊಂಡಿವೆ. ಪದ್ಯಗಳ ಲಕ್ಷಣವನ್ನು ಪರಿಶೀಲಿಸಲು ಅವುಗಳ ಪರಿಜ್ಞಾನವು ಅವಶ್ಯವಾಗಿದೆ. ಛಂದಸ್ಸಿನಲ್ಲಿ ಅಕ್ಷರ ಪರಿಮಾಣಕ್ಕೆ ಅನುಗುಣವಾಗಿ ಮೂರು ವಿಧದಲ್ಲಿ ಅಕ್ಷರಗಳನ್ನು ವರ್ಗೀಕರಿಸಿ ಲಘು ಗುರುಪ್ಲುತಗಳೆಂಬ ಸಂಜ್ಞೆಗಳಿಂದ ಸೂಚಿಸಲಾಗುವುದು.

ಲಘು: ಹ್ರಸ್ವಾಕ್ಷರವು (ಹ್ರಸ್ವಸ್ವರ; ಹ್ರಸ್ವಸ್ವರಪರವಾದ ವ್ಯಂಜನ) ಲಘುವೆನಿಸುತ್ತದೆ. ಇದಕ್ಕೆ ಒಂದು ಮಾತ್ರೆ. । ನೀಳ್ಗೆರೆಯನ್ನು ಇದರ ಚಿಹ್ನೆಯಾಗಿ ಬರೆಯಬಹುದು.

ದೃಷ್ಟಾಂತ: ಇ ಷು.

ಗುರು: ದೀರ್ಘಾಕ್ಷರ (ದೀರ್ಘಸ್ವರ; ದೀರ್ಘಸ್ವರಪರವಾದ ವ್ಯಂಜನ) ಅನುಸ್ವಾರದ ಪೂರ್ವಾಕ್ಷರ - ವಿಸರ್ಗದ ಪೂರ್ವಾಕ್ಷರ [ಜಿಹ್ವಾಮೂಲೀಯದ ಪೂರ್ವಾಕ್ಷರ - ಉಪಾಧ್ಮಾನೀಯದ ಪೂರ್ವಾಕ್ಷರ ಸಹಿತ] ಶಿಥಿಲ ದ್ವಿತ್ವವಿಲ್ಲದ ಸಂಯುಕ್ತಾಕ್ಷರದ ಪೂರ್ವಾಕ್ಷರ - ವ್ಯಂಜನದ ಪೂರ್ವಾಕ್ಷರಗಳು ಗುರುವೆನಿಸುತ್ತವೆ. ಇದಕ್ಕೆ ಎರಡು ಮಾತ್ರೆಗಳು. S ಹಿಂದೆ ಮುಂದೆ ಕೊಂಕಿರುವ ವಕ್ರ ರೇಖೆಯನ್ನು ಇದರ ಚಿಹ್ನೆಯಾಗಿ ಬರೆಯಬಹುದು,

ದೃಷ್ಟಾಂತ: ಬೇ ವಂ ಚಿಃ ತಿನ್ನರ್

ಪಾದಾಂತಗುರು: ಕೆಲವು ಪದ್ಯಗಳಲ್ಲಿ ಪಾದಾಂತ್ಯದ ಹ್ರಸ್ವಾಕ್ಷರವು ಉಚ್ಚಾರ ಕಾಲದಲ್ಲಿ ಕರ್ಷಣಗೊಂಡು ಗುರುವಾಗುವುದು.

ಪುರಹರನಂದನ ಭೋಗಿಶರೀರS —ಸಭಾಲಕ್ಷಣ

ಒಂದು ಅಕ್ಷರಕ್ಕೆ ಹೆಚ್ಚು ಸಲ ಗುರುವಾಗುವ ಸಂದರ್ಭ ಒದಗಿದರೂ ಒಂದೇ ಗುರುವಾಗಿ ಭಾವಿಸಿ ಎರಡು ಮಾತ್ರೆಗಳನ್ನು ಮಾತ್ರವೇ ಗಣಿಸ ಬೇಕು.

ದೃಷ್ಟಾಂತ: ಲಕ್ಷ್ಮಿ - ಭಾಗ್ಯ - ಶಾಂತಿ

ಪ್ಲುತ: ಪಠನ ಕಾಲದಲ್ಲಿ ತ್ರಿಮಾತ್ರಾ ಕಾಲ ಪ್ರಮಾಣದವರೆಗೆ ಕರ್ಷಿತ ವಾಗುವ ಅಕ್ಷರಕ್ಕೆ ಪ್ಲುತವೆಂದು ಸಂಜ್ಞೆ. ಇದಕ್ಕೆ ಮೂರು ಮಾತ್ರೆಗಳು ಽ ದ್ವಿ ವಕ್ರರೇಖೆಯನ್ನು ಇದರ ಚಿಹ್ನೆಯಾಗಿ ಇಡಬಹುದು,

ದೃಷ್ಟಾಂತ: ಹಾ಼ -

ವೈದಿಕಚ್ಛಂದಸ್ಸಿನಲ್ಲಿ ಪ್ಲುತದ ಪ್ರಯೋಗವಿದೆ, ಲೌಕಿಕಚ್ಛಂದಸ್ಸಿನಲ್ಲಿ ಇದನ್ನು ಗುರುವೆಂದೇ ಪರಿಗಣಿಸಲಾಗುವುದು. ಆದರೆ ಹಾಡುಗಳಲ್ಲಿ ಪ್ಲುತದ ಪ್ರಯೋಗವೂ ಗೋಚರಿಸುತ್ತದೆ.

ಶಿಥಿಲದ್ವಿತ್ವ

ಶಿಥಿಲದ್ವಿತ್ವವೆಂದರೆ ಒತ್ತಿ ಉಚ್ಚರಿಸದೆ ಪಠಿಸಬೇಕಾದ ಸಂಯುಕ್ತಾಕ್ಷರ. ಇದರ ಪೂರ್ವದ ಹ್ರಸ್ವಾಕ್ಷರವು ಗುರುವಾಗದೆ ಲಘುವಾಗಿಯೇ ಉಳಿಯುವುದು. ಶಿಥಿಲದ್ವಿತ್ವದ ಮೇಲೆ*ನಕ್ಷತ್ರ ಚಿಹ್ನೆಯನ್ನು ಇಡುವ ರೂಢಿ ಇದೆ.
ಕೆಲವು ಸಹಜ ಶಿಥಿಲದ್ವಿತ್ವವಿರುವ ಶಬ್ದಗಳಿವೆ.

ಬರ್ದಿಲಂ - ಅದಿರ್ಮುತ್ತೆ - ಅಮರ್ದು - ಗರ್ದುಗು - ಎರ್ದೆ -

ಬರ್ದುಕು - ಬರ್ದುಂಕು - ಕರ್ದುಕು - ಕರ್ದುಂಕು.

ಲಘೂಪಾಂತ್ಯವಾಗಿದ್ದು ಜಿ ಟಿ - ಕುಳ - ರೇಫಾಂತಗಳಾದ ಲಿಂಗಗಳಿಗೆ "ಗೆ" - "ಗಳ್" ಪರವಾದರೆ ಆ ಸಂಯುಕ್ತಾಕ್ಷರಕ್ಕೆ ಹೆಚ್ಚಾಗಿ ಶಿಥಿಲತೆ ಬರುತ್ತದೆ.

ಜಿಟಾಂತ:– ನೆಗಟ್ಗಳ್ - ಅಗಟ್ಗೆ

ಕುಳಾಂತ:– ಮುಗುಳ್ಗಳ್ - ಅಮಳ್ಗೆ

ರೇಫಾಂತ:– ಅಲರ್ಗಳ್ - ತಳಿರ್ಗೆ

ಋಕಾರಾದೇಶ ರೇಫಾಂತ: ಎಡರ್ಗಳ್ - ಪೆಸರ್ಗಳ್

ಅಪವಾದ: ಕುರುಳ್ಗಳ್ - ಮರುಳ್ಗಳ್ - ಪುರುಳ್ಗಳ್ ಇವುಗಳಲ್ಲಿ ಸಂಯುಕ್ತಾಕ್ಷರಕ್ಕೆ ಶಿಥಿಲತ್ವವಿಲ್ಲ.

ಲಘೂಪಾಂತ್ಯವಾಗಿದ್ದು ಱ ೞ - ಕುಳ - ರೇಫಾಂತಗಳಾದ ಧಾತುಗಳ ಮುಂದೆ ಗೆ - ಗುಂ - ದ - ದಪ - ವಕಾರಗಳು ಪರವಾದರೆ ಹೆಚ್ಚಾಗಿ ಆ ಸಂಯುಕ್ತಾಕ್ಷರಕ್ಕೆ ಶಿಥಿಲತೆಯೊದಗುತ್ತದೆ.

ಱೞಾಂತ: ತುಮುೞ್ದಂ - ಜಗುೞ್ದಪಂ - ಪೊಗೞ್ವಂ - ತೆಗೞ್ಗಂ ನೆಗೞ್ಗೆ.

ಕುಳಾಂತ: ನುಸುಳ್ದಂ - ನುಗುಳ್ದಪಂ - ಮುಗುಳ್ವಂ - ನುಸುಳ್ಗಂ - ಮುಸುಳ್ಗೆ

ರೇಫಾಂತ: ತಳರ್ದಂ - ತೊಡರ್ದಪಂ - ಮಿಳಿರ್ವಂ - ಅಡರ್ಗೆ ಅಮರ್ಗುಂ

ಅಪವಾದ: ತೆರಳ್ದಂ - ಪೊರಳ್ದ - ತಗುಳ್ದಂ - ಇವುಗಳಲ್ಲಿ ಸಂಯುಕ್ತಾಕ್ಷರವು ಶಿಥಿಲದ್ವಿತ್ವವೂ ದ್ವಿತ್ವವೂ ಆಗಬಹುದು,

ಸುರುಳ್ದಂ: ಪೊದಳ್ದುದು - ಇವುಗಳಲ್ಲಿ ಸಂಯುಕ್ತಾಕ್ಷರಕ್ಕೆ ಶಿಥಿಲತ್ವವಿಲ್ಲ.

ಸಮಾಸಪದದಲ್ಲಿ ಲಘೂಪಾಂತ್ಯವಾದ ಕುಳಾಂತ ರೇಫಾಂತ ಶಬ್ದಗಳಿಗೆ ಗ - ದ - ವ - ಜ - ಕಾರಗಳಿಂದ ಪ್ರಾರಂಭವಾಗುವ ಶಬ್ದಗಳು ಸೇರಿದರೆ ಸಂಯುಕ್ತಾಕ್ಷರಕ್ಕೆ ಶೈಥಿಲ್ಯವುಂಟಾಗುವುದು,

ಕುಳಾಂತ: ಮುಗುಳ್ಗ*ಯರ್ - ಅಮಳ್ದೊ*ಂಗಲ್ - ಎಸಳ್ವ*ಸೆ - ಅವ*ಳ್ಜಂತ್ರಂ.

ರೇಫಾಂತ: ಅಲಗೊ*ರ್ಣಂಚಲ್ - ಬಿದಿರ್ದ*ಟ್ಟಿ - ಬೆಮ*ರ್ವಣಿ - ಕದಿ*ರ್ಜೊನ್ನಂ.

ಹಳಗನ್ನಡದ ವ್ಯಂಜನಾಂತ ಲಿಂಗಧಾತು ಶಬ್ದಗಳನ್ನು ಹೊಸಗನ್ನಡದಲ್ಲಿ ಸ್ವರಾಂತ ಶಬ್ದಗಳಾಗಿ ಉಚ್ಚರಿಸುವ ಕಾರಣದಿಂದಾಗಿ ಈಗ ಶಿಥಿಲ ದ್ವಿತ್ವದ ಪ್ರಯೋಗವು ವಿರಳವಾಗಿದೆ.

ವಿಕಲ್ಪಲಘು: ಸಂಯುಕ್ತಾಕ್ಷರದ ಪೂರ್ವಾಕ್ಷರವು ಗುರುವಾಗುವುದಾದರೂ ಪೂರ್ವಪದಾಂತ್ಯದಲ್ಲಿ ಹ್ರಸ್ವಾಕ್ಷರವಿದ್ದು ಪರದಲ್ಲಿ ಸರೇಫ ಸಂಯುಕ್ತಾಕ್ಷರವು ನಿಂತರೆ ವೈಕಲ್ಪಿಕವಾಗಿ ಪೂರ್ವಾಕ್ಷರವನ್ನು ಲಘುವೆಂದೂ ಎಣಿಸಬಹುದು,

ಭಜಿಸುವೆನನುದಿ*ನಶ್ರೀಶನ । ನಜಭವ ಸುರ*ವ್ರಜ ವಂದ್ಯನ॥

–ಸಮುದ್ರ ಮಥನ

ಆದರೆ ಶಬ್ದಾಂತರ್ಗತ ಸರೇಫ ಸಂಯುಕ್ತಾಕ್ಷರದ ಪೂರ್ವದಲ್ಲಿರುವ ಹ್ರಸ್ವಾಕ್ಷರವನ್ನು ಗುರುವೆಂದೇ ಪರಿಗಣಿಸಬೇಕು.

ಚಿತ್ರತರಾಂಗಿ ಕೇಳ್ ಬಾಲೆ – ವಾಲಿ ಸಂಹಾರ

ಅವಸಾಯಂ ಗುರು: ಕೆಲವು ಪದ್ಯಗಳ ನಿರ್ದಿಷ್ಟ ವಿಶ್ರಾಂತಿ ಸ್ಥಾನದ ಪೂರ್ವದಲ್ಲಿ ನಿಲ್ಲುವ ಅಕ್ಷರವು ಇತರ ಗಣಕ್ಕೆ ಅನುಗುಣವಾದ ಮಾತ್ರಾ ಮೌಲ್ಯವನ್ನಾಗಲಿ ಗಣದ ಲುಪ್ತ ಮಾತ್ರಾಮೌಲ್ಯವನ್ನಾಗಲಿ ಪಡೆಯುತ್ತದೆ. ಈ ಅಕ್ಷರವು ಲಘುವಾದರೂ ಗುರುವಾದರೂ ನಿಶ್ಚಿತ ಗಣಪರಿಮಾಣಕ್ಕೆ ಸಮವಾಗುವಂತೆ ಇದನ್ನು ಕರ್ಷಣ ಮಾಡಿ ಪಠಿಸಬೇಕಾಗುವುದು; ಅಥವಾ ಗುರೂಚ್ಚಾರ ಮಾಡಿ ನಿಶ್ಶಬ್ದ ವಿರಾಮದಿಂದ ಗಣಪೂರಕ ಕಾಲಾವಧಿಯನ್ನು ತುಂಬಿಸಬೇಕಾಗುವುದು. ಹೀಗಾಗಿ ಈ ಅಕ್ಷರವು ಹ್ರಸ್ವವಾಗಿದ್ದರೂ ಗುರುವೆಂದೇ ಛಂದಸ್ಸಿನಲ್ಲಿ ಪರಿಗಣಿಸಲ್ಪಡತ್ತದೆ.

[ಈ ಪುಸ್ತಕದಲ್ಲಿ ಪದ್ಯಗಳ ಪ್ರಸ್ತಾರದ ಸಂದರ್ಭದಲ್ಲಿ ಅವಸಾಯ ಗುರುವಿನ ಪಕ್ಕದಲ್ಲಿ s ಎರಡು ಕೊಂಕುಗಳಿರುವ ಗೆರೆಯನ್ನು ಬರೆಯಲಾಗುವುದು]

ಕೆಳಗಿನ ಪದಗಳಲ್ಲಿ ನಿರ್ದಿಷ್ಟ ಪಾದಾಂತ್ಯ ಸ್ಥಾನದಲ್ಲಿ ಅವಸಾಯ ಗುರು ನಿಲ್ಲುತ್ತದೆ,

ನೀಲ ಮೇಘ ಶ್ಯಾಮ ನೀರಜ। ಲೋಲ ಲೊಚನಕಂಬುಕಂಠವಿ।
ಶಾಲ ವಕ್ಷ ಸ್ಥಳ ಮನೋಹರ ವದನ ದಾಶರ, ಥೇ s ॥ – ಚಂದ್ರಹಾಸ ಚರಿತ್ರೆ

ಪಾಲಿಸು ಗಜವದನ s ॥ ಸುಗುಣವಿ। ಶಾಲದಯಾಸದನ s ॥

– ರಾವಣ ವಧೆ

ಕೆಳಗಿನ ಪದಗಳಲ್ಲಿ ಪಾದಾಂತ್ಯ ಸ್ಥಾನದಲ್ಲಿ ದ್ವಿಕಲ ಗುರುಗಳು ಬರುತ್ತವೆ.

ಉಸಿರುವೆನು ತಿಳಿದಂತೆ ಯಕ್ಷಗಾ, **ನದ.** ಲಿs ॥ – ರಾಮಾಂಜನೇಯ ಕಾಳಗ

ಇಂದು ಮಂಡಲ ವದನ. **ನಮ್ಮ** s॥ ಭುವನೈಕ ॥ ಸುಂದರ ಕಳಾಭರಿತ. **ನಮ್ಮ** s ॥

– ಪ್ರಭಾ ಚರಿತ್ರೆ

* * *

ಛಂದಶ್ಶಾಸ್ತ್ರದಲ್ಲಿ ಪ್ರೋಕ್ತವಾದ ಈ ಲಘು ಗುರು ಪ್ಲುತಗಳಿಗೂ ಸಂಗೀತ ಶಾಸ್ತ್ರದಲ್ಲಿ ನಿರೂಪಿತವಾದ ತಾಳಾಂಗ ಸಂಜ್ಞೆಗಳಾದ ಲಘು ಗುರು ಪ್ಲುತಗಳಿಗೂ ಸ್ವರೂಪದಲ್ಲಿ ಭೇದವಿದೆ. ಛಂದಸ್ಸಿನಲ್ಲಿ ಒಂದು ಮಾತ್ರಾಕಾಲವೆಂದರೆ ಒಂದು ಹ್ರಸ್ವಾಕ್ಷರೋಚ್ಚಾರಕಾಲ ಪರಿಮಾಣವಾಗಿದೆ. ಇದರ ಕಾಲಾವಧಿ ನಿಶ್ಚಿತ ಪ್ರಮಾಣದಲ್ಲಿರುತ್ತದೆ. ಸಂಗೀತದಲ್ಲಿ ಒಂದು ಮಾತ್ರಾಕಾಲವೆಂದರೆ ಗಾನ ಕ್ರಿಯೆಯ ಸಂದರ್ಭದಲ್ಲಿ ನಿರ್ಧಾರಗೊಳ್ಳುವ ಪತನ ಕಾಲ ಪರಿಮಾಣವಾಗಿದೆ. ಇದರ ಕಾಲಾವಧಿ ತಾಳಾನುಸಾರವಾಗಿ ವ್ಯತ್ಯಾಸವಾಗುತ್ತದೆ. ಹೀಗಾಗಿ ವಿಭಿನ್ನ ಮಾತ್ರಾಮಾನಗಳನ್ನು ಅವಲಂಬಿಸಿರುವ ಛಂದಸ್ಸಿನ ಲಗು ಗುರು ಪ್ಲುತಗಳಿಗೂ ತಾಳಾಂಗ ಸಂಜ್ಞೆಗಳಾದ ಲಗು ಗುರು ಪ್ಲುತಗಳಿಗೂ ಸಾರ್ವತ್ರಿಕವಾಗಿ ಪ್ರಮಾಣ ಸಮತ್ವವು ಸಿದ್ಧಿಸುವುದಿಲ್ಲ. ಪದ್ಯಗಳ ಛಂದೋನಿಯಮವನ್ನು ಅನಿರ್ದಿಷ್ಟ ಕಾಲಮಾನ ಸೂಚಕಗಳಾದ ತಾಳಾಂಗ ಸಂಜ್ಞೆಗಳಿಂದ ಸ್ಪಷ್ಟವಾಗಿ ನಿರೂಪಿಸಲು ಸಾಧ್ಯವಾಗದು. ಆದುದರಿಂದ ಸಂಗೀತ ಶಾಸ್ತ್ರ ಗ್ರಂಥಗಳಲ್ಲಿಯೂ ಪ್ರಬಂಧ ಲಕ್ಷಣವನ್ನು ವಿವರಿಸಲು ಛಂದಃ ಪದ್ಧತಿಯ ಪಾರಿಭಾಷಿಕ ಸಂಜ್ಞೆಗಳನ್ನೇ ಪ್ರಯೋಗಿಸಲಾಗಿದೆ.

ಅಕ್ಷರ ಗಣಗಳು

ಛಂದಶ್ಶಾಸ್ತ್ರಗಳಲ್ಲಿ ಮ–ಯ–ರ–ಸ–ತ–ಜ–ಭ–ನ ಎಂಬ ಎಂಟು ವಿಧದ ತ್ರ್ಯಕ್ಷರಗಣಗಳನ್ನು ನಿರೂಪಿಸಲಾಗಿದೆ, ಕೆಲವು ಗ್ರಂಥಗಳಲ್ಲಿ ಈ ತ್ರಿಕಗಳಿಗೆ ಅನುಕ್ರಮವಾಗಿ ಭೂಮಿ–ಜಲ–ಅಗ್ನಿ–ವಾಯು–ಆಕಾಶ–ಸೂರ್ಯ–ಚಂದ್ರ–ಸ್ವರ್ಗಗಣಗಳೆಂಬ ಸಂಜ್ಞೆಗಳನ್ನೂ ಪ್ರಯೋಗಿಸಲಾಗಿದೆ.

ಗಣಸಂಕೇತಾಕ್ಷರ	ಗಣನಾಮ	ದೃಷ್ಟಾಂತ	ಪ್ರಸ್ತಾರ
ಮಗಣ	ಭೂಮಿ	ಭೂಚಕ್ರಂ	S S S
ಯಗಣ	ಜಲ	ಕಬಂಧಂ	I S S
ರಗಣ	ಅಗ್ನಿ	ಪಾವಕಂ	S I S
ಸಗಣ	ವಾಯು	ಪವನಂ	I I S
ತಗಣ	ಆಕಾಶ	ಆಕಾಶ	S S I
ಜಗಣ	ಸೂರ್ಯ	ದಿವಾಂಶು	I S I
ಭಗಣ	ಚಂದ್ರ	ಚಂದ್ರಮ	S I I
ನಗಣ	ಸ್ವರ್ಗ	ತ್ರಿದಿವ	I I I

ಮಾತ್ರಾ ಗಣಗಳು

ಮಾತ್ರಾ ಗಣಗಳಲ್ಲಿ ಷಣ್ಮಾತ್ರಾಗಣ - ಪಂಚಮಾತ್ರಾಗಣ - ಚತುರ್ಮಾತ್ರಾಗಣ - ತ್ರಿಮಾತ್ರಾಗಣ - ದ್ವಿಮಾತ್ರಾಗಣಗಳೆಂಬ ಐದು ವರ್ಗಗಳಿವೆ. ಛಂದಶ್ಶಾಸ್ತ್ರಗಳಲ್ಲಿ ಇವುಗಳಿಗೆ ಅನುಕ್ರಮವಾಗಿ ಷ–ಪ–ಚ–ತ–ದ ಎಂಬ ಸಂಕೇತಾಕ್ಷರಗಳನ್ನೂ ಟ–ಠ–ಡ–ಢ–ಣ ಎಂಬ ಸಂಜ್ಞೆಗಳನ್ನೂ ಸೂಚಿಸಲಾಗಿದೆ. ಮಾತ್ರಾಗಣಗಳ ಲಕ್ಷಣವನ್ನು ಪರಿಶೀಲಿಸಿದರೆ, ಪ್ರತಿಯೊಂದು ವರ್ಗದ ಎಲ್ಲಾ ಗಣಗಳಲ್ಲಿಯೂ ಮಾತ್ರಾ ಸಮತ್ವವು ಗೋಚರಿಸುತ್ತದೆ.

ಇವುಗಳಲ್ಲಿ ಅಕ್ಷರ ಸಂಖ್ಯಾ ಸಮತೆ ಬರಬೇಕೆಂಬ ನಿರ್ಬಂಧವಿಲ್ಲ. [ಇವುಗಳಿಗೆ ಅನುಕ್ರಮವಾಗಿ ಷ–ಪ–ಚ–ತ್ರಿ–ದ್ವಿ ಎಂಬ ಸಂಕೇತಾಕ್ಷರಗಳನ್ನು ಈ ಪುಸ್ತಕದಲ್ಲಿ ಬರೆಯಲಾಗುವುದು.]

ಷಣ್ಮಾತ್ರಾಗಣ (ಟಗಣ) ಪ್ರಸ್ತಾರ

ಗೌರೀಶಂ	-	S S S	(ಮಗಣ)
ಮೃಗಲಕ್ಷ್ಮಂ	-	I I S S	(ಸಗ)
ದಿವಾಕರಂ	-	I S I S	(ಜಗ)
ವಜ್ರಧರಂ	-	S I I S	(ಭಗ)
ಧರಣಿಧರಂ	-	I I I I S	(ನಲಗ)
ಬಲಿಧ್ವಂಸಿ	-	I S S I	(ಯಲ)
ಪಾರಿಜಾತ	-	S I S I	(ರಲ)
ಕಮಲಯೋನಿ	-	I I I S I	(ನಗಲ)
ಶೂರಾಗ್ರಣಿ	-	S S I I	(ತಲ)
ಶರಸಂಭವ	-	I I S I I	(ಸಲಲ)
ಭಕೂಟ ಮಣಿ	-	I S I I I	(ಜಲಲ)
ಧರ್ಮನಿಯಮಿ	-	S I I I I	(ಭಲಲ)
ಬಹುಧನಪತಿ	-	I I I I I I	(ನನಗಣ)

ಪಂಚ ಮಾತ್ರಾ ಗಣ (ಠಗಣ) ಪ್ರಸ್ತಾರ

ಗಜೇಂದ್ರಂ	-	I S S	(ಯಗಣ)
ಪಕ್ಷಿಪಂ	-	S I S	(ರಗಣ)
ಘನಧನುಸ್	-	I I I S	(ನಗ)
ಹೀರಾಂಕ	-	S S I	(ತಗಣ)
ವರ ವರಾಳಿ	-	I I S I	(ಸಲ)
ಸುಪರಾವಳಿ	-	I S I I	(ಜಲ)
ಸರ್ಪತತಿ	-	S I I I	(ಭಲ)
ಪ್ರಖರ ಶಿಖಿ	-	I I I I I	(ನಲಲ)

ಚತುರ್ಮಾತ್ರಾಗಣ (ಡಗಣ) ಪ್ರಸ್ತಾರ

ಕರ್ಣಂ	S S	(ಗಗ)

ಸುಕರಂ	-	।।S	(ಸಗಣ)
ನರೇಂದ್ರ	-	।S।	(ಜಗಣ)
ಶ್ರೀವಸು	-	।S।	(ಭಗಣ)
ದ್ವಿಜಮಣಿ	-	।।।।	(ನಲ)

ತ್ರಿಮಾತ್ರಾಗಣ (ಥಗಣ) ಪ್ರಸ್ತಾರ

ಧ್ವಜಂ	।S	(ಲಗ)
ತಾಲ	S।	(ಗಲ)
ಲಲನೆ	।।।	(ನಗಣ)

ದ್ವಿಮಾತ್ರಾಗಣ (ಣಗಣ) ಪ್ರಸ್ತಾರ

ಶ್ರೀ	S	(ಗ)
ಪ್ರಿಯೆ	।।	(ಲಲ)

ಅಂಶಿಗಣಗಳು (ತ್ರಿಮೂರ್ತಿಗಣಗಳು)

ಕನ್ನಡದ ಅನೇಕ ಛಂದೋ ಬಂಧಗಳಲ್ಲಿ ಅಂಶಿಗಣಗಳು ಪ್ರಯೋಗಗೊಂಡಿವೆ. ಇವುಗಳಲ್ಲಿ ಬ್ರಹ್ಮ - ವಿಷ್ಣು - ರುದ್ರಗಣಗಳೆಂಬ ಮೂರು ವರ್ಗಗಳಿವೆ, ಸಂಸ್ಕೃತದ ಛಂದಶ್ಶಾಸ್ತ್ರ ಮತ್ತು ಸಂಗೀತ ಶಾಸ್ತ್ರಗಳಲ್ಲಿ ಇವುಗಳಿಗೆ ಅನುಕ್ರಮವಾಗಿ ರತಿ - ಮದನ - ಶರ ಎಂಬ ಸಂಜ್ಞೆಗಳನ್ನೂ ರ–ಲ–ವ ಎಂಬ ಸಂಕೇತಾಕ್ಷರಗಳನ್ನೂ ಬರೆಯಲಾಗಿದೆ.

ಬ್ರಹ್ಮ ಗಣದಲ್ಲಿ ಎರಡು ಅಂಶಗಳೂ ವಿಷ್ಣು ಗಣದಲ್ಲಿ ಮೂರು ಅಂಶಗಳೂ ರುದ್ರಗಣದಲ್ಲಿ ನಾಲ್ಕು ಅಂಶಗಳೂ ಬರುತ್ತವೆ ಈ ಗಣಗಳ ಪ್ರಥಮಾಂಶದಲ್ಲಿ ಒಂದು ಗುರುವಾಗಲಿ-ಎರಡು ಲಘುಗಳಾಗಲಿ ಬರಬಹುದು. ಮುಂದಿನ ಪ್ರತಿಯೊಂದು ಅಂಶದಲ್ಲಿ ಗುರು ಅಥವಾ ಲಘು ಯಾವುದಾದರೂ ಒಂದು ಅಕ್ಷರ ಮಾತ್ರವೇ ಇರಬೇಕಾಗುವುದು. ಆದುದರಿಂದ ಒಂದೇ ವರ್ಗದ ಬೇರೆ ಬೇರೆ ಗಣಗಳಲ್ಲಿ ಮಾತ್ರಾ ಪರಿಮಾಣ ಸಮತ್ವವಾಗಲಿ - ಅಕ್ಷರ ಸಂಖ್ಯಾ ಸಮತೆಯಾಗಲಿ ಗೋಚರಿಸುವುದಿಲ್ಲ. ಅಂಶಿಗಣ ಬಂಧಗಳ ಛಂದೋ

ಲಯಕ್ಕೆ ಅನುಗುಣವಾಗಿ ಈ ಗಣಗಳನ್ನು ಉಚ್ಚಾರ ಕಾಲ ಸಮತ್ವವು ಸಿದ್ಧಿಸುವಂತೆ ಪರಿಸಬೇಕಾಗುವುದು.

[ಈ ಪುಸ್ತಕದಲ್ಲಿ ಬ್ರಹ್ಮ-ವಿಷ್ಣು-ರುದ್ರಗಣಗಳಿಗೆ ಬ್ರ-ವಿ-ರು ಎಂಬ ಸಂಕೇತಾಕ್ಷರಗಳನ್ನು ಬಳಸಲಾಗುವುದು.]

ಬ್ರಹ್ಮಗಣ ಪ್ರಸ್ತಾರ

ಬ್ರಹ್ಮಂ	S S
ದ್ರುಹಿಣಂ	I I S
ಧಾತೃ	S I
ವಿಧಿಯೆ	I I I

ವಿಷ್ಣುಗಣ ಪ್ರಸ್ತಾರ

ಗೋವಿಂದಂ	S S S
ಕಮಲಾಕ್ಷಂ	I I S S
ಕೇಶವಂ	S I S
ಮುರ ಹರಂ	I I I S
ದೈತ್ಯಾರಿ	S S I
ವನಮಾಲಿ	I I S I
ಶ್ರೀಪತಿ	S I I
ಮಧುರಿಪು	I I I I

ರುದ್ರಗಣ ಪ್ರಸ್ತಾರ

ಗೌರೀಕಾಂತಂ	S S S S
ಪ್ರಮಥಾದೀಶಂ	I I S S S
ಚಂದ್ರ ಚೂಡಂ	S I S S
ಭುಜಗ ಭೂಷಂ	I I I S S

ಮೃತ್ಯುಂಜಯುಂ	s s I s
ವೃಷಭಧ್ವಜಂ	I I s I s
ಪಂಚಮುಖಿಂ	s I I s
ಗಿರಿನಿಲಯುಂ	I I I I s
ಗಂಗಾಧಾರಿ	s s s I
ತ್ರಿಪುರ ಧ್ವಂಸಿ	I I s s I
ಶೂಲಪಾಣಿ	s I s I
ಮುಖ ವಿಭೇದಿ	I I I s I
ದೇವಾಗ್ರಣಿ	s s I I
ತ್ರಿಜಗತ್ಪತಿ	I I s I I
ಭೂತಪತಿ	s I I I
ಮದನರಿಪು	I I I I I

ಗಣ ಪರಿವೃತ್ತಿ

ಕೆಲವು ತ್ರಿಮಾತ್ರಾಗಣ ಬಂಧಗಳಲ್ಲಿ ತ್ರಿಮಾತ್ರಾಗಣಯುಗ್ಮವನ್ನು ಷಟ್ಕಲಾಗತಿಗೆ ಸರಿಯಾಗುವಂತೆ ಗಣ ಸಂಧಾನ ಮಾಡಿ ದ್ವಿಮಾತ್ರಾಗಣ ಚತುರ್ಮಾತ್ರಾಗಣಗಳಾಗಿ ಪ್ರಯೋಗಿಸುವ ಪದ್ಧತಿ ಇದೆ.

ಹಸು, ಮಕ್ಕಳ, ನಿಷ್ಟ, ದಿವಸ, ಈ, ಪರಿಯಲಿ, ಮೆರೆಸಿ, ದೆ ॥

—ಕುಶಲವರ ಕಾಳಗ

ಕೆಲವು ಚತುರ್ಮಾತ್ರಾಗಣ ಬಂಧಗಳಲ್ಲಿ ಚತುರ್ಮಾತ್ರಾಗಣ ಯುಗ್ಮವನ್ನು ಅಷ್ಟಮಾತ್ರಾಗತಿಗೆ ಸರಿಯಾಗುವಂತೆ ಗಣ ಸಂಧಾನ ಮಾಡಿ ತ್ರಿಮಾತ್ರಾಗಣ ಪಂಚಮಾತ್ರಾಗಣಗಳಾಗಿ ಬರೆಯುವ ಕ್ರಮವಿದೆ.

ಕೋಮ, ಲಾಂಗಿ ಕೇ, ಳೇ ॥ ಮದಗಜ । ಗಾಮಿನೀ, ಪಾಂಚಾ, ಲೇ ॥

—ಕೃಷ್ಣ ಸಂಧಾನ

ಕೆಲವು ಬ್ರಹ್ಮ ಗಣ ಪ್ರಧಾನ ಬಂಧಗಳಲ್ಲಿ ಬ್ರಹ್ಮಗಣಯುಗ್ಮಕದ ಸ್ಥಾನದಲ್ಲಿ ರುದ್ರ ಗಣವನ್ನು ಪ್ರಯೋಗಿಸುವ ಸಂಪ್ರದಾಯವಿದೆ. ಪಠನ

ಕಾಲದಲ್ಲಿ ಈ ರುದ್ರ ಗಣವು ಬ್ರಹ್ಮ ಗಣದ್ವಯದ ಲಯವನ್ನು ಪಡೆಯುತ್ತದೆ.

ಜನಕ, ರಾಯ,ನನುಕಾಣದೆ । ಮನಸು, ಬಹಳ, ಕರಗುತಿದೆ ॥

–ಪಂಚವಟಿ ರಾಮಾಯಣ

ಕೆಲವು ವಿಷ್ಣುಗಣ ಪ್ರಧಾನ ಬಂಧಗಳಲ್ಲಿ ರಾಗಾಲಾಪನಕ್ಕೆ ಆಸ್ಪದವಾಗುವಂತೆ ಪಾದಾದಿಯ ವಿಷ್ಣು ಗಣದ ಸ್ಥಾನದಲ್ಲಿ ವೈಕಲ್ಪಿಕವಾಗಿ ಬ್ರಹ್ಮ ಗಣವನ್ನಿಡುವ ರೂಢಿ ಇದೆ.

ಜೋಜೋ, ವಿಷ್ಣುಪ,ದಾಂಬುಜ, ಭೃಂಗ ॥ –ಧ್ರುವ ಚರಿತ್ರೆ

ಕೆಲವು ಪದಗಳಲ್ಲಿ ವಿರಳವಾಗಿ ಇತರ ವಿಷ್ಣುಗಣದ ಸ್ಥಾನದಲ್ಲಿಯೂ ಬ್ರಹ್ಮ ಗಣವನ್ನು ಪ್ರಯೋಗಿಸಲಾಗಿದೆ.

ಜೋಜೋ,–ಕನ್ಯಾ–,ಕುಲಶಿರೋ,ಮಣಿಯೇ ॥ –ನಳ ಚರಿತ್ರೆ

ಈ ರೀತಿಯ ಗಣ ಪರಿವೃತ್ತಿ ಕೆಲವು ಗೀತಗಳಲ್ಲಿ ಗೋಚರಿಸುತ್ತದೆ,

ಯತಿ

ಒಂದು ಪದ್ಯದಲ್ಲಿ ಅರ್ಥಾಭಿವ್ಯಕ್ತಿಗೆ ದೋಷವಾಗದಂತೆ ಪಠನ ಕಾಲದಲ್ಲಿ ಪದವಿಚ್ಛೇದಗೊಳ್ಳುವ ನಿಯತ ಸ್ಥಾನಕ್ಕೆಯತಿಯೆಂಬ ಸಂಜ್ಞೆಯಿದೆ. ಸಂಗೀತ ಶಾಸ್ತ್ರದಲ್ಲಿ ಯತಿಯೆಂದರೆ ತಾಳಲಯಕ್ಕೆ ಅನ್ವಯಿಸುವ ಕಾಲಮಾನವಾಗಿದೆ. ಆದರೆ ಪದ್ಯಗಳ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ ಛಂದೋಯತಿಯನ್ನೇ ನಿರ್ದೇಶಿಸಬೇಕಾಗುವುದು. ಕೆಲವು ಪದ್ಯಗಳಲ್ಲಿ ಪಾದ ಮಧ್ಯಕ್ಕೂ ಪಾದಾಂತ್ಯಕ್ಕೂ ಯತಿ ಬರುವುದುಂಟು. ಕೆಲವು ಪದ್ಯಗಳಲ್ಲಿ ಪಾದಾಂತ್ಯಕ್ಕೆ ಮಾತ್ರವೇ ಯತಿ ನಿಲ್ಲುತ್ತದೆ. ಅನೇಕ ವೃತ್ತಗಳಲ್ಲಿ ಪಾದದ ನಿರ್ದಿಷ್ಟ ಸ್ಥಾನಗಳಲ್ಲಿ ಯತಿ ಬರುವುದಿಲ್ಲ. ಮಾತ್ರಾಗಣಬಂಧ ಅಂಶಿಗಣಬಂಧಗಳಲ್ಲಿ ನಿರ್ದಿಷ್ಟ ಪಾದಾಂತ್ಯ ಸ್ಥಾನಗಳಲ್ಲಿ ಸರಿಯಾಗಿ ವಿರಾಮವು ತಪ್ಪದೆ ಬರುತ್ತದೆ. ಇದನ್ನು ಅವಸಾಯ ಯತಿಯೆಂದು ಸೂಚಿಸಬಹುದು. ಆದರೆ ಪಾದ ಮಧ್ಯದಲ್ಲಿ ಆವರ್ತ ಗಣಾಂತ್ಯಕ್ಕೆ ಕಾಲಾತಿಪಾತವಿಲ್ಲದ ಯತಿ ಬರಬಹುದು. ಆದುದರಿಂದ ಯತಿ ಸ್ಪಷ್ಟವಾಗಿ ಗೋಚರಿಸುವುದಿಲ್ಲ.

ದೃಷ್ಟಾಂತ:-

ಶ್ರೀ ಕಾಳೀವದನಾರವಿಂದತಪನಂ-ಕಾಕೋದರಾಲಂಕೃತಂ।
-ಗದಾಪರ್ವ

-ಅಡ್ಡಗೆರೆಯಿರುವಲ್ಲಿ ಪಾದ ಮಧ್ಯಯತಿಯೂ। ನೀಳ್ಗೆರೆಯಿರುವಲ್ಲಿ ಪಾದಾಂತ್ಯಯತಿಯೂ ಬಂದಿದೆ.

ಜಯ ಜಯ ಮಹೀಪತೇ ದಶರಥನೃಪಾಲs ॥ -ರಾಮ ಪಟ್ಟಾಭಿಷೇಕ

॥ ಎರಡು ನೀಳ್ಗೆರೆಗಳಿರುವಲ್ಲಿ ಅವಸಾಯ ಯತಿಯಿದೆ.

ಪ್ರಾಸ ಪ್ರಭೇದಗಳು

ಆದಿಪ್ರಾಸ

ಒಂದು ಪದ್ಯದ ಪ್ರತಿಪಾದದಲ್ಲಿಯೂ ಪ್ರಾರಂಭದ ಪ್ರಥಮ ದ್ವಿತೀಯ ಸ್ವರಗಳ ನಡುವೆ ಏಕ ರೂಪದ ವ್ಯಂಜನವಿದ್ದು ಆದಿಯ ಸ್ವರದಲ್ಲಿ ಸಾಮ್ಯವಿದ್ದರೆ ಆದಿಪ್ರಾಸವಾಗುವುದು. ಒಂದು ಪಾದದಲ್ಲಿ ಪ್ರಾಸಪೀಠವಾದ ಪ್ರಥಮಾಕ್ಷರವು ಲಘುವಾಗಿದ್ದರೆ ಇತರ ಪಾದಗಳ ಮೊದಲ ಅಕ್ಷರಗಳೂ ಲಘುವಾಗಬೇಕು. ಒಂದು ಪಾದದಲ್ಲಿ ಆದಿಯ ಅಕ್ಷರವು ಗುರುವಾಗಿದ್ದರೆ ಅದು ಯಾವ ರೀತಿಯಲ್ಲಿ ಗುರುವಾಗುವುದೋ ಅದೇ ಕ್ರಮದಲ್ಲಿ ಅನ್ಯ ಪಾದಗಳ ಪ್ರಥಮಾಕ್ಷರವೂ ಗುರುವಾಗಬೇಕು.

ಸಿಂಹಪ್ರಾಸ: ಪ್ರಾಸಾಕ್ಷರದ ಪೂರ್ವ ಸ್ವರವು ಹ್ರಸ್ವವಾದರೆ ಸಿಂಹಪ್ರಾಸ.

ಭಜಿಸುವೆ ಮನದಲಿ ನಿತ್ಯವು।
ಭಜಕರ ಕುಲದೈವ ವ ಸುರ।
ವ್ರಜಸೇವಿತನೆಂದೆನಿಸುವ।
ಗಜವದನನ ಮುದದಿ ॥ -ಕುಶಲವರ ಕಾಳಗ

ಗಜಪ್ರಾಸ: ಪ್ರಾಸಾಕ್ಷರದ ಪೂರ್ವಸ್ವರವು ದೀರ್ಘವಾಗಿದ್ದರೆ ಗಜಪ್ರಾಸ.

ಶಾರದೆಯೆ ನೀನೆಮಗೆಕುಮತಿಯ।
ಸೇರದಂದದಿ ಕೊಟ್ಟು ಸುಮತಿಯ।
ಭೂರಿದಯದಿಂದೀಕೃತಿಯ ನೆರ।
ವೇರಿಸಮ್ಮ ॥ -ಶನಿ ಮಾಹಾತ್ಮ್ಯ

ವೃಷಭ ಪ್ರಾಸ: ಪ್ರಾಸಾಕ್ಷರದ ಪೂರ್ವದಲ್ಲಿ ಅನುಸ್ವಾರವಿದ್ದರೆ ವೃಷಭಪ್ರಾಸ.

ನಿಂಬೆಯ ಹಣ್ಣ ಕಾಣಿಕೆಯಿತ್ತ ಹರಿವಾಣ।
ತುಂಬ ಮುತ್ತಿನ ಸೇಸೆಯು ॥
ಮುಂಬರಿದಿಡುವ ದೇವಿಯು ನೋಡಿ ಕೊರವಿಹೇ ।
ರಂಬನ ಭಜಿಸಿದಳು॥ –ಕೃಷ್ಣ ಚರಿತೆ

ಹಯಪ್ರಾಸ: ಪ್ರಾಸಾಕ್ಷರವು ಸಜಾತೀಯ ಸಂಯುಕ್ತಾಕ್ಷರವಾಗಿದ್ದರೆ ಹಯಪ್ರಾಸ.

ಮಕ್ಕಳಿರ ಮನವಿಟ್ಟು ಕೇಳಿರಿ।
ಹಕ್ಕಿ ದೇರನ ವಿಮಲ ಚರಿತೆಯ।
ನೊಕ್ಕಣಿಸುವೆನು ವಿಸ್ತರಿಸಿನಿಮ।
ಗಕ್ಕರೆಯೊಳು ॥ –ಪಾದುಕಾ ಪಟ್ಟಾಭಿಷೇಕ

ಶರಭಪ್ರಾಸ: ಪ್ರಾಸಾಕ್ಷರವು ವಿಜಾತೀಯ ಸಂಯುಕ್ತಾಕ್ಷರವಾಗಿದ್ದು ಅದರ ಪೂರ್ವದಲ್ಲಿ ಅನುಸ್ವಾರ ವಿಸರ್ಗಗಳಿಲ್ಲದಿದ್ದರೆ ಶರಭಪ್ರಾಸ.

ದಕ್ಷಮುಖಸಂಹರಣ ಸುರಮುನಿ।
ಯಕ್ಷಕಿನ್ನರ ಪೂಜಿತ॥
ಪಕ್ಷಿವಾಹನ ಮಿತ್ರಭವಹರ।
ತ್ರ್ಯಕ್ಷಮಾಂ ಪರಿಪಾಲಯ ॥ –ರುಕ್ಮಿಣೀಸ್ವಯಂವರ

ಅಜಪ್ರಾಸ: ಪ್ರಾಸಾಕ್ಷರದ ಪೂರ್ವದಲ್ಲಿ ವಿಸರ್ಗವಿದ್ದರೆ ಅಜಪ್ರಾಸ.

ಅಃಪೊರೆವ ನಿವನೆ ನೃಪತಿಯು ।
ಶಃಪಾತ್ರನೆನಲ್ಕೆ ಜನಮನಿನಿಸಲ ಸದೆಯುಂ।
ಅಃಪೇಟಲದೇನಿವನಿಂ ।
ಸ್ವಃಪದ ವಾಚ್ಯಂ ಸಮಂತು ಮೇಜ಼್ಮೇ ದೇಶಂ ॥
– ಕನ್ನಡ ಕೈಪಿಡಿ

ಕೆಲವು ಪದಗಳಲ್ಲಿ ಶಾಸ್ತ್ರೀಯ ಪದ್ಧತಿಗೆ ವ್ಯತಿರಿಕ್ತವಾದ ವಿಕೃತ

ಪ್ರಾಸಗಳು ಗೋಚರಿಸುವುವು. ಇವುಗಳನ್ನು ಪ್ರಾಸಾಭಾಸಗಳೆಂದು ಪರಿಗಣಿಸಬಹುದು.

ಅಂತ್ಯ ಪ್ರಾಸ

ಒಂದು ಪದ್ಯದ ನಿರ್ದಿಷ್ಟ ಪಾದಗಳ ಅಂತ್ಯ ಸ್ಥಾನಗಳಲ್ಲಿ ಏಕರೂಪದ ಸ್ವರದಿಂದ ಕೂಡಿದ ಏಕ ಪ್ರಕಾರದ ವ್ಯಂಜನಾಕ್ಷರಗಳು ನಿಂತು ಅದರ ಪೂರ್ವ ಸ್ವರಗಳಲ್ಲಿ ಸಾಮ್ಯವಿದ್ದರೆ ಅಂತ್ಯ ಪ್ರಾಸವಾಗುವುದು.

ಸರ್ವಪಾದಾಂತ್ಯ ಪ್ರಾಸ: ಪದ್ಯದ ಎಲ್ಲಾ ಪಾದಗಳಲ್ಲಿಯೂ ಅಂತ್ಯ ಪ್ರಾಸವಿದ್ದರೆ ಸರ್ವಪಾದಾಂತ್ಯ ಪ್ರಾಸ

ತ್ರಾಹಿ ಶಂಕರಿ ಗೌರಿ ಶರಣ ಸಂಸಾರಿ ॥
ಮೋಹಪಾಶವಿದಾರಿ ವಿಮಲಾಪ ತಾರಿ ॥
ಸಾಹಸೋತ್ತಮೆ ಶೂರೆ ದನುಜ ಸಂಹಾರಿ ॥
ಪಾಹಿವಶಾಂ ಪಾರ್ವತಿ ಭೂರಿ ಶೃಂಗಾರಿ ॥ —ರಾಜಸೂಯ

ಉಭಯ ಪಾದಾಂತ್ಯ ಪ್ರಾಸ:– ಪದ್ಯದಲ್ಲಿ ಅನುಕ್ರಮವಾಗಿ ನಿಲ್ಲುವ ಎರಡು ಪಾದಗಳಲ್ಲಿ ಅಂತ್ಯ ಪ್ರಾಸವಿದ್ದರೆ ಉಭಯ ಪಾದಾಂತ್ಯ ಪ್ರಾಸ.

ಎಲೆ ಪಾರ್ಥ ನೀಕೇಳ್ವುದೊಲಿದೆನ್ನ ಮಾತ ॥
ಛಲದಂಕನಹೆ ಸೋಮ ಕುಲಧರ್ಮ ಜಾತ ॥
ನೆಲದಲಿ ಹೂಳಿರ್ದುಮ್ಮಳಿಸಿತು ರಥವು ॥
ಕಲಹಕಾನು ವೊಡೀಗಲಲಸದು ಮತವು ॥ —ಕರ್ಣ ಪರ್ವ

ಸಮಪಾದಾಂತ್ಯ ಪ್ರಾಸ:– ಪದ್ಯದ ಸಮಪಾದಗಳಲ್ಲಿ ಅಂತ್ಯ ಪ್ರಾಸವಿದ್ದರೆ ಸಮಪಾದಾಂತ್ಯ ಪ್ರಾಸ.

ನೀಲಕುಂತಳೆ ಗೀಃಶಾಲೋಲೆ ಮಂಗಲೆ ಭಕ್ತ ।
ಪಾಲೆ ನಿರ್ಜರ ವಂದ್ಯ ಚರಣೇ ॥
ಫಾಲಲೋಚನ ಪ್ರಿಯೆ ಬಾಲೇಂದುಧರೆ ದೈತ್ಯ ।
ಜಾಲಮರ್ದಿನಿ ರತ್ನಾಭರಣೇ ॥ —ಪಾರಿಜಾತ

ವಿಷಮ ಪಾದಾಂತ್ಯ ಪ್ರಾಸ:– ಪದ್ಯದ ವಿಷಮ ಪಾದಗಳಲ್ಲಿ

ಮಾತ್ರವೇ ಅಂತ್ಯ ಪ್ರಾಸವಿದ್ದರೆ ವಿಷಮ ಪಾದಾಂತ್ಯ ಪ್ರಾಸ.

ವಿಧಿ ಸುರಾರ್ಚಿತ ಪಾದ ವಿನತ ಪಾಪವಿದೂರ ।
ಕದನ ವಿಜಿತದೈತ್ಯ ಕಾಕುತ್ಸ್ಥ ತಿಲಕ ॥
ಸದಮಲ ಸರಸ ಪ್ರಸಂಗ ಸಂಗರ ಶೂರ ।
ಮದನ ಜನಕ ಪರಮಾತ್ಮ ಶ್ರೀ ರಾಮ ॥ – ಸಭಾ ಲಕ್ಷಣ

ಪರ್ಯಾಯ ಪಾದಾಂತ್ಯ ಪ್ರಾಸ:– ಪದ್ಯದಲ್ಲಿ ವಿಷಮ ವಿಷಮ ಪಾದಕ್ಕೂ ಸಮ ಸಮ ಪಾದಕ್ಕೂ ಅಂತ್ಯ ಪ್ರಾಸವಿದ್ದರೆ ಪರ್ಯಾಯ ಪಾದಾಂತ್ಯ ಪ್ರಾಸ.

ದುರುಳರ ವರುಥರ ।
ದಿರವರಿವರೆ ಕರಿ ।
ಹರಿಗೆರಗಿದ ತೆರ ।
ನೆರೆ ನೆರೆದರು ಸರಿ ॥ –ಕುಮಾರ ವಿಜಯ

ವಿಶಿಷ್ಟ ಪಾದಾಂತ್ಯ ಪ್ರಾಸ:– ಪದ್ಯದ ಯಾವುದಾದರೂ ಪಾದಗಳಲ್ಲಿ ಅಂತ್ಯ ಪ್ರಾಸವಿದ್ದರೆ ವಿಶಿಷ್ಟ ಪಾದಾಂತ್ಯ ಪ್ರಾಸ.

ಸುರನರೋರಗಲೋಕದೊಳಗೆ ॥ ಧುರಂ । ಧರರು ನೀವ್ ಮರ್ಯಾದೆಯೊಳಗೆ ॥ ಮೆರೆವ ದಿಕ್ಪಾಲರೊಳತಿ ಶ್ರೇಷ್ಠರೆನಿಸುತೀ । ಪರಿಯಿಂದ ನರ ಕನ್ಯೆಗೆ ॥ ನೀವ್ ಮರುಳಾಗಿ । ತೆರಳಿ ತಿರುಕರ ಹಾಗೆ ॥ ಪಲ್ಕಿರಿದರೆ । ಪರಿಹಾಸ್ಯ ನೋಳ್ಪರಿಗೆ ॥ ಚೆಂದಗಳಾಯ್ತು ॥ –ನಳ ಚರಿತ್ರೆ

ಕೆಲವು ಪದಗಳಲ್ಲಿ ಆದಿಪ್ರಾಸವಲ್ಲದೆ ಮಧ್ಯ ಪ್ರಾಸವೂ ಬರುತ್ತದೆ.

ಕೋಮಲಾಂಗನೆ ಸುರ ಕಾಮಿನಿಯಹಾಗಿಹೆ। ನಾಮ ಮೇನಕೆಯೆನುತ ॥
ಕಾಮ ರೂಪನೆ ನಿನ್ನ ಕಾಮಿಸಿ ಬಂದಿಹೆ । ಕಾಮಿತವನು ಸಲಿಸೈ ॥
–ಶಕುಂತಲಾ ಪರಿಣಯ

ಕೆಲವು ಪದಗಳಲ್ಲಿ ಆದಿಪ್ರಾಸ–ಮಧ್ಯಪ್ರಾಸ–ಅಂತ್ಯ ಪ್ರಾಸಗಳು ಬರುವುವು.

ನೀರಲಾಲಿಸಿ ಕೇಳು ನೀರಿಲ್ಲವಲ್ಲ ॥
ನೀರಿಲ್ಲದಿದ್ದರೆ ನೀರಾಟಸಲ್ಲ ॥ –ಕಾರ್ತವೀರ್ಯಾರ್ಜುನ ಕಾಳಗ

ವಡಿ (ವಳಿ)

ಕೆಲವು ಯಕ್ಷಗಾನ ಪದಗಳಲ್ಲಿವಡಿಯು ಪ್ರಯೋಗವು ಗೋಚರಿಸುತ್ತದೆ. ಆದರೆ ಪದ್ಯದಲ್ಲಿ ಪ್ರಾಸದಂತೆ ವಡಿಯಿರಲೇಬೇಕೆಂಬ ನಿರ್ಬಂಧವಿಲ್ಲ. ಒಂದು ಪದ್ಯದ ಪಾದಾದಿಯು ಅಕ್ಷರವಾಗಲಿ - ಅದಕ್ಕೆ ಒಡಂಬಡುವ ನಿಯತಾಕ್ಷರವಾಗಲಿ ಪಾದಮಧ್ಯದಲ್ಲಿ ಯತಿಯ ಅನಂತರ ಬಂದರೆ ವಡಿಯಹಾಗುವುದು,

ಸ್ವರ ಮೈತ್ರಿವಳಿ: ಪಾದದ ಆದಿ ಮಧ್ಯ ಸ್ಥಾನಗಳಲ್ಲಿ ಸ್ವರಾಕ್ಷರ ಗಳಾದ ಅ ಆ ಐ ಔ ಗಳ – ಇ ಈ ಋ ೠ ಎ ಏಗಳ – ಉ ಊ ಒ ಓ ಗಳ ಯಾವುದಾದರೂ ಗುಂಪಿಗೆ ಸೇರಿದ ಎರಡು ಅಕ್ಷರಗಳು ನಿಂತರೆ ಸ್ವರ ಮೈತ್ರಿವಳಿ.

ಆದಿಮಹಾಯಹಾದೇವಿ – ಅಮರಕುಲಸಂಜೀವಿ ‖ –ದೇವೀಮಹಾತ್ಮೆ
ಇನಕುಲೇಂದ್ರನೇ–ಏನು ಭಾವನೆ ‖ –ಶ್ರೀರಾಮಪಟ್ಟಾಭಿಷೇಕ

ಸ್ವರ ಪ್ರಧಾನವಳಿ: ಪಾದಾದಿಯಲ್ಲಿ ಸ್ವರಾಕ್ಷರವಿದ್ದು ಪಾದ ಮಧ್ಯ ದಲ್ಲಿ ವ್ಯಂಜನದೊಂದಿಗೆ ಸೇರಿದ ಸ್ವರಾಕ್ಷರವಿದ್ದರೆ ಸ್ವರ ಪ್ರಧಾನವಳಿ.

ಅಜನರಸಿ ಶಾರದೆಯುನರಿತುಮನ್ನಿಸುತ ‖ –ಕುಶಲವರ ಕಾಳಗ
ಆನರೇಶ್ವರರು ಕಾಶಡವಿಯುಲಿ ಸಂದು ‖ –ಪಂಚವಟಿ ರಾಮಾಯಣ

ಏಕವರ್ಣವಳಿ: ಪಾದಾದಿಯಲ್ಲಿಯೂ ಪಾದ ಮಧ್ಯದಲ್ಲಿಯೂ ಏಕ ರೂಪದ ವರ್ಣವಿದ್ದರೆ ಏಕವರ್ಣವಳಿ.

ರಮಣೀಯತರರೂಪ – ರಕ್ಷಿಸೆನ್ನನುಗಣಪ –ಪುತ್ರಕಾಮೇಷ್ಟಿ
ಮೂಷಿಕ ವಾಹನ ಮೋದಕ ಹಸ್ತ ‖ –ಸಭಾಲಕ್ಷಣ

ವರ್ಗವಳಿ: ಪಾದಾದಿಯಲ್ಲಿ ಅನುನಾಸಿಕವಲ್ಲದ ವರ್ಗೀಯ ವ್ಯಂಜನ ವಿದ್ದು ಪಾದ ಮಧ್ಯದಲ್ಲಿ ಅದೇ ವರ್ಗದ ಬೇರೆ ವ್ಯಂಜನವು ನಿಂತರೆ ವರ್ಗವಳಿ.

ದನುಜಗಜ ಹರ್ಯಕ್ಷ- ಧರ್ಮರಕ್ಷಣ ದಕ್ಷ ‖ –ಹನೂಮದ್ವಿಲಾಸ
ಖಗವಾಹ ಗಂಧರ್ವ–ಗಾನವಿಲೋಲ –ಸಭಾಲಕ್ಷಣ

ಸರಸವಳಿ:– ಪಾದದ ಆದಿ ಮಧ್ಯಸ್ಥಾನಗಳಲ್ಲಿ ನಣಗಳು ನಿಂತರೆ ಅಯಃಹಗಳಲ್ಲಿ ಯಾವುದಾದರೂ ಎರಡು ಅಕ್ಷರವಿದ್ದರೆ, ಚ ಛ ಜ ಝಗಳಲ್ಲಿ

ಯಾವುದಾದರೂ ಒಂದು ಅಕ್ಷರ ಶ ಷ ಸಗಳಲ್ಲಿ ಯಾವುದಾದರೂ ಒಂದು ಅಕ್ಷರ ಬಂದರೆ ಸರಸವಳಿ.

ಅತ್ಯಂತ ಹರ್ಷದಲಿ–**ಹ**ರಿಯಿರಲು ನೋಡಿ ॥ –ಐರಾವತ

ಶಶಿ ನಿಯುತ ಪ್ರಕಾಶ–**ಚಾ**ರು ಹಸ್ತಾಬ್ಜ ಪಾಶ ॥ –ಕುಚೇಲೋಪಾಖ್ಯಾನ

ಸಂಯುಕ್ತಾಕ್ಷರವಳಿ:– ಪಾದದ ಆದಿಯಲ್ಲಿಯಾಗಲಿ ಮಧ್ಯದಲ್ಲಿ ಯಾಗಲಿ ಒಂದು ಸ್ಥಾನದಲ್ಲಿ ಸಂಯುಕ್ತಾಕ್ಷರವಿದ್ದು ಮತ್ತೊಂದು ಸ್ಥಾನದಲ್ಲಿ ಸಂಯುಕ್ತಾಕ್ಷರದ ಯಾವುದಾದರೂ ಒಂದು ವ್ಯಂಜನವು ನಿಂತರೆ ಸಂಯುಕ್ತಾಕ್ಷರವಳಿ.

ಕ್ಷೀರಾಂಬುನಿಧಿಜಾತೆ–**ಕ್ಷೀ**ರಸನ್ನಿಭವಾಣಿ ॥ –ಪಾಂಡವ ವಿಜಯ

ಭಾವಿಪೆಮನದಿ ಸ–**ದ್ಭ**ಕ್ತಿ ಪೂರ್ವಕದಿ ॥ –ಕಾಳಿಯ ಮರ್ದನ

ಅಭೇದವಳಿ:– ಪಾದದ ಆದಿ ಮಧ್ಯಸ್ಥಾನಗಳಲ್ಲಿ ವ ಬಗಳಾಗಲಿ, ಲ ಳಗಳಾಗಲಿ, ಲ ಡಗಳಾಗಲಿ, ರ ಱಗಳಾಗಲಿ ನಿಂತರೆ ಅಭೇದವಳಿ.

ವಿನಯವಾರೊಳು–**ಬಿ**ಟ್ಟು ಪೋಗೆಲಾ ॥ –ಸುಭದ್ರಾ ಕಲ್ಯಾಣ

ಲಯದ ಲಕ್ಷಣವು ತಾ–**ಳಾ**ಂಗ ಲಕ್ಷಣವು ॥ –ಕಾಳಿಯ ಮರ್ದನ

ಕೆಲವು ವಿಶಿಷ್ಟ ಸಂಜ್ಞೆಗಳು

ಅತೀತಾಕ್ಷರ

ಅತೀತ ಗ್ರಹ ಲಕ್ಷಣದ ತಾಳ ನಿಯಮವನ್ನು ಅವಲಂಬಿಸಿರುವ ಗೀತದಲ್ಲಿ ಗಣ ವಿಭಜನೆಗೆ ಸಿಕ್ಕದ ಅಕ್ಷರವು ಪ್ರಾರಂಭದಲ್ಲಿ ಬರುವುದುಂಟು. ಇದನ್ನು ತಾಳ ಘಾತದ ಮೊದಲೇ ಪಠಿಸಬೇಕಾಗಬಹುದು. ಆದುದರಿಂದ ಇದಕ್ಕೆ ಅತೀತಾಕ್ಷರವೆಂದು ಹೆಸರಿಡಬಹುದು.

ಪೂ ರ್ಣೇಂದು ವದನೆ ಕುಂದರದನೆ ಸುಂದರೀ ಮಣೀ ॥

–ವಾಸವದತ್ತಾರತ್ನಾವಳಿ

ವರಣ

ಒಂದು ಪದ್ಯದ ಉಭಯ ಪಾದಗಳ ಮಧ್ಯದಲ್ಲಿ ಅವುಗಳನ್ನು ಜೋಡಿಸುವ ಸೇತುವಿನಂತೆ ನಿಲ್ಲುವ ವಿಭಕ್ತಾಕ್ಷರಗಳ ಛಂದಃ ಖಂಡಕ್ಕೆ ವರಣವೆಂಬ

ಹೆಸರಿದೆ. ಪದದಲ್ಲಿ ವರಣವಿದ್ದರೆ ಅದರ ಪೂರ್ವಪಾದ ಮತ್ತು ಉತ್ತರ ಪಾದಗಳ ಅಂತ್ಯದಲ್ಲಿ ವಿರಾಮಾವಕಾಶವಿರುತ್ತದೆ. ಆದುದರಿಂದ ಪೂರ್ವ ಪಾದದ ಅಂತ್ಯಾಕ್ಷರವನ್ನು ಕರ್ಷಣವಮಾಡಿ ಉಚ್ಚರಿಸಿ ಅನಂತರ ವರಣವನ್ನೂ ಮುಂದಿನ ಪಾದವನ್ನೂ ಓದಬೇಕಾಗುವುದು. ಈ ಪಾದಗಳ ಅಂತ್ಯ ಸ್ಥಾನ ಗಳಲ್ಲಿ ಗುರುವಾಗಲಿ - ದ್ವಿಕಲ ಗುರುವಾಗಲಿ (ಬ್ರಹ್ಮಗಣವಾಗಲಿ) ಪದ್ಯದ ಅನ್ಯಗಣಕ್ಕೆ ಸದೃಶವಾದ ಗಣವಾಗಲಿ ಬರಬಹುದು. ಹೆಚ್ಚಾಗಿ ಈ ಪಾದ ಗಳಲ್ಲಿ ಅಂತ್ಯ ಪ್ರಾಸವೂ ಗೋಚರಿಸುವುದು. ಕೆಲವು ಪದಗಳ ವರಣದಲ್ಲಿ ಇತರ ಗಣಕ್ಕೆ ಸಮಾನವಾದ ನಿಶ್ಚಿತ ಗಣವೇ ಇರುತ್ತದೆ. ಆದರೆ ಕೆಲವು ಪದ ಗಳ ವರಣದಲ್ಲಿ ನಿರ್ದಿಷ್ಟ ಗಣದ ಆದಿಯ ಅಕ್ಷರವು ಲೋಪಗೊಂಡು ಗಣ ವಿಭಜನೆಗೆ ಸರಿಯಾಗಿ ಅಳವಡದ ಮುಂದಿನ ಅಕ್ಷರವು (ಅಕ್ಷರಗಳು) ನಿಲ್ಲುವು ದುಂಟು. ಹಾಗಿದ್ದರೆ ಪಠನಕಾಲದಲ್ಲಿ ನಿರ್ದಿಷ್ಟ ಗಣದ ಲುಪ್ತ ಮಾತ್ರಾಕಾಲ ಪ್ರಮಾಣವನ್ನು ರಾಗಾಲಾಪನದಿಂದಾಗಲಿ - ನಿಶ್ಶಬ್ದ ವಿರಾಮದಿಂದಾಗಲಿ ಪೂರಣ ಮಾಡಿಕೊಂಡು ಅವಶಿಷ್ಟಾಕ್ಷರವನ್ನು ಉಚ್ಚರಿಸಬೇಕಾಗುತ್ತದೆ. ಹೀಗಾಗಿ ಆ ಅಕ್ಷರವನ್ನು (ಅಕ್ಷರಗಳನ್ನು) ಗಣಶೇಷವೆಂದು ಸೂಚಿಸಬಹುದು. ಮಾತ್ರಾಗಣ ಬಂಧಗಳ ವರಣದಲ್ಲಿ ನಿಶ್ಚಿತ ಮಾತ್ರಾ ಪರಿಮಾಣದ ಗಣಶೇಷ ವಿರುವುದರಿಂದ ಮಾತ್ರಾಸಂಖ್ಯೆಯನ್ನು ನಿರೂಪಿಸಲು ಸಾಧ್ಯವಿದೆ. ಅಂಶಿ ಗಣ ಬಂಧಗಳ ವರಣದಲ್ಲಿ ಗಣದ ಮೂಲಾಂಶವು ಲೋಪಗೊಂಡು ಮುಂದಿನ ಅಂಶದ (ಅಂಶಗಳ) ಗಣಶೇಷವು ಬರುವುದರಿಂದ ಗುರು ಲಘು ಭೇದವಿಲ್ಲದೆ ಯಾವ ಅಕ್ಷರವೂ ನಿಲ್ಲಬಹುದು. ಆದುದರಿಂದ ಆ ಗಣ ಶೇಷದಲ್ಲಿ ನಿರ್ದಿಷ್ಟ ಅಕ್ಷರ ಸಂಜ್ಞೆಯನ್ನಾಗಲಿ ನಿಶ್ಚಿತ ಮಾತ್ರಾ ಸಂಖ್ಯೆಯನ್ನಾಗಲಿ ನಿರ್ಧರಿಸಲು ಅಶಕ್ಯವಾಗುವುದು.

ಬ್ರಹ್ಮಗಣ ಪ್ರಧಾನ ಬಂಧಗಳ ವರಣದ ಗಣಶೇಷದಲ್ಲಿ ಒಂದು ಅಕ್ಷರ ಮಾತ್ರವೇ ಬರುವುದು. ವಿಷ್ಣುಗಣ ಪ್ರಧಾನಬಂಧ ಮತ್ತು ರುದ್ರಗಣ ಪ್ರಧಾನಬಂಧಗಳ ವರಣದ ಗಣಶೇಷದಲ್ಲಿ ಒಂದು ಅಕ್ಷರವಾಗಲಿ - ಎರಡು ಅಕ್ಷರಗಳಾಗಲಿ ಬರಬಹುದು. ಇವುಗಳ ವರಣದ ಗಣಶೇಷದಲ್ಲಿ ಒಂದೇ ಅಕ್ಷರ ವಿದ್ದರೆ ಅದನ್ನುಗಣದ ಅಂತ್ಯಾಂಶವೆಂದೂ, ಎರಡು ಅಕ್ಷರಗಳಿದ್ದರೆ ಉಪಾಂ ತ್ಯಾಂಶ ಮತ್ತು ಅಂತ್ಯಾಂಶಗಳೆಂದೂ ಭಾವಿಸಬೇಕಾಗುವುದು. ಕೆಲವು ಪದಗಳ

ವರಣದ ಪ್ರಾರಂಭದಲ್ಲಿ ಲಘು ಗುರುಗಳು ನಿಲ್ಲುವುದುಂಟು. ಆದರೆ ಈ ಅಕ್ಷರ ಯುಗ್ಮವು ಪರಿಪೂರ್ಣಗಣವೆನಿಸುದಿಲ್ಲ. ಪಠನ ಕಾಲದಲ್ಲಿ ಲುಪ್ತವಾದ ಮೂಲಾಂಶವನ್ನು ಪೂರಣ ಮಾಡಿ ಮತ್ತೆ ಈ ಅಕ್ಷರಗಳನ್ನು ಉಚ್ಚರಿಸಬೇಕಾಗುವುದರಿಂದ ಇವುಗಳನ್ನು ಉತ್ತರಾಂಶಗಳ ಗಣಶೇಷವೆಂದು ಎಣಿಸಬೇಕಾಗುವುದು. ಆದುದರಿಂದ ವರಣದಲ್ಲಿ ಆದಿಗೆ ಲಘುವಿದ್ದು ಅನಂತರ ಗುರುನಿಂತರೂ ವಿಲಕ್ಷಣ ಗಣದ ಪ್ರಯೋಗವಾಯಿತೆಂದು ಆಕ್ಷೇಪಿಸುವಂತಿಲ್ಲ. ಅಂಶಿಗಣ ಬಂಧಗಳ ವರಣದಲ್ಲಿ ಬರುವ ಅನಿರ್ದಿಷ್ಟ ರೂಪದ ಗಣಶೇಷದ ಅಕ್ಷರವನ್ನು (ಅಕ್ಷರಗಳನ್ನು) ಶೇಷಾಂಶವೆಂದು ಸೂಚಿಸಬಹುದು.

[ಈ ಪುಸ್ತಕದಲ್ಲಿ ಶೇಷಾಂಶವನ್ನು "ಶೇ" ಎಂಬ ಸಂಕೇತಾಕ್ಷರದಿಂದ ಸೂಚಿಸಲಾಗುವುದು]

ದೃಷ್ಟಾಂತಗಳು:-

ಮಾತ್ರಾಗಣ ಬಂಧಗಳ ವರಣ

```
    ಪ         ಪ    ಗ          ಪ          ಪ
1.  ಬಾಮಗನೆ, ಏಳು ಬೇಗಽ॥ ನಿನಗೊಂದು॥ ಕಾಮಿನಿಯ,
    ಪ    ಗ
    ತೋರ್ಪೆನೀಗ ಽ॥                          –ರಾವಣೋದ್ಭವ

    ಚ        ಚ       ದ್ವಿ ಗ      ದ್ವಿ      ಚ        ಚ
2.  ಎಲವೋ, ಮಘವನ, ಮಗ, ನೇಽ॥ - ನೀ। ಕಲಹದಿ, ಬಲುಸಹ,
    ದ್ವಿ
    ಸಿಗನೇಽ॥                            –ದ್ರೌಪದೀ ಪ್ರತಾಪ

    ತ್ರಿ     ತ್ರಿ     ತ್ರಿ   ಗ    ಗ   ತ್ರಿ  ತ್ರಿ     ತ್ರಿ     ತ್ರಿ
3.  ಯತಿಕು,ಲಾಬ್ಜ, ಭಾಸ್ಕ, ರಽ॥ ಸಂ, ರಕ್ಷಿ,ಸಯ್ಯ। ದಯದೊ, ಳೆಮ್ಮ,
    ತ್ರಿ     ತ್ರಿ   ಗ
    ನಿಂದು, ಶುಭಕ, ರ ಽ॥                    –ವೃತ್ರಾಸುರಕಾಳಗ

    ತ್ರಿ    ಚ          ತ್ರಿ      ಚ         ಗ     ದ್ವಿ ತ್ರಿ       ಚ
4.  ಚಿತ್ತ, ವಿಸು ಕುರು, ಸತ್ತ, ಮನೆನುಡಿ,ಯ ಽ॥ ನಾ, ನೀಗ, ನಿನ್ನೊಳು।
    ತ್ರಿ    ಚ          ತ್ರಿ      ಚ         ಗ
    ಚಿತ್ತ, ರಿಪೆ ಭೂ, ಪೋತ್ತ, ಮನ ಪರಿ, ಯ ಽ॥        –ರಾಜಸೂಯ
```

ಅಂಶಿಗಣ ಬಂಧಗಳ ವರಣ

ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ
1. ಲಾಲಿ, ಸಯ್ಯಾ, ಚೋಳ, ದೇಶ, ಭೂಮಿ, ಪಾಲಾ ॥ ನಮ್ಮ ।
ಬ್ರ ಬ್ರ ಬ್ರ ಬ್ರ ಬ್ರ ಬ್ರ
ಮೇಲೆ. ಕೋಪ, ತಾಳ, ಲೇ ಕೈ, ಭೂಮಿ, ಪಾಲಾ ॥

–ಪದ್ಮಾವತೀಕಲ್ಯಾಣ

ವಿ ವಿ ವಿ ಶೇ ವಿ ವಿ
2. ತಾಳು ತಾ, ಳೆಲೆ ಪಾಕ,- ಶಾಸನ ॥ ನಾ । ಪೇಳುವ, ನುಡಿಕಾರ್ಯ,
ವಿ
ಸಾಧನ ॥

–ವಾಮನ ಚರಿತ್ರೆ

ವಿ ವಿ ಬ್ರ ಶೇ ವಿ
3. ಇವಳಾವ, ಲೋಕದ, ಸತಿಯೋ? ॥ – ಮತ್ತೀ । ಯುವತಿಯು,
ವಿ ವಿ ಬ್ರ
ಪಡೆದವ, ಳೇನ್ ಪುಣ್ಯ, ವತಿಯೋ ? ॥

–ಕೀಚಕವಧೆ

ವಿ ವಿ ಗ ಗ ವಿ ವಿ
4. ನೋಡು ದೇ, ವರ ದೇವ, ನ ॥ ಪಾ, ರ್ವತಿಯೊಡ । ಗೂಡಿದ,
ವಿ ಗ
ಪರಶಿವ, ನ ॥

–ಸಭಾಲಕ್ಷಣ

ವಿ ಶೇ ವಿ ವಿ ವಿ
9. ನೋಡಿರೋ ॥ ದಿಗಂ,ಬರ ಧೂರ್ಜ,ಟಿಯನು ಕೊ । ಂಡಾಡಿರೋ ॥

–ಕುಮಾರವಿಜಯ

ಅನುಪದ

ಪದ್ಯಗಳ ಪ್ರತಿ ಪಾದಾಂತ್ಯದಲ್ಲಿಯೂ ಮರಳಿ ಬರುವ ಏಕ ಪದವನ್ನು ಅನುಪದವೆಂದು ಹೇಳಬಹುದು.

ಅಂಬುಜಾಸನನ ಪಟ್ಟದ ರಾಣಿ ಫಣಿವೇಣಿ ॥ **ಶಾರದಾಂಬಾ** ॥
ಕಂಬುಕಂಧರೆ ಲೋಕ ಪಾಲಿನಿ ಗುಣ ಶ್ರೇಣಿ ॥ **ಶಾರದಾಂಬಾ** ॥

–ಘಟೋತ್ಕಚ ಕಾಳಗ

ಶಿಖಾಪದ

ಗೀತಗಳ ಅಂತ್ಯ ಭಾಗದಲ್ಲಿ ಬರುವ ವಿಭಕ್ತ ಪದಕ್ಕೆ ಶಿಖಾಪದವೆಂಬು ಹೆಸರಿಡಬಹುದು.

ಶ್ರೀ ಗಣಪ ಗಿರಿರಾಜೆಯಾತ್ಮಜ । ಯೋಗಿನುತಪದ ಪಂಕಜ ॥

ನಾಗ ಭೂಷಣ ಸುತಗುಹಾಗ್ರಜ । ನಾಗವದನ ಚತುರ್ಭುಜ ॥

–ಅತಿಕಾಯ ಕಾಳಗ

ಶರಣು ಶರಣುಽ ॥

ಕೆಲವು ಪದಗಳಲ್ಲಿ ಅನೇಕ ಶಿಖಾಪದಗಳು ಇರುತ್ತವೆ.

ಎತ್ತಗಮನವಿದು ಚಿತ್ತರಿಸೈ ಮುನಿಪೋತ್ತಮ ಗುಣಸಾರಽ ॥

ಸುವಿಚಾರಽ ॥ ದಯದೋರಽ ॥ ಕೀರ್ತಿ ವಿಹಾರಽ ॥

–ದ್ರೌಪದೀ ಪ್ರತಾಪ

ಪಲ್ಲವಿ–ಅನುಪಲ್ಲವಿ–ಚರಣ (ಸೊಲ್ಲು; ನುಡಿ) ಸಂಗೀತದಲ್ಲಿ ಗಾನಕ್ಕೆ ಸಹಜವಾಗಿ ಒಡಂಬಡುವ ರಾಗ ತಾಳ ಬದ್ಧವಾದ ಛಂದೋಬಂಧಕ್ಕೆ ಪದವೆಂಬ ಸಂಜ್ಞೆಯನ್ನು ಬಳಸುವ ಸಂಪ್ರದಾಯವಿದೆ. ಕೆಲವು ಪದಗಳಲ್ಲಿ ಪಲ್ಲವಿ ಅನುಪಲ್ಲವಿಗಳು ಚರಣ ಭಾಗದ ಪೂರ್ವದಲ್ಲಿ ಬರುತ್ತವೆ. ಅಂತಹ ಚೆಲುವನೇನೇ ॥ ಶ್ರೀರಂಗನು । ಅಂತಹ ಮಹಿಮನೇನೇ ॥ ಪಲ್ಲವಿ ॥ ಕಾಂತೆ ನೀ ನುಡಿಜಾಣೆ ಎಂತು ದೊರಕುವನೋ ॥ ಅನುಪಲ್ಲವಿ ॥ ತುರುಚೆ ಗಿಡದವೊಲೆನ್ನ ॥ ಬಾಳುವೆಯಾಯ್ತು । ಅರಿಯದೆ ನಾನು ಮುನ್ನ ॥ ಪರತರ ವಸ್ತು ತಾನಾಗಿ ಸಿಕ್ಕಿದುದನ್ನು । ದುರುಳತನದಿ ಬೈದು ಭರದಿ ಭಂಗಿಸಿದೆನು ॥

–ಚಂದ್ರಾವಳೀ ವಿಲಾಸ

ಇದರಲ್ಲಿ ಪಲ್ಲವಿ–ಅನುಪಲ್ಲವಿ–ಚರಣಗಳಿವೆ.

ಮಂಗಳಾರತಿ ಪಾಡಿರೇ ॥ ಅಂಗನೆಯರು । ಮಂಗಳಾರತಿ ಪಾಡಿರೇ, ॥ ಪಲ್ಲವಿ ॥ ಮಂಗಳಾರತಿ ಕುರುಪುಂಗವ ಪಾರ್ಥಗೆ । ಅಂಗಜ ಪಿತ ಮೋಹನಾಂಗ ಶ್ರೀ ಕೃಷ್ಣಗೆ ॥ –ದ್ರೋಣ ಪರ್ವ

ಇದರಲ್ಲಿ ಪಲ್ಲವಿ–ಚರಣಗಳಿವೆ. ಅನು ಪಲ್ಲವಿ ಇಲ್ಲ.

ಬಿಡು ಬಿಡು ಶೋಕವ ನುಡಿಯುನು ಲಾಲಿಸು । ಪೊಡವಿಪ ಕೌರವನೇ ॥
ಹುಡುಗನು ಪಾಂಡವರೊಡಗೂಡಲು ನಾ। ಬಿಡೆ ನಿನ್ನಯ ಪಡೆಯು ॥
-ಕೃಷ್ಣ ಸಂಧಾನ

ಇದರಲ್ಲಿ ಚರಣ ಮಾತ್ರವೇ ಇದೆ. ಪಲ್ಲವಿ-ಅನುಪಲ್ಲವಿಗಳಿಲ್ಲ.

ಸಮವೃತ್ತಗಳು

ಸಮವೃತ್ತದ ಪ್ರತಿ ಪಾದದಲ್ಲಿಯೂ ಸಮಾನ ರೀತಿಯ ಗುರು ಲಘು ವಿನ್ಯಾಸವಿರುತ್ತದೆ. ಇವುಗಳ ಲಕ್ಷಣವನ್ನು ಅಕ್ಷರ ಗಣಗಳಾಗಿ ವಿಭಜಿಸಿ ಸೂಚಿಸಲಾಗುವುದು.

ಶಾರ್ದೂಲವಿಕ್ರೀಡಿತವೃತ್ತ –ಮ ಸಜಸತತಗ- ೧೨ನೆಯ ಅಕ್ಷರದಲ್ಲಿ ಯತಿ.

ಶ್ರೀಕಾಂತಂ,ಶ್ರುತಿಸಂ, ಸ್ತುತಂ ಸ್ಮ, ರಪಿತಂ,-ಶ್ರೀಕಂಠ, ಸನ್ಮಾ ನಿ,ತಂ।
ನಾಕಾಧೀಶ್ವರ ವಂದಿತಂ ಯತಿನುತಂ–ವೈಕುಂಟ ಲೋಕಾಶ್ರಿತಂ ।
ರಾಕೇಂದುದ್ಯುತಿರಾಜಿತಂ ವಿಲಸಿತಂ–ಕಾಕೋದರೇಂದ್ರಾಂಚಿತಂ ।
ಲೋಕೇಶಾರ್ಚಿತಮಚ್ಯುತಂ ಗುಣಯುತಂ–ಲೋಕೈಕನಾಥಂಭಜೇ ॥
–ದುರ್ಯೋಧನ ವಧೆ

ಮತ್ತೇಭವಿಕ್ರೀಡಿತವೃತ್ತ- ಸಭರನ ಮಯಲಗ–೧೪ನೆಯ ಅಕ್ಷರದಲ್ಲಿ ಯತಿ.

ಸುರಮೌ,ನೀಂದ್ರನ, ನೀಕ್ಷಿಸು, ತ್ತ ಛರ, ಣೀ–ಪಾಲೇಂ, ದ್ರ ಧರ್ಮಾ, ತ್ಮ, ಜಂ ।

ಕರೆತಂದರ್ಚಿಸಿ ಪಾದಪದ್ಮಯುಗಮಂ–ಮೆಯ್ಯಿಕ್ಕಿ ಸದ್ಭಕ್ತಿಯಿಂ ।
ದೆರಗಲ್‌ದತ್ತ ಸು ಪೀಠವೇರಿ ಬಳಿಕಂ-ಕುಳ್ಳಿರ್ದು ಮೌನೀಶ್ವರಂ ।
ವರಮಂದಸ್ಮಿತನಾಗಿ ಭೂಮಿಪತಿಯೊಳ್-ಸಂಪ್ರೀತಿಯಿಂ ಪೇಳಿದಂ॥
–ಸುಭದ್ರಾ ಕಲ್ಯಾಣ

ಉತ್ಪಲಮಾಲಾವೃತ್ತ–ಭರನಸಭ ಭರಲಗ– ೧೦ನೆಯ ಅಕ್ಷರದಲ್ಲಿ ಯತಿ.

ಶ್ರೀಧರ, ಪದ್ಮನಾ, ಭ ಮುರ, ಲೀ-ಧರ, ನಾರದ, ಗಾನಲೋ, ಲ, ಸ।
ದ್ಮೂಭಧರ ದೈತ್ಯಲೋಕ ವಸುಧಾ-ಧರ ವಜ್ರಖಿಗೇಂದ್ರ ವಾಹಧಾ।
ರಾಧರ ವರ್ಣಚಾರು ಮಧುರಾ-ಧರ ಮೋಹನ ರೂಪ ಗಂ।
ಗಾಧರ ಮಿತ್ರ ಪಾಲಿಸು ಗದಾ-ಧರ ಕೃಷ್ಣ ದಯಾಪಯೋನಿಧೇ॥

–ಕಾಳಿಯ ಮರ್ದನ

ಚಂಪಕ ಮಾಲಾವೃತ್ತ–ನಜಭಜಜಲ–೧೧ನೆಯ ಅಕ್ಷರದಲ್ಲಿ ಯತಿ
ಸುರ ದನು, ಜಾ ಳಿಮಂ, ದಿ ತಮ, ನೋ-ಹರ, ಪಾದಪ, ಯೋಜ
ರಂ. ಜಿ, ತೇ।
ಪುರಮಥನಾಂಕ ಪೀಠ ಪರಿಸಂ-ಸ್ಥಿತೆ ಭಕ್ತಸುರಾವನೀರುಹೇ।
ನಿರುಪಮೆ ಚಂಡ ಮುಂಡ ಪರಿಮ-ರ್ದಿನಿ ಕಾಳಿಯೆ ದೀನ ರಕ್ಷಿಣೀ।
ಪರಕರುಣಾಂಬುರಾಶಿನಲಿದೀ-ಕ್ಷಿಸಿ ಪಾಲಿಪುದೆನ್ನ ನಂಬಿಕೇ॥

–ನಳಕೂಬರ ವಿಲಾಸ

ಸ್ರಗ್ಧರಾವೃತ್ತ–ಮರಭನಯಯಯ–೭, ೭ರಲ್ಲಿ ಯತಿ.
ಶ್ರೀಮದ್ವೈ, ಕುಂಠಮಾ, ಸಂ-ಸುರ, ತತಿವಿ, ನುತಂ-ಶಂ, ಭುಮಿತ್ರಂ,
ಪವಿತ್ರಂ।
ರಾಮಂ ಮಾರೀಚಮುಖ್ಯಾ ಮರರಿಪು ಮಥನಂ ಕಂಸನಾಶಂ ಪರೇಶಂ।
ಹೇಮಾಕ್ಷಘ್ನಂ ಬುಧೇಂದ್ರಂ ಖಳಕುಲಹನನಂ ಕಾಮತಾತಂ ಶುಭಾಂಗಂ।
ಭೀಮಂ ದೈತ್ಯಾಳಿ ಭೀಮಂ ರವಿಶಶಿನಯನಂ ಕಾಗೆ ನಮ್ಮಂರಮೇಶಂ॥

–ರಾಜ ಸೂಯ

ಮಹಾಸ್ರಗ್ಧರಾವೃತ್ತ–ಸತತನಸರರಗ–೮–೭ರಲ್ಲಿ ಯತಿ.
ವರಭಾ, ವಜ್ಞಂ ರ, ಸಜ್ಞಂರ, ಸಿಕಜ, ನನುತಂ,-ಸರ್ವಭಾ, ಷಾಪ್ರಮೀ, ಣಂ।
ಸ್ಥಿರಧೈರ್ಯಂ ಖ್ಯಾತ ಶೌರ್ಯಂ ನಿಯಮಿತ ವಚನಂ ಕೀರ್ತಿ ಕಾಂತಾ
ಸಮೇತಂ।
ಸ್ಮರರೂಪಂ ಮುಕ್ತಕೋಪಂ ವಿಮಲ ಗುಣಯುತಂ ಸತ್ಯ ಧರ್ಮಂ
ಸುಶೀಲಂ।
ವರಕಾರುಣ್ಯಂ ಶರಣ್ಯಂ ಬುಧಜನಕುಮುದಾನಂದ ಚಂದ್ರಂ ಸಭೇಂದ್ರಂ॥

–ಸಭಾ ಲಕ್ಷಣ

ಮಾಲಿನೀವೃತ್ತ–ನನಮಯಯ–೮ನೆಯ ಅಕ್ಷರದಲ್ಲಿ ಯತಿ

ಸರಸಿ, ಜದಳ, ನೇತ್ರಂ-ಚಾ, ರು ವಕ್ತ್ರಂ, ಪವಿತ್ರಂ।
ಸುರಜನಪರಿಪಾಲಂ ದೈತ್ಯಕಾಲಂ ಸುಶೀಲಂ ।
ವರ ಮುನಿ ಜನವಂದ್ಯಂ ಸತ್ಯ ಸಂಧಂ ಮುಕುಂದಂ ।
ಸುರುಚಿರತನು ಭಾಸಂ ರಾಘವೇಶಂ ಮಹೀಶಂ ॥

–ರಾವಣ ವಧೆ

ಮಲ್ಲಿಕಾಮಾಲಾ ವೃತ್ತ–ರಸಜಜಭರ–೮, ೫ರಲ್ಲಿ ಯತಿ

ಮಂಗಳಾ, ಶ್ರಯೆಬಾ, ಮಹೋ-ದ, ಯೆ ಬಾಮ, ಹಾ-ಶಯೆ, ಬಾವೃತಾ ।
ಭಂಗಿತಾಂಗಿಯೆ ಬಾ ಮುದಾನ್ವಿತೆ ಬಾ ಮೃದುಸ್ಮಿತೆ ಬಾ ಗುಣೋ ।
ತ್ತುಂಗರಂಜಿತೆ ಬಾ ಜನಸ್ತುತೆ ಬಾ ಯಶೋನ್ನತೆ ಬಾರೆನು ।
ತ್ತಂಗಜಂ ಮಗನಂಬು ಜಾನಿಸಲಂಗನಾಮಣಿ ಯೆಯ್ದಿದಳ್ ॥

–ಧ್ರುವ ಚರಿತ್ರೆ

ಭುಜಂಗ ವಿಜೃಂಭಿತ ವೃತ್ತ–ಮಮತನನನರಸಲಗ ೮, ೧೧ರಲ್ಲಿ ಯತಿ.

ಆವಂಶ್ರೀ, ಮತ್ಸೀತಾ, ರಾಮಂ-ದ, ಶರಥ, ನರಪ, ತಿಸುಕು, ಮಾ,ರ ನಾ, ರ್ಯ ಕುಲೋ, ತ್ತ, ಮಂ ।

ಆವಂಮಾನ್ಯಂ, ದೇವಾಗ್ರೇಯಂಜನಕಸುತೆಯ ಮುಖ ಮುಕುರಂ ಕಕುತ್ಸ್ಥನರೇಶ್ವರಂ ।

ಆವಂದೀನಾನಾಥೋದ್ಧಾರಂ ಮೊಳಡಿಯ ಶಬರಿಯ ಕರಿಯಂ ವಿಲಾಸದೆ ಕಾದವಂ ।

ಆವಂಶ್ರೀ ರಾಮಾಭಿಖ್ಯಾತಂ ಸುರನರವನಚರ ಗಣ ಸೇವ್ಯನೀಗೆ ಸುಶ್ರೇಯಮಂ,

–ವಾಲಿ ಸುಗ್ರೀವ ಕಾಳಗ

ಕಂದ

ಕಂದದ ವಿಷಮ ಪಾದಗಳಲ್ಲಿ ಮೂರು ಚತುರ್ಮಾತ್ರಾ ಗಣಗಳೂ ಸಮಪಾದಗಳಲ್ಲಿ ಐದು ಚತುರ್ಮಾತ್ರಾ ಗಣಗಳೂ ಪ್ರತಿಯೊಂದರಲ್ಲಿಯೂ

ಬರಬೇಕು. ಪದ್ಯಾರ್ಧದ ಷಷ್ಠಸ್ಥಾನದಲ್ಲಿ ಜಗಣ (ಲಘು ಗುರು ಲಘು)ವಾಗಲಿ ನಾಲ್ಕು ಲಘುಗಳಾಗಲಿ ಇರಬೇಕು. ಅಷ್ಟಮ ಸ್ಥಾನದಲ್ಲಿ ಗುರ್ವಂತ ಚತುರ್ಮಾತ್ರಾ ಗಣವು ನಿಲ್ಲಬೇಕು. ವಿಷಮ ಸ್ಥಾನಗಳಲ್ಲಿ ಜಗಣವು ಬರಕೂಡದು. ಷಷ್ಠ ಸ್ಥಾನದಲ್ಲಿ ನಾಲ್ಕು ಲಘುಗಳು ಬರುವುದಾದರೆ ಪ್ರಥಮಾಕ್ಷರದ ಅನಂತರದಲ್ಲಿ ಯತಿಯಿರಬೇಕು. ಸಪ್ತಮ ಸ್ಥಾನದಲ್ಲಿ ನಾಲ್ಕು ಲಘುಗಳು ಬರುವುದಾದರೆ ಷಷ್ಠ ಸ್ಥಾನದ ಅಂತ್ಯದಲ್ಲಿ ಯತಿ ಬರಬೇಕು.

ಹರಪು, ತ್ರಂಗಜ, ವಕ್ತ್ರಂ ।
ಹರಿಮಿ, ತ್ರಂ ವಾ, ಸವಾದಿ, ದಿವಿಜ, ಸ್ತೋತ್ರಂ ।
ಸ್ಥಿರತೋ, ಷ ನುರಗ, ಭೂಷಂ ।
ಕರುಣದೊ, ಳೆ ಮಗೀ, ಗೆ ಸುಮತಿ, ಯಂ ವಿ. ಘ್ನೇಶಂ ॥

—ಇಂದ್ರ ಕೀಲಕ

ಕೆಲವು ಯಕ್ಷಗಾನ ಕೃತಿಗಳಲ್ಲಿ ಈ ನಿಯಮಕ್ಕೆ ಬಾಹಿರವಾದ ಕಂದಗಳು ಗೋಚರಿಸುತ್ತವೆ. ಆದರೆ ವಿಲಕ್ಷಣವಾದ ಕಂದವನ್ನು ಬರೆಯುವುದು ಉಚಿತವಲ್ಲ.

ಆರ್ಯೆ

ಆರ್ಯೆಯ ಪ್ರಥಮ ಪಾದದ ಮೂರು ಚತುರ್ಮಾತ್ರಾ ಗಣಗಳಿರಬೇಕು ದ್ವಿತೀಯ ಪಾದದಲ್ಲಿ ನಾಲ್ಕು ಚತುರ್ಮಾತ್ರಾ ಗಣಗಳೂ ಗುರುವೂ ಬರಬೇಕು. ಈ ಪೂರ್ವಾರ್ಧದ ಷಷ್ಠ ಸ್ಥಾನದಲ್ಲಿ ಜಗಣ ಅಥವಾ ನಾಲ್ಕು ಲಘುಗಳು ಇರಬೇಕು. ತೃತೀಯ ಪಾದದಲ್ಲಿ ಮೂರು ಚತುರ್ಮಾತ್ರಾ ಗಣಗಳು ಬರಬೇಕು. ಚತುರ್ಥಪಾದದಲ್ಲಿ ಅನುಕ್ರಮವಾಗಿ ಎರಡು ಚತುರ್ಮಾತ್ರಾ ಗಣಗಳೂ ಒಂದು ಲಘುವೂ ಒಂದು ಚತುರ್ಮಾತ್ರಾ ಗಣವೂ ಒಂದು ಗುರುವೂ ಇರಬೇಕು. ಈ ಪದ್ಯದ ವಿಷಮ ಸ್ಥಾನಗಳಲ್ಲಿ ಜಗಣವು ಬರಕೂಡದು. ಪೂರ್ವಾರ್ಧದ ಷಷ್ಠಸ್ಥಾನದಲ್ಲಿ ನಾಲ್ಕು ಲಘುಗಳಿದ್ದರೆ ಪ್ರಥಮಾಕ್ಷರದ ಅನಂತರ ಯತಿ ನಿಲ್ಲಬೇಕು. ಸಪ್ತಮ ಸ್ಥಾನದಲ್ಲಿ ನಾಲ್ಕು ಲಘುಗಳಿದ್ದರೆ ಷಷ್ಠಸ್ಥಾನದ ಅಂತ್ಯಕ್ಕೆ ಯತಿ ಬರಬೇಕು. ಉತ್ತರಾರ್ಧದ ಪಂಚಮ ಸ್ಥಾನದಲ್ಲಿ ನಾಲ್ಕು ಲಘುಗಳಿದ್ದರೆ ಚತುರ್ಥ ಸ್ಥಾನದ ಅಂತ್ಯಕ್ಕೆ ಯತಿ ಇರಬೇಕು.

ತದನಂ, ತರ ದೊಳ, ಗಾಮುನಿ ।

ಸದನದೊ, ಳಾದುದು, ಸಮಸ್ತ, ಜನ ಕಶ, ನಂ ॥
ಸುದತಿ ಶ, ಕುಂತಳೆ, ತಾಪಸ ।
ವಧುಗಳ, ಬೀಳ್ಗೊಂ, ಡು, ಪಿತಗೆಂ,ದಳ್ ॥ —ದುಷ್ಯಂತ ಚರಿತ್ರೆ

ರಗಳೆಗಳು

ಕೆಲವು ಪ್ರಾಚೀನ ಯಕ್ಷಗಾನ ಕೃತಿಗಳಲ್ಲಿ ರಗಳೆಗಳು ಗೋಚರಿಸುತ್ತವೆ. ಈಗ ಇವು ಸತಾಳ ಬಂಧಗಳಾಗಿ ಯಕ್ಷಗಾನ ಪ್ರಬಂಧಗಳಲ್ಲಿ ಪ್ರಯೋಗಿಸಲ್ಪಡುವುವು. ರಗಳೆಗಳಲ್ಲಿ ಸಮಾನ ಮಾತ್ರಾ ಗಣಗಳಿರುವ ಪಾದ ದ್ವಂದ್ವಗಳ ಸಮೂಹವಿರುತ್ತದೆ, ಇವುಗಳಲ್ಲಿ ಪ್ರಥಮ ಲಘು ದ್ವಿತೀಯ ಗುರುವಿರುವ ಲಘುಗುರು ಗಣ– ಲಘುಗುರು ಲಘುಗಣ– ಲಘುಗುರು ಗುರುಗಣ– ಲಘುಗುರು ಲಘು ಲಘುಗಣಗಳು ಬರುವುದಿಲ್ಲ.

ಲಲಿತ ರಗಳೆ:- ೪ ಪಂಚ ಮಾತ್ರಾ ಗಣ । ... . ॥
ಅರಳಿದಂ, ಬುಜಮುಸೇ, ವಂತಿಗೆಯು, ಪುನ್ನಾಗ ।
ಸುರಗಿಪಾ, ದರಿ ಪುಷ್ಪ, ವೆಸೆಯುತಿರೆ, ಬಲುಬೇಗ ॥ .... ॥
—ಸಾನಂದ ಗಣೇಶ್ವರ ಕಥೆ

ಮಂದಾನಿಲ ರಗಳೆ:– ೪ ಚತುರ್ಮಾತ್ರಾ ಗಣ । .... ॥
ಶ್ರೀಮ, ದ್ರಘುಕುಲ, ನಾಯಕ, ಜಯಜಯ ।
ಕಾಮಿತ, ಶುಭಫಲ, ದಾಯಕ, ಜಯಜಯ ॥
—ಹನುಮದ್ವಿಲಾಸ

ಉತ್ಸಾಹ ರಗಳೆ:– ೪ ತ್ರಿಮಾತ್ರಾ ಗಣ । .... ॥
ಮಹೋತ್ಸಾಹ ರಗಳೆ:– ೮ ತ್ರಿಮಾತ್ರಾ ಗಣ । .... ॥
ಚೆಂಡ, ಬಲರು, ಕೇಳಿ, ಹೀಗೆ ।
ಖಂಡ, ರಾದ, ಮೌನಿ, ತತಿಗೆ ॥–
ದಂಡ, ನೆಯನು, ಗೆಯ್ವ, ಬಗೆಗೆ ।
ಕಂಡ, ಪುದುವಿ, ನೋಡ, ವೆನಗೆ ॥ —ಬ್ರಹ್ಮಕಪಾಲ

ಈ ಪದದ ಅರ್ಧ ಭಾಗವು ಉತ್ಸಾಹ ರಗಳೆಗೂ ಪರಿಪೂರ್ಣ ಪದವು ಮಹೋತ್ಸಾಹ ರಗಳೆಗೂ ನಿದರ್ಶನವಾಗುವುದು.

ದ್ವಿಪದಿ– ಪ ಪ ಪ ದ್ವಿಗ ।–॥

ರಾವಣಾಯು, ಣಾಮೃತವು, ರಮಣೀಯು, ತರವು ಽ ॥
ಭಾಮಿನೀ, ಮಣಿಕೇಳು, ಬಹುಸೌಖ್ಯ, ಕರವು ಽ ॥ –ಪುತ್ರಕಾಮೇಷ್ಟಿ

ಪ್ರಾಚೀನ ಯಕ್ಷಗಾನ ಕೃತಿಗಳಲ್ಲಿ ತೆಲುಗಿನ ದ್ವಿಪದದಂತೆ ಅಂಶಿಗಣ ಬದ್ಧ ದ್ವಿಪದಗಳು ಗೋಚರಿಸುತ್ತವೆ. ಈ ದ್ವಿಪದಗಳಲ್ಲಿ ವಿಷ್ಣುಗಣ ವರ್ಗದ ಪ್ರಥಮ ದ್ವಿತೀಯ ಭೇದಗಳೂ ಬ್ರಹ್ಮಗಣ ವರ್ಗದ ಪ್ರಥಮ ಭೇದವೂ ಹೆಚ್ಚಾಗಿ ಬರುವುದಿಲ್ಲ.

ದ್ವಿಪದ– ವಿ ವಿ ವಿ ಬ್ರ ।–॥

ಮಂಜುಳಾ, ನನೆ ನೀನು, ಮಾಧವ, ನಾದ ॥
ಕಂಜನಾ, ಭವಗುಣಂ, ಗಳನುವ, ರ್ಣಿಸಿದೆ ॥ –ಕುಚೇಲೋಪಾಖ್ಯಾನ

ಸೀಸಪದ್ಯ

ತೆಲುಗಿನಲ್ಲಿ ಸೀಸಪದ್ಯವು ಬಹಳ ಪ್ರಚಾರದಲ್ಲಿದೆ. ಇದರಲ್ಲಿ ವಿಷ್ಣುಗಣ ವರ್ಗದ ಪ್ರಥಮ ದ್ವಿತೀಯ ಭೇದಗಳೂಬ್ರಹ್ಮಗಣ ವರ್ಗದ ಪ್ರಥಮ ಭೇದವೂ ಹೆಚ್ಚಾಗಿ ಬರುವುದಿಲ್ಲ. ಈ ಪದ್ಯದಲ್ಲಿ ಪ್ರಾಸವಿರಲೇಬೇಕೆಂಬ ನಿರ್ಬಂಧವಿಲ್ಲ. ಪ್ರತಿ ಪಾದದ ವಿಷಮಗಣಗಳಲ್ಲಿ ಪ್ರಾಸವಾಗಲಿ ವಡಿಯಾಗಲಿ ಬರುತ್ತದೆ.

ವಿ ವಿ ವಿ ವಿ ವಿ ವಿ
ಶ್ರೀಮದ್ರ, ಮಾಧೀಶ, ಕೋಮಲಾಂ, ಗಪರೇಶ, ಜಲಜಾಯು, ತಾಕ್ಷವಿ,
ಬ್ರ ಬ್ರ
ಶಾಲ, ವಕ್ಷ ॥

ದೂರ್ವಾದ, ಳ ಶ್ಯಾಮ, ಪೂರ್ವಾವ, ರವಿರಾಮ, ಸುರಲೋಕ, ಪಾಲಭಾ, ಸುರ ಕ, ಪೋಲ ॥

ವೈಕುಂಠ, ನಿಜಧಾಮ, ಗೋಕುಲಾ, ರ್ಣವ ಸೋಮ, ಖಗರಾಜ, ಯಾನಪ, ನ್ನಗ ಶ, ಯನ ॥

ಭವಬಂಧ, ನ ವಿದಾರ, ಭಕ್ತ ಕು, ಲೋದ್ಧಾ ರ,ಕುಂಜರ, ಪರಿತೋಷ, ಗೋಪ, ವೇಷ ॥

ಬ್ರ ಏ ಏ ಬ್ರ ಬ್ರ
ಪರಮ, ಪಾವನ, ಗೋವಿಂದ, ಹರಿ ಮು, ಕುಂದ ॥
ತೋರು, ನಿನ್ನ ಶು, ಭಾಕಾರ, ದುರಿತ, ದೂರ ॥
ಕಾಣ, ದಿರಲಾರೆ, ನಾನಿನ್ನ, ವರ್ಣ, ದೆನ್ನ ॥
ರಕ್ಷಿ, ಸೈಯಿಂದು, ಬಂದು ಕಾ, ರುಣ್ಯ, ಸಿಂಧು ॥ –ಕಾಳಿಯಮರ್ದನ

ಕೆಲವು ಯಕ್ಷಗಾನ ಕೃತಿಗಳಲ್ಲಿ ಮಾತ್ರಾಗಣಬದ್ಧವಾದ ಸೀಸಪದ್ಯವು ಗೋಚರಿಸುತ್ತದೆ.

ಪ ಪ ಪ ಪ ಪ
ಕರುಣಾಳು, ನೀನೆನ್ನ, ತೊರೆದು ಪೋ, ಗಲು ಮುನ್ನ, ಬರುವುದೇ?,
ಪ ತ್ರಿ ದ್ವಿ ಗ
ಮನವಶಸ, ಪರಮು, ಪುರು, ಷ ऽ ॥

ಕೊರ ಗಿಬಂ, ದರಸಿಯುನು, ತರುಣನಾ, ಗಿಹ ನೀನು, ಮರೆತುಪೋ, ಪುದೆ? ಭೂಪ, ಮಾರ, ರೂ, ಪ ऽ ॥

ಸರಸದಿಂ, ನಗೆಬೀರಿ, ಗುರುಕುಚವ, ಬಳಿಸಾರಿ,ಕರದಿಪಿಡಿ,ಯುತವಿೂರಿ, ಕಲೆಯ, ತೋ, ರಿ ऽ ॥

ಸ್ಮರನ ಯು, ದ್ಧದೊಳೊಪ್ಪಿ, ಬರಸೆಳೆದು,ಬಿಗಿಯಪ್ಪಿ, ಸುರತಸುಖ, ವನು ತೋರು, ವರನೆ, ಸೇ, ರು ऽ॥

ಪ ಪ ತ್ರಿ ದ್ವಿ ಗ
ಚೆಂದುಟಿಯ, ನೊಲಿದೀಗ, ಚೆಲುವ, ಕಡಿ, ದು ऽ ॥
ಒಂದಿದೊಂ, ದಂಗವೆಂ, ಬಂತೆ, ಬೆರೆ, ದು ऽ ॥
ಪೊಂದಿಸಾ, ನಂದವನು, ಬಂದು, ನೀ, ನು ऽ ॥
ಎಂದು ವಂ, ದಿಸಿದಳಾ, ಸುಗುಣೆ, ತಾ, ನು ऽ ॥ –ಕರಿಬಂಜನ ಕಾಳಗ

ತ್ರಿಪದಿ

ಯಕ್ಷಗಾನ ಕೃತಿಗಳಲ್ಲಿ ತ್ರಿಪದಿಯ ಪ್ರಯೋಗವೇ ಗೋಚರಿಸುವುದಿಲ್ಲ.

ಜನಪ್ರಿಯುವಾದ ಈ ಛಂದಸ್ಸನ್ನು ಯಕ್ಷಗಾನ ಪ್ರಬಂಧಗಳಲ್ಲಿ ಬಳಸ ಬಹುದು,

ಅಂಶಿಗಣಬದ್ಧ ತ್ರಿಪದಿ

ವಿ ವಿ ವಿ ವಿ
ಮದನಂಗೆ, ಜಯುವುಕ್ಕೆ, ಮಧುಗೆಸಂ, ಪದವುಕ್ಕೆ ।
ವಿ ಬ್ರ ವಿ ವಿ
ಬಿದುಗದಿ, ರಿಂತು, ನೆಲಸಿರ್ಕೆ, ರತಿಗೆಸಂ ।
ವಿ ಬ್ರ ವಿ
ಮದವೊಂದುಂ, ತೊಲಗ, ದಿರುತಿರ್ಕೆ ॥ –ರಾಜಶೇಖರ ವಿಳಾಸ

ಮಾತ್ರಾಗಣಬದ್ಧ ತ್ರಿಪದಿ

ಪ ಪ ಪ ಪ
ಇಂಗಡಲೊ, ಳಿಂಪು ಬೆ, ಳ್ದಿಂಗಳೊಳು, ತಂಪುಕುಸು ।
ಪ ತ್ರಿ ಪ ಪ
ಮಂಗಳೊಳು, ಕಂಪು, ಬೆರೆದಂತೆ, ಪರಮನೊಳು ।
ಪ ತ್ರಿ ಪ
ಪಿಂಗದ ಗ, ಸುತೆಗೆ, ನತನಪ್ಪೆ ॥ –ಪುರಾತನರ ತ್ರಿವಿಧಿ

ಷಟ್ಪದಿಗಳು

ಮಾತ್ರಾ ಗಣಬದ್ಧ ಷಟ್ಪದಿಗಳಲ್ಲಿ ಶರ-ಕುಸುಮ-ಭೋಗ-ಭಾಮಿನಿ-ಪರಿವರ್ಧಿನಿ-ವಾರ್ಧಕಳೆಂಬ ಆರು ಮುಖ್ಯ ಪ್ರಭೇದಗಳಿವೆ. ಇವುಗಳಲ್ಲಿ ಪ್ರಥಮ ಲಘು ದ್ವಿತೀಯ ಗುರುವಿನ ಲಘು ಗುರು ಗಣ–ಲಘು ಗುರು ಲಘು ಗಣ-ಲಘು ಗುರು ಗುರು ಗಣ-ಲಘು ಗುರು ಲಘು ಲಘು ಗಣಗಳು ಬರಕೂಡದು.

ಶರಷಟ್ಪದಿ:– ೨ ಚ । ೨ ಚ । ೩ ಚ ಗ ॥ – – – ॥
ಮುರಹರ, ನೆಂದಾ ।
ಸರಸದ, ನುಡಿಯನು ।
ನರತಿಾ, ನಾಲಿಸಿ, ತವಕದೊ, ಳುs ।

ಪರಿ ಪರಿ, ಯಿಂದಲಿ ।
ಧರಣೀ, ಶ್ವರನನು ।
ಜರೆದನು, ನಿಂತು ವಿ, ರೋಧದೊ, ಳು s ॥ -ಕರ್ಣಪರ್ವ

ಕುಸುಮಷಟ್ಪದಿ:- ೨ ಪ । ೨ ಪ । ೩ ಪಗ ॥ — — — ॥
ಬಳಿಕ ಮುಂ, ದಲ್ಲಲ್ಲಿ ।
ನಿಲುತ ತಾ, ನಲ್ಲಲ್ಲಿ ।
ಕುಳಿತಳಲು, ಕೇಳು ತಳು, ಕುತ ಬಳುಕು, ತ s ।
ತೊಳಪ ಮೆ, ಲ್ಲಡಿಯನಿಡ ।
ಲಳವಡದೆ, ಬಳಲಿ ಬಸ ।
ವಳಿದು ಬೆಂ, ಡಾಗಿ ಕುಳಿ, ತಳು ಪಥದೊ, ಳು s । -ಖರಾಸುರ ವಧೆ

ಭೋಗಷಟ್ಪದಿ – ೪ ತ್ರಿ । ೪ ತ್ರಿ । ೬ ತ್ರಿಗ ॥ — — — ॥
ಜನಪ, ನೀಲ, ಕೇತು, ತನಯ ।
ವನಕೆ, ಸತಿಯ, ರೋಳಿ, ಸಹಿತ ।
ಘನದಿ, ಬರಲು, ಕಂಡ, ರಾವ, ಸಂತ, ಸುರುಬೆ, ಯ s ।
ಅನುಪ, ಮಿತ ವಿ, ಲಾಸ, ನೋಡಿ ।
ಮನದಿ, ಹರ್ಷ, ವೇರೆ, ಕುಣಿದು ।
ವಿನಯ, ದಿಂದ, ಸಲಿಲ, ಕೇಳಿ, ಗನುವ, ಗೆಯ್ದ, ರು s ।
-ನೀಲಧ್ವಜ ಕಾಳಗ

ಭಾಮಿನೀಷಟ್ಪದಿ:-
ತ್ರಿಚತ್ರಿಚ । ತ್ರಿಚತ್ರಿಚ । ತ್ರಿಚತ್ರಿಚತ್ರಿಚಗ ॥ — — — ॥
ಪರಮ, ಪುರುಷನೆ, ಪಾಪ, ನಾಶನೆ ।
ದುರಿತ, ನಿಬಿಡ, ಧ್ವಾಂತ, ಸೂರ್ಯನೆ ।
ಸುರನ, ರೋರಗ, ಲೋಕ, ವಿನುತನೆ, ನಿತ್ಯ, ಪಾವನ, ನೆ s ॥
ನಿರುಪ, ಮಾಂಗನೆ, ನಿಷ್ಕ, ಳಂಕನೆ ।
ಶರಣ, ಜನಪರಿ, ಪಾಲ, ಶೀಲನೆ ।
ಗುರುವ, ರನೆನೀ, ನೊಲಿದು, ಪಾಲಿಪು, ದೆನಗೆ, ಸನ್ಮತಿ, ಯ s ॥
-ಪಾರಿಜಾತ

ಪರಿವರ್ಧಿನೀ ಷಟ್ಪದಿ:- ೪ಚ। ೪ಚ। ೬ಚಗ॥ — — — ॥

ಹರಿವಿಧಿ, ಹರಮು,ಖ್ಯರ ಸಂ,ಸ್ಮರಿಸುತ।
ಸಿರಿ ಹಿಮ,ಗಿರಿಸುತೆ, ಸರಸತಿ,ಯಿಂದವರ।
ಚರಣ,ಕ್ಕೆರಗುತ, ಗುರುವಿನ, ಪರಕೆಯ, ಧರಿಸುತ, ಶಿರದೊಳ,ಗೆ।
ನಿರುಪಮ, ಚರಿತೆಯ,ನೊರೆವೆನು, ದುರುಳರ।
ತರಿದಾ,ಸುರರನು, ಪೊರೆಯುತೆ, ಸುರಭಿಯ।
ತರಳೆಯು,ದರದಿ ಕು,ವರಿಯಾ,ಗಿರುತಿಹ, ಪರಶಿವೆ, ಕರುಣಿಸ,ಲಿ ಽ ॥

-ಅರುಣಾಸುರ ವಧೆ

ವಾರ್ಧಕ ಷಟ್ಪದಿ:- ೪ಪ। ೪ಪ। ೬ಪಗ॥ — — — ॥

ರಜತಾದ್ರಿ,ಗೇಹನಂ, ಕಲ್ಯಾಣ,ಕಾಯನಂ।
ಭುಜಗತತಿ,ಭೂಷನಂ, ನಿಖಿಲಜಗ,ದೀಶನಂ।
ವೃಜಿನಾಪ,ಹಾರನಂ, ಶರಧಿಗಂ,ಭೀರನಂ, ಸಾರನಂ, ಸಾಕಾರ,ನಂ॥
ದ್ವಿಜರಾಜ,ಚೂಡನಂ, ವರವೃಷಾ,ರೂಢನಂ।
ಸುಜನಗಣ,ರಕ್ಷನಂ, ರಾಕ್ಷಸವಿ,ಪಕ್ಷನಂ।
ಗಜಚರ್ಮ,ಚೇಲನಂ, ಗೌರೀವಿ,ಲೋಲನಂ, ನುತಿಸಿಕೃತಿ,ಯಂ
ಪೇಳ್ವೆ,ನು ಽ ॥

-ಪ್ರಹ್ಲಾದ ಚರಿತ್ರೆ

ತ್ರಿಮಾತ್ರಾಗಣಬದ್ಧ ಗೀತಗಳು

ತ್ರಿಮಾತ್ರಾಗಣಬಂಧಗಳ ಕೆಲವು ನಿರ್ದಿಷ್ಟ ಸ್ಥಾನಗಳಲ್ಲಿ ಗುರು ಬರುವುದುಂಟು. ಈ ಛಂದೋಬಂಧಗಳಲ್ಲಿ ಲಘುಗುರು ಗಣಗಳು ಹೆಚ್ಚಾಗಿ ಬರುವುದಿಲ್ಲ.

ರಾಗ ಘಂಟಾರವ – ರೂಪಕತಾಳ

ಶ್ರೀವಿ,ನಾಯ,ಕ ಽ ಶಕ್ರ,ಪಾಲ,ಕ ಽ । ಕೋವಿ,ದಪ್ರಿ,ಯ ಽ ಭುಜಜ, ತುಷ್ಟ,ಯ ಽ ॥ ಪಾಪ,ನಾಶ್ಮ,ಕ ಽ ಪರಶು,ಧಾರ,ಕ ಽ । ದೇವ,ರಕ್ಷಿ,ಸು ಽ ಭಯವ,ಶಿಕ್ಷಿ,ಸು ಽ ॥

-ದೇವೀ ಮಾಹಾತ್ಮ್ಯೆ

ರಾಗ ಶಂಕರಾಭರಣ – ರೂಪಕತಾಳ

ರಾಮ,ಸುಗುಣ,ಧಾಮ, ಸಮರ । ಭೀಮ, ರಾಘ,ವs ॥
ಪ್ರೇಮ,ದಿಂದ, ಸಲಹೊ । ಭೂಮಿ,ಜಾಧ,ವs ॥

–ಖರಾಸುರವಧೆ

ರಾಗ ಬೇಹಾಗ್ – ರೂಪಕತಾಳ

ಸುಲಲಿ,ತಾಂಗಿ, ಸಲಿಲ,ಜಾಕ್ಷಿ।ಛಲವಿ,ದೇನೆ, ಪೋಹ,ನೇs ॥ ಪಲ್ಲವಿ॥
ತುಂಬಿ,ಗುರುಳೆ,ರಂಭೆ, ಶಾತ । ಕುಂಭ, ಕುಂಭ,ನಿಭಕು,ಚೇs ॥
ಹಂಬ,ಲಿಸದಿ,ರಬಲೆ, ಭಯವಿ । ದೆಂಬ,ರೇನೆ.ಭಾಮಿ, ನಿs ॥

–ಕುಮಾರ ವಿಜಯ

ರಾಗ ಕಲ್ಯಾಣಿ – ರೂಪಕತಾಳ

ಅಜಕು,ಮಾರ, ಧೀರ,ವೀರ, ಬಾಹು,ವಿಕ್ರ,ಮs ॥ ಪಲ್ಲವಿ ॥ ಸುಜನ, ರಕ್ಷೆ,ಚಿಂತೆ,ಬೇಡ, ಸೂರ್ಯ,ಕುಲಜ, ಭೂಮಿ,ಪಾಲ । ಭಜಕ,ರಿಷ್ಟ,ವೀವ, ರಾಮ,ನನ್ನ,ಕಳುಹಿ,ಸುs ॥

–ಪುತ್ರಕಾಮೇಷ್ಟಿ

ರಾಗ ತುಜಾವಂತು – ರೂಪಕತಾಳ

ಕೇಳಿ,ರೆನ್ನನುಡಿಯ, ಸಭ್ಯ,ರುs ॥ ಪಲ್ಲವಿ ॥ ಬರಿಯ,ಮೌನ,ಪೇ, ವಿ,ಷಾದ । ವರರೆ, ಕೃಷ್ಣೆ,ಯಿತ್ತ,ಪ್ರಶ್ನೆಗರಿತು, ಮಾರ್ನು,ಡಿಯದೆ, ಬರಿದೆ। ಮರೆತಿ,ರೇನು?, ಧರ್ಮ,ಗುಣವ ॥

–ದ್ರೌಪದೀ ವಸ್ತ್ರಾಪಹಾರ

ರಾಗ ಪಂತುವರಾಳಿ – ರೂಪಕತಾಳ

ಮನೆಯ, ಗೆದ್ದ, ಮಾರ, ಗೆಲುವ।ಮನವ, ಮಾಡಿ, ರಿs ॥ ದನುಜ ರೆಲ್ಲ, ಕೂಡಿ, ಚಿತ್ತ, ದನುವ, ನೋಡಿ, ರಿs ॥ ಪಲ್ಲವಿ ॥ ಧನಪ, ವಿಶ್ರ, ವಸುವಿ, ನಾದಿ।ವನಿತೆ,ಯಲ್ಲಿ ಜನಿಸಿ, ಮರಳಿ। ಜನಕ,ನಾಜ್ಞೆ,ಯಿಂದ, ನಮ್ಮ ದನುಜ, ರಾಳು,ವ ॥ ಘನಸು, ಲಂಕೆ,ಯಲ್ಲಿ, ಮೆರೆವ । ನನುಜ,ನೀಕು, ಬೇರ,

ನೆನುವ।ದಿನಿತು, ಕಥೆಯು, ನೀಗದಶಾ।ನನಗೆ, ವಿವರಿ,ಸಿs ॥ –ರಾವಣೋದ್ಭವ

ರಾಗ ಪಂತುವರಾಳಿ–ಮಟ್ಟೆತಾಳ

ಬಂದ,ನಾ ಸುಮಿತ್ರೆ, ಯಣುಗ। ಮುಂದು,ವರಿವ, ಲಕ್ಷ,ಸೇಂದ್ರ।
ನಂದ,ನನೊಳು, ಕದನ, ಕೆನುತ।ಲಂದು, ಬಿಲ್ಲ, ಪಿಡಿದು, ಕರದಿ ॥

–ಅತಿಕಾಯಕಾಳಗ

ರಾಗ ಪಂತುವರಾಳಿ- ಮಟ್ಟೆತಾಳ

ಅರರೆ, ಶಾಮ, ನಿನ್ನ, ಧುರಕೆ।ಹರಿವಿ,ರಿಂಚಿ, ಮುಖ್ಯ, ರೀಡೆ ?
ತಿರುಗಿ, ಪೊಗು, ಸೀತೆ,ಯಶಾಸೆ।ತೊರೆದು, ಬಿಮ್ಮ,ನೆs॥ ದುರುಳ,
ಕೇಳು, ನಮ್ಮ, ಪರಿಯ।ನರಿಯೊ, ನಿನ್ನ, ತರಿದು, ಸೀತೆ।ವೆರಸಿ,
ಪೋಪೆ,ನಯ್ಯ, ನನ್ನ।ಪುರಕೆ, ಘಮ್ಮನೆs ॥ –ಸಂಪೂರ್ಣ ರಾಮಾಯಣ

ರಾಗ ಶಂಕರಾಭರಣ ಮಟ್ಟೆತಾಳ

ಎಲವೊ, ಯಮಜ, ಕೇಳು. ನಿನ್ನ।ಬಲದ, ಕೃಷ್ಣ,ನೆಲ್ಲಿ, ಪೋದ।
ತಲೆಯ, ನುಳುಹಿ, ಕೊಳ್ಳೆ,ನುತ್ತ।ತಳುವ, ದೆಚ್ಚ,ನುs ॥

–ಕರ್ಣಾರ್ಜುನರ ಕಾಳಗ

ರಾಗ ಶಂಕರಾಭರಣ – ಮಟ್ಟೆತಾಳ

ಫಡಕಿ,ರಾತ, ಬೇಡ,ನಿನಗೆ, ಶಪಥ,ವೆನ್ನ,ಲಿs ॥ ಬಡತ,ಪಸ್ವಿ,ಯೆಂದು
ಬಗೆದೆ,ನಿನ್ನ, ಮನದ,ಲಿs ॥ ಒಡಲ,ಬಗಿವೆ,ನೊಂದು,ಶರದಿ, ನೋಡೆ,
ನುತ್ತ,ಲಿs ॥ ಮೃಡನ,ನೆಚ್ಚ,ನಸ್ತ್ರ,ಜಯದಿ,ನರನು, ಖತಿಯ,ಲಿs ॥

–ಇಂದ್ರಕೀಲಕ

ರಾಗ ದೇಶಿ - ಮಟ್ಟೆತಾಳ

ಬಂದು,ವರುಣ,ನುs ॥ ನಿಂದು,ಹರಿಯ,ನುs ॥ ನಂದ,ತನಯ,ಪೋಗ,
ಬೇಡ । ವೆಂದು, ತಡೆದ,ನುs ॥ –ಪಾರಿಜಾತ

ರಾಗ ಸಾವೇರಿ – ಮಟ್ಟೆತಾಳ

*

ಪೂತು,ಮುರಘರೆ,ಕರ್ಣ,ನೀನು । ಖ್ಯಾತ,ನೆಂದು,ಪಾರ್ಥ ॥ ಶಾತ

ಕುಂಭ,ಪುಂಖ,ದಸ್ತ್ರ । ವ್ರಾತ,ವೆಚ್ಚ,ನಾಗ ॥ ನೀತಿ,ವಂತ,ಸೇನು, ಪೃಥೆಯ, ಜಾತ,ನಾಗ,ಬಹುದೋ ॥ ಆತು,ಕೊಂಬು,ದೆನುತ, ರವಿಜ । ನೂತ,ಸಾಂಬು, ಗರೆದ ॥ —ಕರ್ಣಪರ್ವ

ರಾಗ ಆಹೇರಿ – ಮಟ್ಟೆತಾಳ

ಬಂದ,ನಾಗ,ಭಾನು,ಕೋಪ,ನುs ॥ ಪಲ್ಲವಿ ॥ ಸ್ಯಂದ,ನವನು,ಡರ್ದು, ದೈತ್ಯ । ವೃಂದ,ದೊಡನೆ, ಕದನ,ಕೆಂದು ॥ ಅನುಪಲ್ಲವಿ ॥ ಖಳಮ,ಹೀಶ, ವಿಜಯ,ಖರನು । ಕಲಿವಿ,ಮೋಹ,ಕಾಖ್ಯ,ನುಗ್ರ । ಕಳಭ,ವಿಷ್ಣ,ಸೇನ, ಮುಖ್ಯ । ದಳಪ,ತಿಗಳ.ಕೂಡಿ, ಶಸ್ತ್ರ । ಗಳನು,ಧರಿಸಿ, ಧನುವ,ನಾದ । ಗೊಳಿಸಿ,ಬಳಸಿ,ಗಜರ,ಥಾಶ್ವ । ವುಳಿಸಿ,ಒಂದೆ,ಪವನ,ನನ್ನು । ಕಳೆದು ತುಳಿದು,ಧರೆಯ,ರಣಕೆ ॥ —ಕುಮಾರ ವಿಜಯ

ತ್ರಿಮಾತ್ರಾಗಣ ಬಂಧಗಳ ವರಣದಲ್ಲಿ ಕೆಳಗಿನಂತೆ ಮಾತ್ರಾಗಣಗಳಿ, ರಬಹುದು.

1. – ಒಂದು ತ್ರಿಮಾತ್ರಾ ಗಣ
2. – ಎರಡು ತ್ರಿಮಾತ್ರಾಗಣಗಳು.
3. – ಒಂದು ಗುರು ಮತ್ತು ಎರಡು ತ್ರಿಮಾತ್ರಾಗಣಗಳು.

ವರಣದ ಪೂರ್ವಪಾದದ ಮತ್ತು ಉತ್ತರಪಾದದ ಅಂತ್ಯಸ್ಥಾನದಲ್ಲಿ ಹೆಚ್ಚಾಗಿ ಗುರುವಿರುತ್ತದೆ. ವಿರಳವಾಗಿ ತ್ರಿಮಾತ್ರಾಗಣವೂ ನಿಲ್ಲುವುದುಂಟು

ರಾಗ ಆರಭಿ – ರೂಪಕತಾಳ

ಕೇಳು,ಭೂಮಿ,ದೇವ, ನಾನು,ಪೇಳ್ವ,ಮಾತ,ನುs ॥ ಅಯ್ಯೊ । ನೀಲ, ವರ್ಣ,ಶತ್ರು,ವೆನುತ, ಅಣ್ಣ,ರುಕ್ಮ,ನುs ॥ ಖೂಳ,ಚೈದ್ಯ,ನೃಪಗೆ,ನಾಳೆ, ಕೊಡುವ,ನೆನ್ನ,ನುs ॥ ಭೂಮಿ । ಪಾಲ,ರನ್ನು, ಈಗ,ತಾನೆ,ಕರೆಸಿ, ಕೊಂಡ,ನುs ॥ —ರುಕ್ಮಿಣೀ ಸ್ವಯಂವರ

ರಾಗ ದೇಶಿ – ರೂಪಕತಾಳ

ನಿನ್ನ, ಕಂಡು, ಧನ್ಯ, ನಾದೆ, ರಾಮ, ಚಂದ್ರ ॥ ಇಂದಿ । ಗೆನ್ನ, ಜನ್ಮ, ಸಫಲ, ವಾಯ್ತು ರಾಮ, ಚಂದ್ರ ॥ ಕನ್ನೆ, ಯನುಜ, ರೊಂದು, ಗೂಡಿ । ರಾಮ, ಚಂದ್ರ ॥ ರಾಜ್ಯ । ವನ್ನು, ಬಿಟ್ಟು, ಪೋಪಿ, ರೆಲ್ಲಿ ? । ರಾಮ, ಚಂದ್ರ ॥

–ರಾಮರಾಜ್ಯ ವಿಯೋಗ

ರಾಗ ತೋಡಿ – ರೂಪಕತಾಳ

ಕಂಡ, ಳಾಗ, ಶಚಿಯು, ದೂರ, ದಿ ಽ ॥ ರ, ಕ್ಕಸಿಯು, ತೋಷ । ಗೊಂಡು, ಪೇಳ್ದ, ಳತಿ ವಿ, ಚಾರ, ದಿ ಽ ॥ ಗಂಡ, ನೆಡೆಯೊ, ಳಿಲ್ಲ, ನೋಡೆ । ಷಂಡ, ನವನು ತನ್ನ, ಸತಿಯ । ಬಂಡು, ತನದೊ, ಳಕಟ, ಮರನ । ಹಿಂಡಿ, ನೊಳಗೆ, ಬಿಡಲು, ಬಹುದೆ ? ॥

–ಕುಮಾರ ವಿಜಯ

ರಾಗ ಸಾರಂಗ – ರೂಪಕತಾಳ

ಇಂದು, ಸತಿಯ, ಲಿ ಽ ॥ ನಂ, ಬುಗೆಯು, ಪಡೆದು । ಚಂದ, ದಿಂದ, ಲಿ ಽ ॥ ಒಂದು, ವರದಿ, ರಾಮ, ನಡವಿ । ಪೊಂದಿ, ರಲಿ ಚ, ತುರ್ದ, ಶಾಬ್ದ , ವೆಂದು, ಕಾಡಿ, ಗಟ್ಟು, ಬರತ । ಗೊಂದ, ರಲ್ಲಿ, ರಾಜ್ಯ, ಕೇಳು ॥

–ರಾಮರಾಜ್ಯ ವಿಯೋಗ

ರಾಗ ಭೈರವಿ – ರೂಪಕತಾಳ

ಪೇಳ, ಲೇನ,ನು ಽ ॥ ತಾಯೆ । ಪೇಳ, ಲೇನನು ಽ ॥ ಪಲ್ಲವಿ ಪೇಳಿ, ಪಾಳ್ಪು, ದೇನು ? ನಿಮ್ಮ । ಬಾಲ, ರುಕ್ಮ, ಚೈದ್ಯ ವೆಂಬ, । ಖೂಳ, ನಿಂಗೆ, ಕೊಡುವ, ನೆನ್ನ । ನಾಳೆ, ನಡೆವ, ದಿವಸ, ದಿ ಽ ॥

–ರುಕ್ಮಿಣೀ ಸ್ವಯಂವರ

ರಾಗ ದೇಶಿ – ಮಟ್ಟೈತಾಳ

ಸಿಡಿಲು, ಪೊಯ್ದ, ವು ಽ ॥ ಮರಳು । ಗಡಣ, ವೆದ್ದ, ವು ॥
ಕಡುಹಿ, ಕೂಗು, ತ ಸುರ, ಹರನ । ಪಡೆಯು, ತುಳಿದು, ವು ಽ ॥

–ಉಷಾ ಪರಿಣಯ

ರಾಗ ಭೈರವಿ – ಮಟ್ಟೈತಾಳ

ಸುರಥ, ಕೋಪ, ದಿಽ ॥ ರಥವ। ಹರಿಸಿ. ಶೀಘ್ರ, ದಿಽ ॥ ನರಮು, ಕುಂದ, ರ॥ ಹುಡುಕಿ। ಬರಲು, ಭೂಪ, ರಽ ॥ ಹರಿಸೆ. ರಥವ, ನುಽ ॥

ಹಿಂದ, ಕಿರದೆ, ತೆಗೆದ, ನುs ॥ ಧುರಕೆ, ವೀರ, ರುs ॥ ರಿಪುವ ।
ತರುಬಿ, ನಿಂದ, ರುs ॥ –ಸುಧನ್ವ ಕಾಳಗ

ರಾಗ ಪಂತುವರಾಳಿ-ಮಟ್ಟೆತಾಳ

ನಡೆಯೆ, ಲೊ, ೀಮು,ರಾರಿ, ಸುಖದೊ, ಳುs ॥ ಸಲುಗೆ, ಮಾತ। ನುಡಿದು, ಪೆಟ್ಟ, ತಿನ್ನ, ದೆನ್ನೊ, ಳುs ॥ಪಲ್ಲವಿ॥ ನೀನು, ಬೇಡಿ, ದೈದು, ಗ್ರಾಮ, ದಿ ಽ ॥ ಒಂದ, ನಾದೊ।ಡಾನು, ಕೊಡುವ, ನಲ್ಲ, ಸಾಮ, ದಿs ॥ ಕ್ಷೋಣಿ, ಯಂತ್ರಿ, ಪಾದ, ಗೆಯ್ದ।ಜಾಣ, ತನವ, ನೆಲ್ಲ, ಗೋಪ।ರಾಣಿ,

*

ಯರಲಿ, ತೋರು, ನವಶ್ಮಾ । ಸ್ಥಾನ, ದಲ್ಲಿ, ಮೆರೆಯ, ಲರಿದು ॥

–ಕೃಷ್ಣ ಸಂಧಾನ

ರಾಗ ತುಜಾವಂತು–ಮಟ್ಟೆತಾಳ

ಆರೆ, ಲೋಮ, ದಾಂಧ, ವೀರ, ನೇs ॥ಪಲ್ಲವಿ॥ ಚೋರ, ರಂತೆ, ಮಶಾರ್ಜ, ಲ ಗಳ । ಸೇರಿ, ಬಂದು,ಪಟ್ಟ, ಣವ ವಿ । ಚಾರ, ವೆಸಗ, ದಿಂತು, ಮುತ್ತಿ । ಗಾರು, ಗೆಯ್ವ, ಭಳಿರೆ, ಯಿಂತು । ಪಾರು, ಪತ್ಯ, ಕೊಟ್ಟ, ದಾರೆ, ಲಾs ॥ ನೋ, ಡಲ್ಕೆ, ಭಸ್ಮ । ಧಾರಿ, ಯೆನಿಪ, ಶೈವ, ನೇನೆ,ಲಾ s ॥
ರು, ದ್ರಾಕ್ಷಿ, ಗಳದಿ । ಹಾರ, ಗೆಯ್ದ, ಧೀರ, ನ, ಹೆ ಭ, ಲಾ s ॥

ಕುಮಾರವಿಜಯ

ರಾಗನಾದನಾಮಕ್ರಿಯ – ಮಟ್ಟೆತಾಳ

ಏನ, ನೆಂಬೆ, ನಂದಿ, ನಾಹ, ವs ॥ ಕೇಳು, ನೃಪತಿ । ಏನ, ನೆಂಬೆ, ನಂದಿ, ನಾಹ, ವ s ॥ ಪಲ್ಲವಿ ॥ ಗುರುಜ, ನೆಚ್ಚ, ಬಾಣ, ತತಿಯು। ತರಿದು,

*

ಪಾರ್ಥ, ಸ್ವರ್ಣ, ಪುಂಖ । ದುರು ಶಿ, ಲೀ ಮು, ಖಂಗ, ಳನ್ನು । ಕರೆಯೆ, ಕಂಡು, ಕನಲಿ, ಭೋರು । ಗರೆದು, ಮತ್ತೆ, ಖಾತಿ, ಯಿಂದ, ಲಿs ॥ ರಿಪುವಿ, ನಂಬ । ತರಿದು, ಸರ್ವ, ಶಕ್ತಿ, ಯಿಂದ, ಲಿs ॥ ತಡೆದ, ರಾಗ । ಶರವ, ನೆಚ್ಚು, ಶೌರ್ಯ, ದಿಂದ, ಲಿ s ॥ –ಕರ್ಣಪರ್ವ

ಪಲ್ಲವಿಯನ್ನು ಇಡದೆ ಚರಣವನ್ನು ಮಾತ್ರ ಬರೆಯುವ ಸಂಪ್ರದಾಯವಿದೆ.

ರಾಗ ಸಾವೇರಿ - ರೂಪಕತಾಳ

ಆ। ನಂದ ಮುಖಿ, ಸುಂದ, ರಾಂಗಿ । ಮಂದ, ಗಾಮಿ, ನೀ ಽ ॥ಬಂದ, ಬವಣೆ, ಪೇಳ್ವ, ನಾದಿ । ಯಿಂದ, ಕಾಮಿ, ನೀ ಽ ॥ —ಕುಮಾರವಿಜಯ

ಈ ಪದದ ಪ್ರಾರಂಭದಲ್ಲಿ ಗಣ ವಿಭಜನೆಗೆ ಸಿಕ್ಕದ ಒಂದು ಅತೀತಾಕ್ಷರವಿದೆ,

ಚತುರ್ಮಾತ್ರಾ ಗಣಬದ್ಧ ಗೀತೆಗಳು

ಚತುರ್ಮಾತ್ರಾ ಗಣಬಂಧಗಳ ಕೆಲವು ನಿರ್ದಿಷ್ಟ ಸ್ಥಾನಗಳಲ್ಲಿ ಗುರುವಾಗಲಿ ಗುರ್ವಂತ ಚತುರ್ಮಾತ್ರಾಗಣವಾಗಲಿ ಬರುವುದು. ಈ ಪದಗಳಲ್ಲಿ ಜಗಣ (ಲಗಲ)ಹೆಚ್ಚಾಗಿ ಬರುವುದಿಲ್ಲ. ಕೆಲವೆಡೆಗಳಲ್ಲಿ ವಿರಳವಾಗಿ ಜಗಣವೂ ನಿಲ್ಲುವುದುಂಟು.

ಆರ್ಯಾಸವಾಯಿ-ಏಕತಾಳ

ಇದನ್ನು ಕಥಾ ಸನ್ನಿವೇಶಕ್ಕೆ ಒಪ್ಪುವ ಯಾವ ರಾಗದಲ್ಲಿಯೂ ಹಾಡಬಹುದು.

ರಾಗ ನಾದ ನಾಮಕ್ರಿಯ-ಏಕತಾಳ

ಚಿತ್ತದ, ಹರ್ಷದಿ, ಮುತ್ತಿದ, ಸಖಿಯರ । ಮೊತ್ತದೊ,ಡನೆ ಸತಿ, ನಡೆತಂ,ದುಽ ॥ ಎತ್ತಿದ, ಮಾಲೆಯ, ಸುತ್ತಿದ,ಳರಿಯದೆ । ಮತ್ತದು, ಕೌರವ, ಗಳವೆಂ,ದುಽ ॥ —ಭಾನುಮತೀ ಕಲ್ಯಾಣ

ರಾಗ ಜಂಗಾಲಾ—ಏಕತಾಳ

ಏಕಳು,ಶಿಹೆ ಬಿಡು,ಶೋಕವ, ರತಿಕೇಳ್ । ಸಾಕು ಸು,ಮಂಗಲೆ,ಯೇಽ
ಲೋಕೇ,ಶನು ಬರೆ,ದಂತಹ, ಬರೆಹ । ನಿರಾಕರಿ,ಸುವರಾ,ರೆಲೆ ತಾ,
ಯೇಽ ॥ —ಗಿರಿಜಾ ಕಲ್ಯಾಣ

ರಾಗ ಜಂಗಾಲಾ—ಏಕತಾಳ

ತರಣಿಯು, ಪಶ್ಚಿಮ, ಶರಧಿಯೊ,ಳಿಳಿದನು । ತರುಬಿತು, ಕತ್ತಲೆ, ಯುರ್ವಿಯ,ನುಽ ॥ ಶರಹತಿ,ಯುಲಿ ಕಡು,ನೊಂದಿಹೆ, ನೀಕೇಳ್ । ತೆರಳೈ, ಲಂಕೆಗೆ, ನಾಚುಗೆ,ಗೇಡಿಯೆ ॥ —ಅತಿಕಾಯ ಕಾಳಗ

ರಾಗ ಆನಂದ ಭೈರವಿ-ಏಕತಾಳ

ಹರುಷದೊ,ಳೆನ್ನನು, ನೆರೆಯುದಿ,ರಲು ನಿನ । ಗಿರಗೊಡೆ,ನೆನಲವ,ಳುs ॥ ಸ್ಮರಶರ,ಹತಿ ಯಿವ,ಗಿರುವುದೆ?, ನಿಜವೆನು । ತರಿತೊ,ಪ್ಪಿದಳಾ,ವರಮುನಿ, ವಚನಕೆ ॥ —ವಿಶ್ವಾಮಿತ್ರ ಪ್ರತಾಪ

ರಾಗ ಕಾಂಭೋಜಿ-ಏಕತಾಳ

ಭರಿತ ಗು,ಣೋದಯ, ಪಾರ್ವತಿ, ಪುತ್ರ s ॥
ಸುರನುತ, ನಿರ್ಮಲ, ಶೋಭನ, ಗಾತ್ರ s ॥
ದುರಿತ ನಿ,ವಾರಣ, ತೋಯಜ, ನೇತ್ರ s ॥
ವರಮಣಿ, ಭೂಷಣ, ವಾಸುಕಿ, ಮಿತ್ರ s ॥ —ಸಭಾ ಲಕ್ಷಣ

ರಾಗ ಮಾರವಿ-ಏಕತಾಳ

ಏಲೆತಾ,ತನೆ ನೀ,ನಳಲುವೆ,ಯೇತಕೆ । ಫಲವೇ,ನಿದರೊಳ,ಗೆ s ॥
ಜಲರುಹ, ಭವಫಣಿ,ಯಲಿ ಬರೆ,ದಂದದಿ । ಫಲಿಸುವು,ದೆಲ್ಲರಿ,ಗೆ s ॥
—ವಿಶ್ವಾಮಿತ್ರ ಪ್ರತಾಪ

ಅಷ್ಟಪದಿ-ರಾಗ ಮಾರವಿ-ಏಕತಾಳ

ಧರಣಿಪ, ಕೇಳಿ,ತೆರದೊಳು, ಪಾರ್ಥನು । ಗುರುಸುತ,ನಂಗವ ।
ಶರದಲಿ, ಕೀಲಿಸಿ । ಕರಿರಥ,ಪದಚರ । ತುರಗವ,ನುಗ್ಗ ರಿ ।
ದೊರಸುತ, ರಣದಲಿ । ಪರಿಶೋ,ಭಿಸಿದ s ॥ ಏನನೆಂಬೆ ॥
—ಗದಾಪರ್ವ

ರಾಗ ನೀಲಾಂಬರಿ-ಏಕತಾಳ

ಪಾಲಯ, ಗಜಮುಖ, ಪಾರ್ವತಿ, ನಂದನ । ಜಾಲವ, ಮಾಡದೆ, ಪಾಲಿಸು, ನಮ್ಮನು ॥ ಪಲ್ಲವಿ ॥ ಘೋರ ವಿ,ಘ್ನಾರ್ಣವ, ಘಜಭವ,ಸನ್ನಿಭ । ವಾರಿಜ, ಬಾಂಧವ, ಕೋಟಿ ಸ,ಮಪ್ರಭ ॥ —ಸಭಾ ಲಕ್ಷಣ

ರಾಗ ಕಮಾಚ್-ಏಕತಾಳ

ಇಂತು ಮ,ಯುನ ಶ್ರೀ,ಕಾಂತ ಕ,ಳುಹಿ ತದ । ನಂತರ,ದಲಿಕಂ,ಡಂತರ,ವರಿತು s ॥ ಕಾಂತಾ,ರರದಿ ಶಿಖಿ,ಭ್ರಾಂತಿಕ,ರ ಪ್ರಭೆ । ಯಶಾಂತು,ಜ್ವಲಿಸಿರೆ ಸಂತಸ,ವಾಂತು s ॥ —ಖಾಂಡವ ವನ ದಹನ

ರಾಗ ಶಹಾನ-ಏಕತಾಳ

ಕೇಳೆ,ನ್ನಯ ನುಡಿ, ಕೋಪಿಸಿ, ಕೇಳದಿರು । ತಾಳ್ಳೆ, ಕ್ಷಮೆಯನು, ಪಾರ್ಥ ऽ ॥ ಪೇಳುವೆ, ಧೂರ್ತರ, ಗುಣಗಳ,ನೆಲ್ಲವ । ನಾಲಿಸು, ಸಮರ, ಸಮರ್ಥ ऽ ॥ ಪಲ್ಲವಿ ॥ ಮಡದಿಯು, ಮಕ್ಕಳು, ಹಿತವಂ,ತರು ಮ, ತ್ತೊಡಹು,ಟ್ಟಿದವರು, ಕೂಡಿ ऽ ॥ ಬಿಡದೀ, ಭಾಗ್ಯವ, ತೋರಲು, ನಿಮಗೆಂ। ದೊಡನೆ,ಲ್ಲರು ಪಾ,ತಾಡಿ ऽ ॥ ಪಡೆವೆರ,ಸುತ ಬಂ,ದನು ಎಪಿ,ನಕೆ ಬಲು । ಬಡಿವಾ,ರಂಗಳ,ಮಾಡಿ ऽ ॥ ಕೆಡಿಸಿದ,ನಮ್ಮು ಪ,ವನವನು, ಖಚರರ। ಪುಡಿಗ, ಟ್ಟಿದನ್ನೈ,ಖೋಡಿ ऽ ॥ —ಚಿತ್ರಸೇನ ಕಾಳಗ

ಕಚಾವು-ಏಕತಾಳ

ಬಾ ಶಂ,ಕರ ಪರ,ಮೇಶ ದಿ,ಗಂಬರ* । ಕ್ಲೇಶವಿ,ನಾಶ ಸು,ರೇಶ ನ, ಮಿತ ಜಗ । ದೀಶ ಪಿ,ನಾಕಿ,ಮಹೇಶ, ತ್ರ್ಯಕ್ಷ । ಗಿರೀಶ ಭ,ಯಂಕರ, ದೋಷ ವಿ,ದೂರ ಧ,ನೇ,ಶಪ್ರಿಯ ಕುಸು,ಮೇಷು,ದ್ವಿಪಭೂ । ತೇಶ,ಕ,ಪರ್ದಿಬಿ,ಲೇ ಶಯ,ಭೂಷಪ । ರೇಶ ಜ,ಟಾಧರ. ಪೂಷಜ. ವೈರಿ ಉ । ಮೇಶ, ಭೀಮನ ಭ,ಕೇಶ ಸ,ದಾಶಿವ ॥ —ದ್ರೌಪದೀ ಪ್ರತಾಪ

ಕಟಾವು ಏಕತಾಳ

ಲಾಲಿಸು. ವಸುಧಾ. ಪಾಲಕ, ಲಕ್ಷ್ಮಿ। ಲೋಲನು, ಸುಮನಸ, ಜಾಲ ದ, ದೂರನು। ಕೇಳುತ,ಲಾ ಗೋ,ಪಾಲಕ,ನೆನಿಸುತ । ಬಾಲತ,ನದಿ ಖಳ,ಜಾ ಲವ. ತರಿದು ಕ। ರಾಳ, ಕಂಸನನು, ಬೀಳ,ಹೊಯ್ಯುತಲಿ, ಕಾಲನ, ಪುರಕ, ಟ್ಟಿ– ऽ ॥ ಕಾಲನಿ,ಗಳವನು, ಕಳಚುತ, ಜನಕನ। ಲಾಲಿಸಿ, ಮಾತೆಯ,ನುಗ್ರ, ಸೇನನಿಗೆ । ಪಾಲಿಸಿ, ರಾಜಾಸನವನು, ಕರುಣದಿ । ಬಾಲ,ಲೀಲೆಗಳ, ತೋ ರುತ, ಮೋಹಿಸಿ । ನೀಲಾಂ,ಬರನಸ, ಮೇಳದೊ,ಳಾಡುತ । ಶೀಲದೊ,ಳೆ ಸೆದಿ,ರ್ದ ऽ ॥ —ರೇವತೀ ಕಲ್ಯಾಣ

ಧವಳಾರಪದ – ರಾಗಆಹೇರಿ - ಏಕತಾಳ

ಜಯಮಂ,ಗಳ ಜಯ,ಜಯತುನ,ಮೋ ऽ ॥ ಜಯತು ನ,ಮೋಜಯ,

ಜಯತು ನ, ಮೋ ऽ ॥ ಪಲ್ಲವಿ ॥ ಅರುಣಾಂ, ತಕಿ*ಭ್ರಮ. ರಾಂಬಿಕೆ, ಗೆ ऽ ॥

ಪರಮೇ, ಶ್ವರಿ ಕಮ, ಲಾಂಬಕಿ, ಗೆ ಽ ॥ ಪರಮ ಪ, ವಿತ್ರೆಗೆ । ಸುರುಚಿರ, ಗಾತ್ರೆಗೆ, ಪರತರ, ಪಾವನ, ಚರಿತಳಿಗೆ ಽ ॥ —ಭ್ರಮರಾಂಬಿಕಾ ವಿಲಾಸ

ರಾಗ ಕೇದಾರ ಗೌಳ ಆದಿತಾಳ

ಹರಿನಾ, ರಾಯಣ, ಗೋವಿ, ಂದ ಽ ॥ ದುರಿತ ನಿ, ವಾರಣ, ಗೋವಿಂ, ದ ಽ ॥ ಪಲ್ಲವಿ ॥ ದಶರಥ, ನಂದನ, ಗೋವಿಂ, ದ ಽ ॥ ವಾಸುದೇ, ವಾತ್ಮಜ, ಗೋವಿಂ,ದ ಽ ॥ —ಸಭಾ ಲಕ್ಷಣ

ರಾಗ ಕೊರವಿ – ಆದಿತಾಳ

ಬಾರೆ, ನ್ನಯ ಸುಕು, ಮಾರ ಕು, ಮಾರ ಸ, ವಿೂರ ಬ, ಲಾನ್ವಿತ, ಸುಂದರ ಽ ॥ ವೀರ ಉ, ದಾರ ಮ, ಯೂರ ವ, ರೂಢಸು । ಧಾರ ಸ, ನಿಧಿ ಗುಣ, ಚಂದಿರ ಽ ॥ —ಕುಮಾರ ವಿಜಯ

ರಾಗ ನೀಲಾಂಬರಿ – ಆದಿತಾಳ

ಹಾರಮು, ಣೀ ೧, ಶುಕಗಾ, ನೇ ಽ ॥ ಬಾರೇ, ವಾ ೧, ರಣಯಶಾ, ನೇ ಽ ॥ ನಾರೀ, ಬೇ ೧, ಸರವೇ, ನು ಽ ॥ ದೂರುವೆ, ಯಶಾ ೧, ಗುಣಧೇ, ನು ಽ ॥ —ಕುಮಾರ ವಿಜಯ

ರಾಗ ಕಮಾಚ್ – ಆದಿತಾಳ (ಧ್ರುವತಾಳ)

ಬಾರೋ, ಸಾರಸ, ದಳನಯ, ನ ಽ ॥ ಬೇಗ ಽ ॥ ಬಾರೋ, ಸಾರಸ, ದಳನಯ, ನ ಽ ॥ ಪಲ್ಲವಿ ॥ ನಾರಾ, ಯಣ ಪದ, ವಾರಿಜ, ಯುಗಳವ । ಸೇರಿದೆ, ಶೋಕನಿ, ವಾರಣ, ಕಾರಣ ॥ ಅನುಪಲ್ಲವಿ ॥ ಹಾರಮ, ಕುಟಿಕೇ,

ಯೂರಕುಂ, ಡಲ ಯುತ । ಪಶಾರ ಜ, ನಕ ಮೆ, ಯ್ದೋರೋ ಽ ॥ ನೀರ, ದೋರು ಶಾ, ರೀರ, ಘೋರಭವ । ಪಾರಾ, ಯಣ ಮುದ, ಬೀರೋ ಽ ॥ —ದ್ರೌಪದೀ ಪ್ರತಾಪ

ರಾಗ ನೀಲಾಂಬರಿ – ಧ್ರುವತಾಳ (ತ್ರಿ ಪುಡೆತಾಳ)

ರಘು, ಕುಲ ಪುಂ,ಗವ ರಾ,ಜೇಶ್ವರ । ಜಗ,ದಾತ್ಮಕ, ಜಗದ ಭಿ, ರಾಮ ಽ ॥ ಸುಗು,ಣಾಂಬುಧಿ, ಸುರ ಮುನಿ, ಸೇವಿತ । ಅಗ,ಜಾಪತಿ, ಸಖ ಶ್ರೀ,ರಾಮ ಽ ॥ —ಚೂಡಾಮಣಿ

ಚತುರ್ಮಾತ್ರಾಗಣ ಬಂಧಗಳ ಪರಣದಲ್ಲಿ ಕೆಳಗಿನಂತೆ ಪರಾತ್ರಾ ಗಣಗಳು ಬರಬಹುದು.

I ಒಂದು ದ್ವಿಮಾತ್ರಾ ಗಣ
II ಒಂದು ಚತುರ್ಮಾತ್ರಾ ಗಣ
III ಒಂದು ದ್ವಿಮಾತ್ರಾ ಗಣ ಒಂದು ಚತುರ್ಮಾತ್ರಾ ಗಣ
IV ಒಂದು ದ್ವಿಮಾತ್ರಾ ಗಣ ಎರಡು ಚತುರ್ಮಾತ್ರಾಗಣಗಳು.

ಮರಣದ ಪೂರ್ವಪಾದ ಮತ್ತು ಉತ್ತರ ಪಾದಗಳ ಅಂತ್ಯ ಸ್ಥಾನದಲ್ಲಿ ಗುರುವಾಗಲಿ ಗುರ್ವಂತ ಚತುರ್ಮಾತ್ರಾ ಗಣವಾಗಲಿ ಬರುವುದು.

ರಾಗ ಸುರಟಿ–ಏಕತಾಳ

ಶಾರದೆ,ಮನ್ಮಾ,ತೆ ऽ ॥ ಗಾನವಿ । ಶಾರದೆ, ವಿಖ್ಯಾತೆ ऽ ॥ ಸಾರಸಿ, ಲೋಚನೆ । ಸಾರಸ,ವಾಹನೆ । ಸಾರಸು,ವಿದ್ಯಾ । ಸಾರವ, ತಿಳುಹಾ ॥

–ದುರ್ಯೋಧನ ವಧೆ

ರಾಗ ವಸಂತ–ಏಕತಾಳ

ಬಿಡುಬಿಡು, ಬಿನ್ನಾ,ಣ ऽ ॥ ಕೃಷ್ಣಾ ॥ ಬಿಡುಬಿಡು, ಬಿನ್ನಾ,ಣ ऽ ॥ ಪಲ್ಲವಿ ॥ ನಡೆನಡೆ, ಪೋಗುವ, ಮೃಡಸಖಿ, ಬಾರೋ ॥ ಅನು ಪಲ್ಲವಿ ॥ ಮಾನಿನಿ,ಮಾಡಿದ । ಶೀನವ,ರಾಧವ । ಮಾನದಿ, ಪೊಂದುವ । ನೀನೇ, ಪತಿಯೈ ॥

–ಶೃಂಗಾರ ಗೋಪೀಜಾರ ಕಥೆ

ರಾಗ ಭೈರವಿ–ಏಕತಾಳ

ಎಲವೋ, ಸೂತನ, ಮಗನೇ ऽ ॥ ನೀ । ಕಲಹದಿ, ಬಲು ಸಾಹ,ಸಿಗ ನೇ? ऽ ॥ ತಲೆಯನು, ನೀಗಲಿ,ಕಹುದೋ ऽ ॥ ಮಾ । ರ್ಮಲೆತರೆ,ಕಾಣಲು, ಬಹುದೋ ऽ ॥

–ಕರ್ಣ ಪರ್ವ

ರಾಗ ಸಾವೇರಿ - ಏಕತಾಳ

ವಂದಿಪೆ, ನಾಗಣ, ನಾಥನ, ನು ऽ ॥ ಬಲ । ವಂದೆರ, ಗುಪೆ ಗುಣ ಯೂಥನ, ನು ऽ ॥ ಕಂದ, ಪಾರ್ವರಿಯು, ಕಂದನ, ಮಹಿಮನ । ಕುಂದಿಲ, ನನು ಸುರ, ವಂದಿತ, ಚರಣವ ॥

–ಸಭಾಲಕ್ಷಣ

ರಾಗ ಸಾವೇರಿ– ಏಕತಾಳ

ಒಂದ, ಸ್ಮೃಪನು,ಗ್ಗರಿದು ऽ ॥ ಅರ । ವಿಂದ ಜ, ನಿರ್ಘದ, ತಿಳಿದು ऽ ॥

ಕಂದ,ರ್ಪನು ಮಗು,ಳಿಂದನು,ಸುರತಾ । ನಂದಕೆ, ವಿಧಿಹಿತ,ಹೊಂದನು,
ಸರ್ವಥ ॥ –ಬ್ರಹ್ಮಕಪಾಲ

ರಾಗನವರೋಜು – ಏಕತಾಳ

ಅಮ್ಮ,ಯ್ಯಾ ऽ, ಬಿಡುದುಗು,ಡ ॥ ನೀ । ಸುಮ್ಮನೆ, ಯೋ ऽ,
ಚಿಸಿಬೇ,ಡ ऽ ॥ ಬೊಮ್ಮನ,ನಮರರ,ನೊಮ್ಮೆಗೆ, ಗಣಿಪೆನೆ । ಘಮ್ಮನೆ,
ಭೂಪನ, ಹಮ್ಮನು, ನಿಲಿಸುವೆ ॥ –ರತ್ನಾವತೀ ಕಲ್ಯಾಣ

ರಾಗ ಅಹೇರಿ – ಏಕತಾಳ

ಕುಂಭಕು,ಚಾನ್ವಿತೆ, ಯಾರೀ,ಕೆಯು ಜಲ । ಜಾಂಬಕಿ, ಗುಣವತಿ,
ಯು ऽ ॥ ಚಂದ್ರಮು । ಬಿಂಬಸ,ಮಾನ ಶು,ಭಾನನೆ, ಕಾಣ್ಬಳು । ಮುಂಭಾ,
ಗದಿ ಸತಿ,ಯು ऽ ॥ ಗಿರಿಜೆಯು । ಹಂಬಲ, ಬಿಡು ನಿನ,ಗಿಂಬು ಗೊ,ಡುವೆ
ತಾ,ನೆಂಬಂ,ತೆಸೆವಳು, ಸಂಭ್ರಮ,ದೋರುತ ऽ ॥ –ಭಸ್ಮಾಸುರ ಮೋಹಿನಿ

ರಾಗ ಜಂಜೂಟಿ–ಏಕತಾಳ

ಹಾಹಾ,ಯೆನುತಲಿ, ರುದ್ರನ, ಕಂಡಳು । ಹಾಹಾ,ರವದೊಳು,
ಹಾರಿದ,ಳು ऽ ॥ ನಗೆ । ಬೀರಿದ,ಳು ऽ ॥ ಮುದ । ಮೇರಿದಳು ऽ ॥
–ಬ್ರಹ್ಮ ಕಪಾಲ

ರಾಗ ಬೇಗಡೆ–ಏಕತಾಳ

ಪೊರೆಯೋ ऽ ॥ ಹಿಮ,ಗಿರಿವರ,ನಂದನೆ । ಪೊರೆಯೋ ऽ ॥ ಪಲ್ಲವಿ ॥

*

ಕರುಣಾ,ಕರೆ ಶಂ,ಕರಿ ಪುರ,ಹರ ಪ್ರಿಯೆ । ದುರಿತಭಿ,ದುರೆ ಮುರ,ಹರ ಸೋ,
ದರಿಯೋ ॥ –ಖರಾಸುರ ವಧೆ

ರಾಗ ನವರೋಜು–ಆದಿತಾಳ

ಬಾ ಮಗ,ನೇ ೧ ,ಪಿತನೆಡೆ,ಗೆ ऽ ॥ ಬಹು । ಪ್ರೇಮವ, ತೋ ೧ ,ರಿಸು
ನಮ,ಗೆ ऽ ॥ ನೀ ಮುನಿ,ದು ೧ , ಪೋಗುವು,ದೇ ऽ ॥ ರಣ । ಕಾಮಿತ,ದಿ ೧ ,
ಆಗಲುವು,ದೇ? ॥ –ಅಭಿಮನ್ಯು ಕಾಳಗ

ರಾಗ ಸುರಟಿ–ಆದಿತಾಳ

ಆರತಿ, ಬೆಳಗಿದಳು, ಽ ॥ ಮುನಿಪಗೆ । ನಾರಿಯು, ಭಕ್ತಿಯೊ,ಳು ಽ ॥

ಚಿನ್ನದ, ಬಟ್ಟಲ,ಲಿ ಽ ॥ ತುಂಬುತ । ರನ್ನಘ,ಲಂಗಳ,ಲಿ ಽ ॥ ವಿಣ್ಣಿ* ಕ,ರ್ಪೂ ರದ,ಲಿ ಽ ॥ ಗುಣಸಂ । ಪನ್ನಗೆ, ಹರ್ಷದ,ಲಿ ಽ ॥

–ಕಾರ್ತವೀರ್ಯಾರ್ಜುನ ಕಾಳಗ

ಧವಳಾರ ಪದ– ರಾಗ ಆಹೇರಿ–ಆದಿತಾಳ

ಆರತಿ, ಬೆಳಗಿದ,ರು ಽ ॥ ಕಾ,ಮಿನಿಯರು । ಆರತಿ, ಬೆಳಗಿದ,ರು ಽ ॥ ಪಲ್ಲವಿ ॥ ಬಂಗಾ,ರದ ಹರಿ,ವಾಣದಿ, ಸೊಬಗಿನ । ಶೃಂಗಾ,ರದ ಕ,ರ್ಪೂರವ, ಬೆಳಗಿಸಿ ॥

–ಬ್ರಹ್ಮ ಕಪಾಲ

ಕೆಳಗಿನ ಪದದಲ್ಲಿ ತ್ರಿಮಾತ್ರಾ ಗಣ ಪಂಚಮಾತ್ರಾ ಗಣಗಳು ಪುನರಾವರ್ತನಗೊಂಡು ಬರುವುವು.

ರಾಗ ಧನ್ಯಾಸಿ–ಏಕತಾಳ

ಕೇಳಿ,ರೆನ್ನ ನುಡಿ, ಕಾಳಿ, ಚಂಡಿಯರು । ತಾಳಿ, ತಾಳಿಸುಡಿ,ಬಾಳು, ವೆ ಽ ॥ ಕೋಳು,ಹೋಯ್ತು ಲೋ,ಕಾಳಿ,ಯೆಲ್ಲ ನಿ । ವ್ಮೊಳು,ತನವ ಬಿಡಿ, ಪೇಳು,ವೆ ಽ ॥

–ದ್ರೌಪದೀ ಪ್ರತಾಪ

ತ್ರಿಮಾತ್ರಾಗಣ ಚತುರ್ಮಾತ್ರಾಗಣಬದ್ಧ ಗೀತಗಳು

ತ್ರಿಮಾತ್ರಾಗಣ ಚತುರ್ಮಾತ್ರಾ ಗಣಗಳು ಪುನರಾವರ್ತನಗೊಂಡು ಬರುವ ಪದಗಳಲ್ಲಿ ಲಘುಗುರುಗಳ ತ್ರಿಮಾತ್ರಾಗಣವೂ ಲಘುಗುರು ಲಘುಗಳ ಚತುರ್ಮಾತ್ರಾಗಣ (ಜಗಣ) ವೂ ಬರಕೂಡದು.

ರಾಗ ಸೌರಾಷ್ಟ್ರ–ತ್ರಿವುಡೆತಾಳ

ಶ್ರೀರ,ಮಣನೆನ,ಗೊಲಿದು,ಬುದ್ಧಿಯು । ಪ್ರೇರಿ,ಸಿದನನಿ, ತುಸಿರು,ವೆನು ಸಂ । ಸಾರ,ದೊಳಗತಿ, ಸುಖವ, ತೋರುವ । ಚಾರು, ಕಥೆಯು ಽ ॥

–ಸಮುದ್ರ ಮಥನ

ರಾಗ ಶಂಕರಾಭರಣ–ತ್ರಿವುಡೆತಾಳ

ಮಗನೆ, ನೀನೀ,ಪರಿಯೊ,ಳರುಹುವ । ಬಗೆಯು,ದೇನೈ, ಮನದ,ಲಿ ಽ ॥

ಬಗೆಯು,ದಿರು ಸೇ,ವಕನೆ,ನುತ್ತಲಿ । ಸುಗುಣ, ನಿಧಿಯೇ s ॥

—ರಾವಣ ವಧೆ

ರಾಗ ತೋಡಿ-ತ್ರಿವುಡೆತಾಳ

ಎಲೆ ಮಹೀ,ಪತಿ, ಚಿಂತೆ,ಯೇಕೈ । ಜಲಜ,ನಾಭನ, ಕರುಣ,ದಿಂದಲಿ। ಕಲಹ,ಕಾನುವ,ರಿಲ್ಲ, ನಿನ್ನ,ಲ್ಲಿ s ॥ ಇಳೆಯು, ಪಾಲಿಪ, ಹರ್ಷ,ದೇಳ್ಗೆ ಯು । ಕಳೆಯು, ಕುಂದಿದೆ, ತವಮು,ಖಾಬ್ಜ ದಿ । ತಿಳುಹು, ನೀ ಮರೆ,ಮಾಜ,ದೆನ್ನ, ಲ್ಲಿ s ॥

—ಅನುಸಾಲ್ವಗರ್ವಭಂಗ

ರಾಗ ಮಧು ಮಾಧವಿ-ತ್ರಿವುಡೆತಾಳ

ಧರೆಯ, ಸಾಮದಿ, ಕೊಡೆನು, ಸಂಗರ । ವಿರಚಿ,ಸುವೆನೆಂ,ದೆನುತ, ಚಿನ್ಮಯ । ಗರುಹಿ, ಕಳುಹಿದೆ,ನೀನು, ಮುಂದಣ । ಪರಿಯ.ನರಿಯದೆ, ತರ ಳ,ನೇ s ॥

—ಭೀಷ್ಮಾರ್ಜುನ ಕಾಳಗ

ರಾಗ ಮಧ್ಯಮಾವತಿ-ತ್ರಿವುಡೆತಾಳ

ಹರತ,ನಯ ಕರಿ,ವದನ, ಗಣಪತಿ । ಪರಮ, ಮೂಷಕ,ವಾಹ,ಗುಣ ನಿಧಿ। ಗಿರಿಸು,ತಾತ್ಮಜ, ನಿನ್ನ, ಭಜಿಪೆನು । ಕರುಣ,ದೊಳು ಸಲ,ಹೆನ್ನ, ನು s ॥ ಶರಣು ಶರಣು s ॥

—ಕುಮುದ್ವತೀ ಕಲ್ಯಾಣ

ರಾಗ ಮಧ್ಯಮಾವತಿ-ತ್ರಿವುಡೆತಾಳ

ಗಜವ,ದನ ಗಿರಿ,ವರ ಸು,ತಾತ್ಮಜ । ತ್ರಿಜಗ,ದೀಶ ಗು,ಹಾಗ್ರ,ಜ s ॥
ಅಜಸು,ರಾರ್ಚಿತ, ಚರಣ,ಸರಸಿಜ । ಭಜಕ, ಸಂಕುಲ, ಸುರಕು,ಜ s ॥
ಶರಣು, ಶರಣು s ॥

—ಪಾರಿಜಾತ

ರಾಗ ಯಮುನಾ ಕಲ್ಯಾಣಿ-ತ್ರಿವುಡೆತಾಳ

ಮಂಗ,ಳಂ ಜಯ, ಮಂಗ,ಳಂ ಶುಭ,ಮಂಗ,ಳಂ ಮಹ,ಲಿಂಗ,ಗೆ s ॥
ಅಂಗ,ಜಾರಿ ಭು,ಜಂಗ, ಭೂಷಸಿ,ತಾಂಗ, ಕರುಣಾ,ಪಾಂಗ,ಗೆ s ॥ಪ॥
ನೀಲ,ಕಂಧರ, ಶೂಲ,ಧರ ಶಿರ,ಮಾಲ, ಗಿರಿಜಾ,ಲೋಲ,ಗೆ s ॥
ಕಾಲ, ಕಾಲಕ,ಪಾಲ, ಭೃದ್ಗ ಣ । ಪಾಲ, ತ್ರಿಗುಣ ಸು,ಶೀಲ,ಗೆ s ॥

—ಕುಮಾರ ವಿಜಯ

ತ್ರಿಮಾತ್ರಾ ಗಣ ಚತುರ್ಮಾತ್ರಾ ಗಣಬದ್ಧ ಗೀತಗಳ ವರಣದಲ್ಲಿ ಕೆಳಗಿನಂತೆ ಗಣಗಳಿರಬಹುದು.

I ಒಂದು ಚತುರ್ಮಾತ್ರಾ ಗಣ

II ಒಂದು ದ್ವಿಮಾತ್ರಾ ಗಣ - ಒಂದು ತ್ರಿಮಾತ್ರಾ ಗಣ - ಒಂದು ಚತುರ್ಮಾತ್ರಾ ಗಣ.

ವರಣದ ಪೂರ್ವಪಾದ ಮತ್ತು ಉತ್ತರಪಾದಗಳ ಅಂತ್ಯದಲ್ಲಿ ಗುರುವಾಗಲಿ ಗುರ್ವಂತ ಚತುರ್ಮಾತ್ರಾ ಗಣವಾಗಲಿ ಬರುವುದು.

ರಾಗ ಭೈರವಿ–ತ್ರಿವುಡೆತಾಳ

ಬಂದ, ನಾಗ ऽ ॥ ರಥದಲಿ । ಬಂದ,ನಾಗ ऽ ॥ ಪಲ್ಲವಿ ॥ ಬಂದ, ನಾಗೋ,ಕುಲದೊ,ಳಿರುತಿಹ । ಸಿಂಧು,ಶಯನನ, ಕಾಂಬ, ತವಕದಿ ॥ ಅನುಪಲ್ಲವಿ ॥ ಬರ್‍ತ, ಮನದಲಿ, ಹರಿಯ, ನೆನೆಯುತ । ದುರುಳ, ಕಂಸನ, ಚರನೆ,

*

ಮತ ಶ್ರೀ । ಹರಿಯು, ನನ್ನನು, ಕರೆಯ,ನೋ ವೇಣ್ । ಕರವಿ,ಡಿದು ಮ, ನ್ನಿಪನೊ, ನಾನದ । ನರಿಯೆ, ನೀ ಬ್ರ,ಹ್ಮಾಂಡ, ವು ದರದೊ । ಳಿರಿಸಿ, ಕೊಂಡಿಹ,ನೆಂದು, ಶ್ರು,ತಿಗಳು । ಒರಲು,ತಿಪೆಯೆ,ನೊಬ್ಬ,ನನುತಾ । ಕರುಣಿ, ಸದೆ ಬಿಡ,ನೆಂದು, ಭಕ್ತನು ॥ ಬಂದ,ನಾಗ ऽ ॥ –ಕಂಸ ವಧೆ

ರಾಗ ಭೈರವಿ – ತ್ರಿವುಡೆತಾಳ

ಬಂದ,ಳಾಗ ऽ ॥ ಪೂತನಿ । ಬಂದ,ಳಾಗ ऽ ॥ ಪಲ್ಲವಿ ॥ ಮಂದ,ಮತಿಕಂ, ಸಾಖ್ಯ,ನಾಜ್ಞೆ,ಯೊ । ಳಂದು, ಶಿಶುಗಳ, ಕೊಂದು, ಕೂಗುತ ॥ ಅನುಪಲ್ಲವಿ ॥ ಅಸುರ,ಭಾವವ ಮರೆಸಿ ತನುವಿನೊ । ಳೆಸೆವ, ಸೀರೆಯ, ನುಟ್ಟ,ಳು ऽ ॥ ಬಿಸಜ, ಕೋರಕ ಕುಚಕೆ, ಕುಪ್ಪಸ । ಹೊಸೆದು, ಹೊಂದಿಸಿ, ಕೊಟ್ಟ,ಳು ऽ॥ ನೊಸಲಿ,ಗಮರುವ, ದಿವ್ಯ, ಕಸ್ತುರಿ । ಯೆಸೆವ, ನಾಮವ,ನಿಟ್ಟ,ಳು ऽ ॥ ಕುಸುಮ, ಶರನರ,ಗಿಣಿಯ, ರೀತಿಯೋಳೊಸಗೆ, ಮಿಗೆ ರಂ,ಜಿಸಲು, ತವಕದಿ ॥ –ಕೃಷ್ಣ ಚರಿತೆ

ರಾಗಬೇಗಡೆ – ಅಷ್ಟತಾಳ

ಪಾಲಿ,ಸೈ ಗೋ,ಪಾಲ,ವನಮಾ,ಲ ऽ ॥ ದುರಿ,ತಾಬ್ಧಿ,ವಡಬಸು ।

ಶೀಲ, ದೇವಕಿ, ಬಾಲ,ಶ್ರೀ*ಲೋ,ಲ ಽ ॥ ಬೀಳು,ಗೊಡು ಕೈ,ವಲ್ಯ,ಕವ ನಿಯು। ಮೇಲೆ, ನಾನೀ, ವೇಳೆ,ಗೆಸದಿದ। ಕೀಳು,ಕರ್ಮವ,ಹರಿಸು, ಜನ್ಮಕೆ। ಬೀಳಿ,ಸದಿರು ದ,ಯಾಳು,ನರಹರೆ ॥ —ಯಾದವಾಭ್ಯುದಯ

ರಾಗಬೇಗಡೆ – ಏಕತಾಳ

ಲಾಲಿ,ಸೆಲೆ ಸುರ,ಪಾಲ,ಕನೆ ನುಡಿ,ಯು ಽ ॥ ನಿ,ನ್ನೆಡೆಗೆ,ಬಂದಿಹ । ಊಳಿ,ಗವನಾ, ಪೇಳು,ವೆನು ಜೀ,ಯು ಽ ॥ ಪಲ್ಲವಿ ॥ ಕಾಲ,ಗತಿಯಿದು, ಖೂಳ,ರಾಕ್ಷಸ । ರಾಲ,ಯುದೊಳವ,ರಾಳು,ತನಗಳ । ಕೇಳಿ,ಮನವಿದು, ತಾಳ,ಲರಿವುದೆ ? ॥ ಭಾಳ,ನೇತ್ರಗೆ, ಮೇಲ,ರಿಕೆಗಳು ॥ ಅನುಪಲ್ಲವಿ॥ ವಾರಿ, ಧಿಯು ನಡು,ಸೇರಿ, ರಾಜಿಪ । ಧಾರಿ,ಣಿಯುಸರಿ,ಯು ಽ ॥ ಮತ್ತಾ । ಭೂರ, ಮಣಿನಹ, ಶೂರ,ಪದ್ಮನ । ಪಾರ, ಭೂಸಿರಿ,ಯು ಽ ॥ ವರ್ಣಿಸ। ಲಾರಿ, ಗಳ ವದು,ತೋರು,ವುದು ಗಂ।ಭೀರ, ಬಲು ಪರಿ,ಯು ಽ ॥ ವಸುಮತಿ । ಗಾರ,ವಿಯೊ ಮೇ,ಣಾರೋ,ಜನಕಾ। ಧಾರಿಯೆನೆ ದೊರೆ,ಯು ॥ ನಗರದ। ಭೂರಿ, ವಿಭವವಾ, ಪೂರ,ವರಿವೊಡೆ। ಸ್ವಾರಿ,ಗೆಯ್ಯಲು, ಘೋರ,ರಾಕ್ಷಸ। ವಾರ,ವಂದಿತ, ಕ್ರೂರ,ಕರ್ಮಿಯು । ಪೋರ,ತನದ ವಿ,ಚಾರ, ಕೃತ್ಯವ ॥

—ಕುಮಾರವಿಜಯ

ಪಲ್ಲವಿ ಅನುಪಲ್ಲವಿಗಳನ್ನಿಡದೆ "ಚರಣ" ಮಾತ್ರವನ್ನೇ ಬರೆಯುವ ಸಂಪ್ರದಾಯವಿದೆ.

ಪಂಚಮಾತ್ರಾಗಣಬದ್ಧ ಗೀತಗಳು

ಪಂಚಮಾತ್ರಾಗಣಬಂಧಗಳ ಕೆಲವು ನಿರ್ದಿಷ್ಟ ಸ್ಥಾನಗಳಲ್ಲಿ ಗುರುವಾಗಲಿ ದ್ವಿಕಲ ಗುರುವಾಗಲಿ ಬರುವುದು. ಇವುಗಳಲ್ಲಿ ಲಘು ಗುರು ಗುರು (ಯ) ಗಣ ಮತ್ತು ಲಘು ಗುರು ಲಘು ಲಘು ಗಣಗಳು ಬರಕೂಡದು.

ರಾಗ ಕಲ್ಯಾಣಿ ಝಂಪೆತಾಳ

ಬಿಸಜಲೋ,ಚನೆ ನಿನ್ನ, ಪೆಸರೇನು ?, ಪೇಳೇ ಽ ॥
ಶಶಿಮುಖಿಯೆ, ಪೆತ್ತವರ,ನುಸಿರು ಗುಣ ಶೀಲೇ ಽ ॥
ಕುಸುಮ ಗಂ,ಧಿನಿ ಮನಸು, ಕದಡಿಹುದು, ಕೇಳೇ ಽ ॥

ಪೊಸ ಯೌವ,ನಾಂಗಿನೀ, ಸಲಹೆನ್ನ, ಬಾಲೇ s ॥ –ವಿದ್ಯುನ್ಮತೀ ಕಲ್ಯಾಣ

ರಾಗ ಕಲ್ಯಾಣಿ ಝಂಪೆತಾಳ

ಭೇರಿತು,ತ್ತೂರಿ ಮಿಗೆ, ಭೋರುಗರೆ,ಯೆ s ॥
ನಾರಿಯರು, ಪೊಗಳುತ್ತ, ಮನದಿ ನಲಿ,ಯೆ s ॥
ಏರುತಂ,ದಣವನ್ನು, ಸಭೆಗೆ ಬರ,ಲು s ॥
ಧಾರಿಣೀ,ಶ್ವರರೆಲ್ಲ, ನೋಡುತಿರ,ಲು s ॥ –ದ್ರೌಪದೀ ಸ್ವಯಂವರ

ರಾಗ ಭೈರವಿ ಝಂಪೆತಾಳ

ಶ್ರೀ ವೀರ,ಭದ್ರ ಪರ । ಪಾವನಾ,ತ್ಮಕ ದೇವ । ದೇವ ಮಂ,ಗಳ ಮತಿಯು । ನೀವು ದನ,ವರತ s ॥ –ಶಿವ ಕಲ್ಯಾಣ

ರಾಗ ಕಾಂಭೋಜಿ ಝಂಪೆತಾಳ

ನಾರೀ ಶಿ,ರೋಮಣಿಯೆ, ನೀರೆ ಭಾ,ಮಾಮಣಿಯೆ । ವಾರನರ,ಗಿಣಿಯೆ ಕೇ,ಳೆನಗೆ s ॥ ಮೂರು ಲೋ,ಕದ ಸುಭಟ, ಪಾರದೊಳ,ಗಿದಿರಿಲ್ಲ । ಕಾರಣವ,ನರುಹುವೆನು, ನಿನಗೆ s ॥ –ನಿಕುಂಭಾಸುರವಧೆ

ರಾಗಮಾರವಿ – ಝಂಪೆತಾಳ

ಅಣ್ಣ ಕೇಳ್, ಸೌಭದ್ರೆ, ಬಣ್ಣ ದಿಂ,ದೆನ್ನೊಡನೆ । ಹಣ್ಣಿದಳು, ಧುರವ ಮುಕ್ಕಣ್ಣನಂ,ದದೊಳು s ॥ ಮಿಣ್ಣನಾ,ಕೆಯುಗರ್ವ, ಮಣ್ಣಗೂ,ಡಿಸಿದೆ ನಿದ । ನೆಣ್ಣದಿರು, ಮನದಿ ಪೂ.ಗಣ್ಣ ಓಂ,ತೆರಳು s ॥ –ದ್ರೌಪದೀಪ್ರತಾಪ

ರಾಗನಾಟಿ – ಝಂಪೆತಾಳ

ಮುದದಿಂದ, ನಿನ್ನ ಕೊಂಡಾಡುವೆನು, ಅನವರತ । ಮದಪೂರ,

ವಿಘ್ನೇಶ, ದೇವ ಜಗ,ದೀಶ s ॥ ಪಲ್ಲವಿ ॥ ಪರಬ್ರಹ್ಮ, ರೂಪ ವೇ,ದಾಂತ ಸಾ,ರಪ್ರಿಯನೆ । ಪುರುಹೂತ,ನಮಿತ ದಿ,ವ್ಯಾಂಘ್ರಿಕಮ,ಲ s ॥ ಗಿರಿಜಾ

ಕು,ಮಾರ ಆ,ದಿತ್ಯಕೋ,ಟಿ ಪ್ರಕಾಶ । ಕರಿವದನ, ಕರುಣಾಸ,ಮುದ್ರ ಭವ, ಛಿದ್ರ s ॥ –ಸಭಾಲಕ್ಷಣ

ರಾಗನಾಟಿ – ಝಂಪೆತಾಳ

ಜಯಬಾಲ, ಗೋಪಾಲ, ಜಯಜಯತು, ಜಯತು s ॥ ಪಲ್ಲವಿ ॥
ಜಯಗೋಪಿಕಾನಂದ, ಜಯವಿನುತ, ಜನವೃಂದ ।
ಜಯಸಚ್ಚಿ,ದಾನಂದ, ಜಯತು ಗೋ,ವಿಂದ s ॥ ಅನುಪಲ್ಲವಿ ॥
ನಂದಗೋ,ಪಕುಮಾರ, ನವನೀತ,ವರ ಚೋರ । ಸಿಂಧುಕ,ನ್ಯಾರಮಣ, ಸರಸಿರುಹ, ಚರಣ s ॥ ಇಂದ್ರಾದಿ,ಸುರ ನಮಿತ, ಈಶಸಖ, ಮಹಿಮಯುತ । ಸುಂದರಾಂ,ಬುದವರ್ಣ, ಸಕಲಗುಣ,ಪೂರ್ಣ s ॥

–ಕೃಷ್ಣಚರಿತೆ

ರಾಗ ಘಂಟಾರವ – ಝಂಪೆತಾಳ

ವರಮುನೀ,ಶ್ವರ ದೇವ, ಪರಮ ಗುರು,ವೇ s ॥ ಪಲ್ಲವಿ ॥
ಪರಮೇಷ್ಠಿ, ಸುಕುಮಾರ, ಎನ್ನ ರ,ಕ್ಷಿಸು ತಂದೆ । ಕರವ ಮುಗಿ,ಯುವೆನೆನ್ನ, ಮಾತನೀ, ಕೇಳು s ॥

–ಪುತ್ರ ಕಾಮೇಷ್ಟಿ

ರಾಗ ತುಜಾವಂತು-ಝಂಪೆತಾಳ

ಏನಾದು,ದಿಂದಿನಾ.ಹವದಿ ಕಲಿ,ಕರ್ಣ s ॥ ಮಾನನಿಧಿ,ಗಳಿಗೇತ,ಕೀಪರಿಯು,ಮೌನ s ॥ ಪಲ್ಲವಿ ॥ ದುಗುಡವೇ.ನಿದು ಬರಿದೆ, ಧುರಧುರಂ,ಧರರಿಂಗೆ । ವಿಗಡರವ,ರಿಂದೇನು, ವಿಕ್ರಮಕೆ, ಕುಂದು ? s ॥ ಹಗೆಯವರ, ಕೈಚಳಕ,ಹತಿಯು ಹಿರಿ,ದಾಗಿರಲು । ಬಗೆಯಲಾರ,ಳವೈಸೆ, ಬಿಡು ಮನೋ, ವ್ಯಥೆಯು s ॥

–ಕರ್ಣ ಪರ್ವ

ರಾಗ ಮುಖಾರಿ-ಝಂಪೆತಾಳ

ಚಿಂತೆಯೇ,ತಕೆ ಪ್ರಾಣ,ಕಾಂತ ಬರಿ.ದೆ s ॥ ಪಲ್ಲವಿ ॥ ಕಂತುವೈ,ರಿಯ ನೇಮ,ದಂತರವಿ,ದಿಂತಿರಲು ॥ ಅನು ಪಲ್ಲವಿ ॥ ವೀರನಿ,ನ್ನನು ಬರಿದೆ, ದೂರಿ ಫಲ,ವೇನಿಹುದು ? । ಘೋರ ರಾ,ಕ್ಷಸಿಯೊಳವಿ,ಚಾರವೇ.ನಿಹುದು ? s ॥ ವಾರಿಜಾ,ಸನನ ಕೈ,ಯೂರಿಕೆ ಚ,ಮತ್ಕೃತಿಯು । ಧಾರಿಣಿಯೊ,ಳೆಂತಿದನು, ಮೀರಬಹು,ದು ? s ॥

–ಕುಮಾರವಿಜಯ

ರಾಗ ದ್ವಿಜಾವಂತಿ-ಝಂಪೆತಾಳ

ಕ್ಷೇಮವೇ, ವೈರಾವ,ಣಾಖ್ಯ ನಿನ,ಗೆ s ॥ ಕಾಮಿನಿಯು, ಸಂಧ್ಯೆ ಪರಿ.ಣಾಮದಿಂ,ದಿಹಳೇ ? ॥ ಪಲ್ಲವಿ ॥ ಪುರಜನರು, ಪದುಳಿಗರೆ ?, ಪರಿಜನರು,

ಕುಶಲಿಗಳೇ ? । ಧರೆಯೆಲ್ಲ, ನಿನ್ನ ಕೈ,ಸೇರಿರ್ದು,ದೇ ? ऽ ॥ ಉರಗಪತಿ, ಯುವನಿಯುನು, ಸಾಧಿಸಿದೆ,ಯಾ ಬಳಿಕ । ಸುರರು ನಿ,ನ್ನಯ, ಪಾತಿ,ಗೆರವಿಲ್ಲ, ದಿಹರೇ ? ऽ ॥ —ಮೈರಾವಣ ಕಾಳಗ

ರಾಗ ಎರುಕಲ ಕಾಂಭೋಜಿ-ಝಂಪೆತಾಳ

ಕಂಡನ,ಕ್ರೂರ ನೀ,ರೊಳಗೆ ಶ್ರೀ.ಹರಿಯು ऽ ॥ ಕಂಡು ಭ್ರಮೆ,ಯುಡರೆ, ಭಯ,ಗೊಂಡೆದ್ದು, ಕಳವಳಿಸಿ ॥ ಪಲ್ಲವಿ ॥ ಶಿರವ ಮೋ.ಲೆತ್ತಿ ಹಿಂ,ದಿರುಗಿ ನೋ.ಡಿದ ರಥದಿ । ಹರಿಬಲರ, ಕಾಣುತ್ತ ಸ್ಮರಿಸಿದನು, ಮನದಿ ऽ ॥ ಎರಡನೆಯ,ಮುಳುಗಲಾ,ಸ್ಮರಪಿತನ, ಕಂಡು ತನು । ಮರೆದೆದ್ದು, ಮರಳಿ ಮುರ,ಹರನ ನೀ,ಕ್ಷಿಸಿ ಭರದಿ ॥ —ಕಂಸವಧೆ

ರಾಗಆಹೇರಿ – ಝಂಪೆತಾಳ

ಜಯಮಂ,ಗಳಂ ನಿತ್ಯ, ಶುಭಮಂಗ,ಳಂ ऽ ॥ ಪಲ್ಲವಿ ॥ ಕಮಲ ದಳ, ನೇತ್ರನಿಗೆ, ಕೈಟಭ,ಧ್ವಂಸನಿಗ । ಕಮನೀಯ. ಕೌಸ್ತುಭಾ,ಲಂಕೃತನಿ,ಗೆ ऽ ॥ ಕಮಲಾ ಮ,ನೋಹರಗೆ, ಕಾರುಣ್ಯ, ಸಾಗರಗೆ । ಕಮಲ ಸಖಿ, ಶತಕೋಟಿ, ನಿಭತೇಜ,ಗೆ ऽ ॥ —ದೇವೀಮಾಹಾತ್ಮ್ಯ

ಪಂಚಮಾತ್ರಾಗಣಬಂಧಗಳ ಮರಣದಲ್ಲಿ ಕೆಳಗಿನಂತೆ ಮಾತ್ರಾಗಣವಿರಬಹುದು.

| ಒಂದು ಪಂಚಮಾತ್ರಾಗಣ

|| ಒಂದು ತ್ರಿಮಾತ್ರಾಗಣ

ಮರಣದ ಪೂರ್ವಪಾದದ ಮತ್ತು ಉತ್ತರಪಾದದ ಅಂತ್ಯ ಸ್ಥಾನದಲ್ಲಿ ಗುರುವಾಗಲಿ ದ್ವಿಕಲ ಗುರುವಾಗಲಿ ನಿಲ್ಲುವುದು.

ರಾಗ ಕೇದಾರ ಗೌಳ – ಝಂಪೆತಾಳ

ನಳಿನಾಕ್ಷಿ, ಕೇಳೆ ಈ,ಗ ऽ ॥ ನರನೊಡನೆ । ಕಲಹಕ್ಕೈ,ದುವೆನು ಬೇ,ಗ ऽ ॥ ಕಳವಳಿ,ಸಬೇಡ ಮನ,ದಿ ऽ ॥ ಕೌಂತೇಯ । ಗಳಕುವವ,ನಲ್ಲ ರಣ,ದಿ ऽ ॥ —ಸುಧನ್ವ ಕಾಳಗ

ರಾಗ ನೀಲಾಂಬರಿ – ಝಂಪೆತಾಳ

ಹಾಕುವಶಾ,ರಕ ಸಮರ,ಶೂರ ಽ ॥ ಸಚ್ಚರಿತ । ಶ್ರೀಕಾಂತ, ಭಕ್ತೈಶರ, ನಿಧಿ ಸಮಗ,ಭೀರ ಽ ॥ ಲೋಕಮೂ,ರರೊಳು ನಿನ,ಗೆಣೆಯೇ ? ಽ ॥ ರಾಕ್ಷಸಾ । ನೀಕದೊಳ,ಗೆನ್ನ ಸ,ಮ್ಮೋಹನದ, ಕಣೆಯೇ ಽ ॥ –ಅತಿಕಾಯ ಕಾಳಗ

ರಾಗ ನೀಲಾಂಬರಿ – ಝಂಪೆತಾಳ – ತ್ರಿಪದಿ

ಜಯ ಸದಾ,ನಂದ ಭಗ,ವಂತ ಽ ॥ ಕಮಲಾಕ್ಷ । ಜಯಲೋಕ,ನಾಥ ಜಯ,ಜಯ ರಮಾ,ಕಾಂತ ಽ ॥ ಪಲ್ಲವಿ॥ ಅಸುರ ಶಿಶು, ಪಾಲ ಮದ, ಕಂಸ ಽ॥ ರಾಕ್ಷಸರ । ಪೆಸರು, ಘನ,ಮಾಯ್ತು ಖಳ,ವಂಶ ಽ ॥ ಅನ್ಯಾಯ,ವೆಸಗುವರು, ಮಿತಿಯಿಲ್ಲ, ತಿಂದು ಮಧು,ಮಾಂಸ ಽ ॥ –ಕೃಷ್ಣ ಚರಿತೆ

ರಾಗ ಕುರಂಜಿ–ಝಂಪೆತಾಳ

ಆರರಿಯ,ದಂತೆ ಗು,ಪ್ತದಲಿ ಽ ॥ ಇಟ್ಟು । ತೋರಿಸದೆ. ಇರ್ದ ಹೃದ, ಯದಲಿ ಽ ॥ ನಾರಿ ನೀ,ನರಿಯದಂ,ದದಲಿ ಽ ॥ ಇರುವ । ಧಾರಿಣಿಯ, ದ್ರವ್ಯ ದಂ,ದದಲಿ ಽ ॥ –ಪ್ರಭು ಚರಿತ್ರೆ

ರಾಗ ಆಹೇರಿ–ಝಂಪೆತಾಳ

ಏಕಿದಕೆ, ಚಿಂತಿಸುವೆ, ನೀನು ? ಽ ॥ ಪಾರ್ಥ । ನಾಕಾದು, ಕೊಡುವೆ ನಿಂ,ದಿನಲಿನಿ,ಮ್ಮುವನು ಽ ॥ ಪಲ್ಲವಿ॥ ಧಾಳಿಸುವ, ವಜ್ರ ಪಿಡಿ,ದಿಂದ್ರನಿದಿ, ರಾದೊಡೆಯು । ಕಾಲದಂ,ಡವನಾಂತು, ಯಮನು ಮಹಾ,ರಾಂತಡೆಯು । ಶೂಲವನು, ತುಡುಕಿ ಶಂ,ಕರನಡ್ಡ,ಹಾಯ್ದಡೆಯು । ತೋಳಬಲು,ಹನು ತೋರ,ಗೊಡೆನು ಽ ॥ ನಿನ್ನ । ನಾಳಿಗೊಳ,ಲವರಿಂಗೆ, ಸರ್ವಥಾ, ಬಿಡೆನು ಽ ॥ –ಸುಭದ್ರಾ ಕಲ್ಯಾಣ

ರಾಗ ಆಹೇರಿ – ಝಂಪೆತಾಳ

ಭಳಿರೆ ದು,ಶ್ಯಾಸನಾ,ಖ್ಯ ಽ ॥ ನಿನ್ನೊಡನೆ । ಕೊಳುಗುಳವ,ದಾರ್ಗೆಸಾ, ಖ್ಯ ಽ ॥ ಪಲ್ಲವಿ ॥ ಏಸುದಿನ, ಧನುವಿಸ,ಭ್ಯಾಸಮಂ,ಮಾಡಿದೆಯೊ । ವಾಸಿ ಪಂ,ಥಗಳೆಳ್ಳಿ,ತೀ ಸಮರ,ದೊಳಗೆನಾ । ವಿಸು ನೆರೆದಂತಾಯಿ,ತು ಽ॥ಪೌರು ಷದ । ವಿೂಸಲರಿ,ಯದೆ ಹೋಯಿ,ತು ಽ ॥ ಯುದ್ಧದ ವಿ। ಲಾಸದೊಳು, ಪ ಗೆಯಾಯಿ,ತು ಽ ॥ –ಕರ್ಣಪರ್ವ

ಷಣ್ಮಾತ್ರಾಗಣಬದ್ಧ ಗೀತಗಳು

ಕೆಲವು ಪದಗಳಲ್ಲಿ ಷಣ್ಮಾತ್ರಾಗಣದ ಗತಿಗೆ ಸರಿಯಹಾಗುವಂತೆ ದ್ವಿಮಾತ್ರಾಗಣ ಚತುರ್ಮಾತ್ರಾಗಣಗಳು ಪುನರಾವರ್ತನಗೊಂಡು ಬರುವುವು. ಈ ಪದಗಳ ಕೆಲವು ನಿರ್ದಿಷ್ಟ ಸ್ಥಾನಗಳಲ್ಲಿ ಗುರುವಾಗಲಿ ದ್ವಿಕಲ ಗುರುವಾಗಲಿ ನಿಲ್ಲುವುದು. ಇದರಲ್ಲಿ ಲಘುಗುರು ಲಘುಗಳ (ಜ) ಗಣ ಬರಕೂಡದು.

ರಾಗನಾಟಿ – ರೂಪಕತಾಳ

ಜಯ,ಜಯಗಣ,ಗಣ, ನಾಯಕ । ಜಯ,ಜಯಮಂ,ಗಳ, ದಾಯಕ,
ಜಯ, ಜಯ ವಿ,ಘ್ನನಿ,ಪಾರಕ । ಜಯ,ಜಯ ಸಿರಿ,ಬೆನ,ಕ ಽ ॥

–ಕುಮಾರ ವಿಜಯ

ರಾಗ ಜಂಜೂಟಿ–ರೂಪಕತಾಳ

ಪಾ,ರ್ಥಿವಕುಲ, ಚಿಂ,ತಾಮಣಿ । ಪಾ,ರ್ಥಮಹಾ,ಪ್ರಭು,ವೇ ಽ ॥
ಅ,ರ್ಥ ಪ್ರಾ,ಣಗಳೆರಡೇ । ಸ್ವಾ,ರ್ಥಕೆ ಭೂ,ವಿಭು,ವೇ ಽ ॥

–ಕೃಷ್ಣಾರ್ಜುನರ ಕಾಳಗ

ರಾಗ ನೀಲಾಂಬರಿ–ರೂಪಕತಾಳ

ಅಂ,ಗಮಹೇ,ಶ್ವರ, ಪ್ರಿಯಸಖ । ತುಂ,ಗಪರಾ,ಕ್ರಮಿ, ನಿನಗೀ ।
ಭಂ,ಗದಮರ,ಣವು, ಘಟಿಸಿತೆ । ಸಂ,ಗರದೊಳು ?, ಕರ್ಣಾ ಽ ॥ ಪಲ್ಲವಿ॥
ಧುರ,ದೊಳಗೆ,ನ್ನಯ, ನೆವದೊಳು । ತೊರೆ,ದೆಯ ? ಪ್ರಾ,ಣವ, ನಿನ್ನಯ ।
ಪರ,ಮ ತ್ಯಾ,ಗಕೆ, ಭುವನದಿ । ಸರಿ,ಗಾಣೆನು, ಕ,ರ್ಣಾ ಽ ॥ ಎರ,ಕದೊಳಾರೊಡ,ನುಣ್ಣುವೆ । ಸರ,ಸವನಾ,ರೊಡ,ನಾಡುವೆ । ಧರೆ,ಯಿನ್ನೇ,ತಕೆ, ನನಗೈ । ಸಿರಿ,ಯೇತಕೆ, ಕ,ರ್ಣಾ ಽ ॥

–ದುರ್ಯೋಧನ ವಧೆ

ರಾಗ ಸುರಟಿ–ಮಟ್ಟೆತಾಳ

ಎಡೆ,ಬಿಡದವ,ರು ಽ ಹೊಡೆ,ದಾಡಿದ,ರು ಽ ॥ ಪಲ್ಲವಿ ॥
ಧಡ,ಧಡಿಸುತ, ಭೋ,ರ್ಗರೆಯುತ । ಲಡಿ,ಯಿಡುತೊಡ,ನೊಡ,ನೆ ಽ ॥
ತುಡು,ಕುತ ಪಿಡಿ,ದೆಳೆ,ಯುತ ಬಡಿ । ದಡ,ಗೆಡ ದಡ,ಘಡ,ನೆ ಽ ॥

–ರಾಜಸೂಯಾಧ್ವರ

ರಾಗ ಸುರಟಿ ಮಟ್ಟೆತಾಳ

ಭಳಿ,ಭಳಿರೆಲೆ, ವೀ,ರ ಽ ॥ ಕೊಳು,ಗುಳುದೊಳು,ಶೂ,ರ ಽ ॥ ಪಲ್ಲವಿ॥

ತಿಳಿ,ದೆನು ನಿಲು,ನಿಲು,ಗರ್ವವ । ನಿಳು,ಹುವೆನು ಕು,ಮಾರ ಽ ॥ ಅನು
ಪಲ್ಲವಿ ॥ ಖಡು,ಗವು ಪೋಗ,ಲ್ಕೇನೈ । ಪಿಡಿ,ದಿಹ ಗದೆ,ಯಿಂ,ದ ಽ ॥
ಹೊಡೆ,ದಪ್ಪಳಿ,ಸುವೆ ನಿಮಿಷದಿ । ಹುಡು,ಗನೆಯೆನ,ಲೆಂ,ದ ಽ ॥

-ಕುಮಾರ ವಿಜಯ

ಕೆಳಗಿನ ಗೀತಗಳಲ್ಲಿ ಷಣ್ಮಾತ್ರಾ ಗಣಗಳು ಬರುವುವು. ಇವುಗಳಲ್ಲಿ ಲಘುಗುರು ಲಘುಗುರುಗಣ, ಲಘುಗುರು ಗುರುಲಘುಗಣ, – ಲಘುಗುರು ಲಘುಲಘು ಲಘುಗಣ ಬರಕೂಡದು.

ರಾಗ ಹಿಂದುಸ್ತಾನಿ ಕಾಪಿ – ರೂಪಕತಾಳ

ಬಾರೆನುತಲಿ, ಕರೆಯುಲಿಲ್ಲ । ದೂರದೊಳಿಗೊ,ಬಪ್ಪನಲ್ಲ ॥
ಮಾರನಿಗೆ,ನ್ನೊಳು ಮುನಿಸೇ? । ತೋರಿದ ನೀ,ತನ ಮನಸೇ! ॥

-ಕುಮಾರವಿಜಯ

ರಾಗ ಹಿಂದೋಳ – ರೂಪಕತಾಳ

ರಾಮ ನಾಮ, ವೊಂದೆ ತಾರ,ಕ ಽ ॥ ಭಜಿಸೆ ಸದಾ। ಕಾಮಿತಾರ್ಥ, ಮೋಕ್ಷಕಾರ,ಕ ಽ ॥ ಪಲ್ಲವಿ ॥ ಸೋಮ ಮೌಳಿ, ಯೊರೆದ ನಾಮ । ಮಾಮ ನೋಜ್ಞ, ಮಂತ್ರರಾಜ । ನೇಮದಿಂದ, ಜಪಿಸುವವಗೆ । ಕ್ಷೇಮವೀವ, ದಿವ್ಯಶ್ರೀ ॥

-ರಾಮನಾಮಮಹಿಮೆ

ರಾಗ ಕಾಂಭೋಜಿ – ಮಟ್ಟೆತಾಳ

ಕಲ್ಲು ಮರದ, ಮಳೆಯು ಗರೆವೆ,ನೆನ್ನು ತಲಂ,ದು ಽ ॥ ಅಸುರೆ ।
ತಲ್ಲಣಿಸದೆ, ಸಿಡಿಲಿನಂತೆ, ಹೊಡೆದಳು ಬಂದು ಽ ॥ -ಸೀತಾಕಲ್ಯಾಣ

ಅಂಶಿಗಣ ಬದ್ಧ ಗೀತಗಳು

ಅಂಶಿಗಣಬದ್ಧ ಗೀತಗಳನ್ನು ವಿಷ್ಣುಗಣ ಪ್ರಧಾನ ಬಂಧಗಳು–ಬ್ರಹ್ಮ ಗಣ ಪ್ರಧಾನ ಬಂಧಗಳು–ರುದ್ರಗಣ ಪ್ರಧಾನ ಬಂಧಗಳು ಎಂದು ವರ್ಗೀಕರಿಸಬಹುದು.

ವಿಷ್ಣುಗಣ ಪ್ರಧಾನ ಬಂಧಗಳು

ಕೆಲವು ವಿಷ್ಣುಗಣ ಪ್ರಧಾನ ಬಂಧಗಳ ನಿಶ್ಚಿತ ಪಾದಾಂತ್ಯ ಸ್ಥಾನದಲ್ಲಿ ಬ್ರಹ್ಮ ಗಣವೂ ಬರುತ್ತದೆ. ವಿರಳವಾಗಿ ಪಾದಾದಿಯಲ್ಲಿಯೂ ಬ್ರಹ್ಮಗಣವು

ನಿಲ್ಲುತ್ತದೆ. ವಿಷ್ಣುಗಣ ಸ್ಥಾನದಲ್ಲಿ ವಿಕಲ್ಪವಾಗಿ ಬರುವ ಬ್ರಹ್ಮಗಣವು ವಿಷ್ಣುಗಣದ ಮೌಲ್ಯವನ್ನೇ ಪಡೆಯುವುದು. ಕೆಲವು ವಿಷ್ಣುಗಣ ಪ್ರಧಾನ ಬಂಧಗಳ ನಿಶ್ಚಿತ ಪಾದಾಂತ್ಯ ಸ್ಥಾನದಲ್ಲಿ ರುದ್ರಗಣವಿರುತ್ತದೆ. ಇದನ್ನು ವಿಷ್ಣುಗಣ ಮತ್ತು ಗುರುವಾಗಿ ಪರಿಸಬೇಕಾಗುವುದು. ಆದುದರಿಂದ ಪಾದಾಂತ್ಯದ ರುದ್ರಗಣವನ್ನು ವಿಷ್ಣುಗಣ ಮತ್ತು ಗುರುವಾಗಿ ವಿಭಜಿಸಿ ಬರೆಯಲಾಗುವುದು.

ಸಾಂಗತ್ಯ

ಸಾಂಗತ್ಯವೆಂಬ ಛಂದೋಬಂಧವನ್ನು ಕಥಾ ಸನ್ನಿವೇಶಕ್ಕೆ ಒಪ್ಪುವಂತೆ ಯಾವ ರಾಗದಲ್ಲಿಯೂ ಹಾಡಬಹುದು.

ಸಾಂಗತ್ಯ – ರಾಗತೋಡಿ – ರೂಪಕತಾಳ

ವರದೆ ಶಂ,ಕರಿ ಪುಣ್ಯ,ಚರಿತೆ ಕೋ,ಮಲಗಾತ್ರೆ । ಹರಿಣಲೋ,ಚನೆ, ಚಂದ್ರ,ವಕ್ತ್ರೇ ॥ ತರುಣಾರ್ಕ, ಕೋಟಿ ಭಾ,ಸುರೆ ಲಂಬೋ,ದರವಾತೆ । ಗಿರಿಜಾತೆ, ಲೋಕವಿ,ಖ್ಯಾತೇ ॥ –ರುಕ್ಮಿಣೀಸ್ವಯಂವರ

ಸೊಬಗಿನ ಸೋನೆ

ಸೊಬಗಿನ ಸೋನೆಯೆಂಬ ಛಂದಸ್ಸು ಯಕ್ಷಗಾನಕೃತಿಗಳಲ್ಲಿ ರಾಗತಾಳ ಬದ್ಧ ಗೀತವಾಗಿ ಪ್ರಯೋಗಗೊಂಡಿದೆ.

ರಾಗದ್ವಿಜಾವಂತಿ – ಅಟತಾಳ

ಚಾರು ಚ,ರಿತ್ರೆ ಸ,ದ್ಗುಣವಂತೆ, ಶರಧಿ ಗಂ।ಭೀರೆ ಲಾ,ವಣ್ಯ ಪಾ, ರಾವಾರೇ ॥ ವಾರಿಜ, ವದನೆ ವಿ,ಲಾಸಿನಿ ಕೊರವಿಶೃಂ। ಗಾರವಾ,ದಳು ಮೃದು, ಲಲಿತಾಂಗೀ ॥ –ಕೃಷ್ಣ ಚರಿತೆ

ರಾಗ ಕೇದಾರಗೌಳ – ಅಟತಾಳ

ಮಂದರ,ಧರ ದಶ,ಕಂಧರ,ಹರಣ ಪು । ರಂದರ,ನುತಚರ,ಣ ಽ ॥
ಸುಂದರ,ಕಾಯ ವ,ಸುಂಧರಾ,ಪಾಲ ಮು । ಕುಂದರ,ಮಾರಮ,ಣ ಽ ॥
–ಭಾನುಮತೀ ಕಲ್ಯಾಣ

ರಾಗ ಕಮಾಚ್ – ಅಟತಾಳ

ನೀರ ಸಿಂ,ಪಡಿಸುವ, ಬನ್ನಿರೆ, ಬನದೊಳು । ಸಾರಸ,ಸಖನುರೆ,ವಿಾರಿದ, ಬಿಸಿಲೊಳು ॥ ಪಲ್ಲವಿ ॥ ಜುಳುಜುಳು, ಹರಿಯುವ, ಝರಿಗಳ, ನಿರ್ಮಲ । ಜಲಗಳು, ಪೊಳೆವುವು, ಕಲಶವ, ತುಂಬಿಸಿ ॥ –ಶಕುಂತಲಾ ಪರಿಣಯ

ರಾಗ ರೇಗುಪ್ತಿ – ಅಟತಾಳ

ಪತಿಯು ಮಂ,ದಿರಕೆ ನೀ, ಪೋದ ಮೇ,ಲಿನಿತು ಪ। ದ್ಧತಿಯಿಂದ, ನಡೆಯಬೇ,ಕಮ್ಮ ಕೇ,ಳು ऽ ॥ ಹಿತದಿಂದೆ,ಲ್ಲರಿಗೂ ನ,ಮ್ರತೆಯ ತೋ,ರು ತ ಪ್ರೌಢ । ಮತಳಾಗಿ,ರಲುಬೇಕು, ಸ್ವಜನರೊ,ಳು ऽ ॥

–ಶಕುಂತಲಾ ಪರಿಣಯ

ರಾಗ ರೇಗುಪ್ತಿ–ಅಟತಾಳ

ಸೀತಾದೇ,ವಿಯೆ ಲಾಲಿ,ಸೆನ್ನಣು,ಗಗೆ ತಮ್ಮ । ಪ್ರೀತನಾ,ಗಿಹ ರಾಮ, ದೇವರೊ,ಳು ऽ ॥ ನೂತನ,ವಾದ ವಿ,ವಾದ ಸ,ದ್ಯದಿ ಬರ್ಪ । ಭೀತಿಯೊ, ಳಟ್ಟಿದ, ನಿಮ್ಮನು,ಗ್ರಹಕಾಗಿ ॥

–ರಾಮಾಂಜನೇಯ ಕಾಳಗ

ರಾಗ ವರಾಳಿ – ಅಟತಾಳ

ರಾಜಶೇ,ಖರ ರಾಜ, ರಾಜ ಮಾ,ನಿತಧೀರ । ರಾಜೀವಾ,ಕ್ಷನಭಜ,ಕ ऽ ॥ ರಾಜಿಪ,ಗ್ನಿಯೊಳಿಂದು, ನರವೇಷ,ವನು ತಾಳಿ । ಆಜಗ,ತ್ಪತಿಯನು,ಜ್ಞೆಯೊ ಳೀಗ, ಬಂದೆನು ॥

–ಪುತ್ರಕಾಮೇಷ್ಟಿ

ರಾಗ ಮಧುಮಾಧವಿ – ಅಟತಾಳ

ಎಂತು ವ,ರ್ಣಿಸುವೆ ನ,ರ್ಜುನನ ಸಾ,ಹಸವ ಶ್ರೀ । ಕಾಂತನ, ಮೊಗ ನೋಡಿ, ಶರವೊಂದ,ನೆಚ್ಚೊಡೆ । ತಿಂತಿಣಿ,ಯೊಳು ಲಕ್ಷಾಂ,ತರ ಕೋಟಿ,ಯ ರ್ಬುದಾ । ನಂತಾಂಬು,ವಾಗಿ ದಿ,ಗಂತವ, ಮುಸುಕಿತು ॥

–ಐರಾವತ

ರಾಗ ಪೀಲು – ಅಟತಾಳ

ಪದುಮದ,ಳಾಂಬ ಕಿ, ಮದಗಜ,ಯಾನೇ ॥ ಮುದದಿಂದ, ಕದತೆರೆ, ಚದುರೆ ಪ್ರ,ವೀಣೇ ॥ ನದಿಯೆಚ್ಚ,ರಿತುದಿಲ್ಲ, ಉದಯ ಕಾ,ಲವಿದಲ್ಲ । ವಿಧ ವಿಧ, ಕಷ್ಟದಿ, ಬೆದೆ ಬೆಂದೆ,ನಲ್ಲಾ ॥

–ಅಹಲ್ಯಾ ಶಾಪ

ರಾಗ ಕಾಂಭೋಜಿ – ಅಟತಾಳ

ಕ್ಷೀರಸಾ,ಗರವಾಸ, ಭೂರಿಮಂ,ಗಲ ಶೋಷ । ವೆಂಕಟೇ,ಶ ऽ ॥ ವಾರಿಜ,ದಳನೇತ್ರ,ಮಾರಾರಿ, ಸನ್ಮಿತ್ರ । ವೆಂಕಟೇ,ಶ ऽ ॥

–ನಳ ಚರಿತ್ರೆ

ರಾಗ ಶಹಾನ – ಏಕತಾಳ

ಏಕೆ ರು,ಗಯ್ಯ ನೀ,ವ್ಯಾಕುಲ, ಪಡಿಸುವು। ದೀ ಕಾಂತೆ,ಯುರನವಿ,ವೇ

ಕದೊ,ಳುಽ ॥ ಸಾಕಪ್ಪ, ಬೇಡಿಂತು, ಕಾಕುತ,ನವ ಮಾಡಿ । ಪೋಕನೆ,ನಿಽ ಕೊಂಬು,ದೇಕೆಂದ,ಳ್ಽ ॥ –ಕೃಷ್ಣ ಬಾಲಲೀಲೆ

ರಾಗ ಬಿಲಹರಿ – ಏಕತಾಳ

ಹರಿಣಾಂಕ,ವದನೆ ಸ,ಚ್ಚರಿತೆ ದ್ರೌ,ಪದಿರನ್ನೇ । ತರಳರ,ಪ್ಪಿಹರೇನೇ, ತರುಣಿ ಸಂ,ಪನ್ನೆ ॥ ವರರೈವ,ರನು ನೀನೇ, ಮರುಳು ಮಾ,ಡುವ ಜಾಣೆ । ಸರಸಕಂ.ಜುವೆ ನಾನೇ,ನಿರತ ನಿ,ನ್ನಾಣೆ ॥ –ಖಾಂಡವವನ ದಹನ

ರಾಗ ಮಧ್ಯಮಾವತಿ – ಏಕತಾಳ

ಆಲಿಸಾ,ಲಿಸು ಗೋಪೀ,ಬಾಲ ಗೋ,ಪಾಲ ॥ ಲೀಲಾವಿ,ನೋದಿ ಸು,ಶೀಲ ಶ್ರೀ,ಲೋಲ ॥ ಪಲ್ಲವಿ॥ ಹರಿಯೇ ಲಾ,ಲಿಸು ನಿನ್ನ, ಮರೆಪೊಕ್ಕ, ಜನರಿಗೆ । ದುರಿತ, ಹೊ,ದ್ದು ಪುದುಂಟೇ?, ಕರುಣಾಸಾ,ಗರನೇ ॥ ವರಪಾಂ ಡು,ಸುತರಿಗೆ, ನಿರತ ನೀ, ವಜ್ರಪಂ । ಜರನಾಗಿ, ಕಾದಿರ್ಪೆ, ಸರಿಯಿಲ್ಲ, ವರ್ಗೆ ॥ –ಚಿತ್ರಸೇನ ಕಾಳಗ

ರಾಗ ಮಧುಮಾಧವಿ – ಏಕತಾಳ

ದೇವಕೀ,ಸುತ ಕೃಷ್ಣ, ಪಾವನಾ,ತ್ಮಕನೇ ॥ ಬಾವನಾ,ಗಿಹೆ ನಮ್ಮ, ಜೀವ ರ,ಕ್ಷಕನೇ ॥ ಪಲ್ಲವಿ॥ ಕುರುಕುಲ, ತಿಲಕ ನೀ, ಧರೆಯು ಹಂ,ಬಲದಿ ॥ ಧುರದಿ ಕಾ.ದಲು ಮದ್ರ,ದೊರೆಗೆ ಪೈ,ಭವದಿ ॥ ವಿರಚಿಸಿ,ದನು ಸೇನಾ,ಶರ ಧಿಪ,ಟ್ಟವನು ॥ ಪರಮ ವಿ,ಕ್ರಮಿಯಾಗಿ, ಮೆರೆವಮಾ,ತುಳನು ॥

–ಶಲ್ಯಾವಸಾನ

ರಾಗ ಸೌರಾಷ್ಟ್ರ – ಏಕತಾಳ

ನೆನೆಯಿರೋ, ಜನರೆಲ್ಲ, ಗಜಮುಖ,ನಽ ॥ ಘನಮೂರ್ತಿ, ಮಬಪೂ ರ, ಗಣನಾಥ,ನಽ ॥ ಪಲ್ಲವಿ॥ ದೇವರ,ದೇವ ಕೃ.ಪಾಕರ,ನಽ ॥ ಪಾವನ, ಚರಿತ ಪು,ಣ್ಯೋದಯ,ನಽ ॥ ಭಾವಜ, ವಿಷಯಕೆ, ಸಿಲುಕದ,ನಽ ॥ ಕೋ ವಿದ, ಗಿರಿಜೆಯ, ವರಸುತ,ನಽ ॥ –ಸಭಾ ಲಕ್ಷಣ

ರಾಗ ರೇಗುಪ್ತಿ – ಏಕತಾಳ

ಜಲಕೇಳಿ,ಯಾಡಿದ,ನಾಗ ॥ ಬಲುಭುಜ,ನರ್ಜುನ, ಬೇಗ ॥ ಪಲ್ಲವಿ ॥

ನದಿಯು ಪ್ರ,ವಾಹದಿ । ಚದರಲು, ಕಾಣುತ್ತ । ಒದಗಿ ಪಿ,ಡಿದು ನಿಜ ।
ಸುದತಿಯು,ರೊಡನೆ ॥ -ಕಾರ್ತವೀರ್ಯಾರ್ಜುನ ಕಾಳಗ

ರಾಗ ಬೇಗಡೆ - ಆದಿತಾಳ

ಆಲಿಸಾ,ನತಜನ,ಪಾಲ ಗೋ,ಪಾಲ ॥ ನೀಲ ಭಾ,ಸುರವನ,ಮಾಲ
ವಹಾ,ಲೋಲ ॥ -ರಾಜ ಸೂಯ

ರಾಗ ಸಾವೇರಿ - ಆದಿತಾಳ

ಕೇಳವ್ವ, ತಂಗಿಯೊ । ಲೋಲಲೋ,ಚನೆಗೆ ಭೂ । ಪಾಲನ,
ಸಂಯೋಗ । ಮೇಳವಿ,ಸಿಹುದು ॥ -ಶಕುಂತಳಾ ಪರಿಣಯ

ರಾಗ ಪಂತುವರಾಳಿ - ಆದಿತಾಳ

ನಂದಗೆ, ಬಾಲನು,ದ್ರುಹಿಣಗೆ, ತಾತನು । ಇಂದುಮು,ಖಿಯರಿಗೆ,
ಯಪೌವನ,ನು s ॥ ಮಂದಮ,ತಿಗಳಿಗೆ, ದುಷ್ಟನು, ಶರಣರ । ವೃಂದಕೆ,
ಸಾಧು ನಾ,ನಾವೇಷಿ,ಯವನು ॥ -ಚಂದ್ರಾವಳೀ ವಿಲಾಸ

ರಾಗ ಗೌಳ - ಆದಿತಾಳ

ರಾಘವ, ನರಪತೇ, ಶೃಣುಮಮ,ವಚನಂ ॥ ನೀ ಗುಣ,ನಿಧಿಯೆಂದು,
ನಿನ್ನ ಸೇ,ರಿದೆ ಬಂದು ॥ ಪಲ್ಲವಿ ॥ ಅತಿಕುಲ,ವತಿ ನಾನು, ಪೃಥಿವೀಪಾ,ಲಕ
ನೀನು । ರತಿದೇವಿ,ಗೆಣೆ ನಾನು, ಮನ್ಮಥ, ನೀನು ॥ -ಪಂಚವಟಿ ರಾಮಾಯಣ

ರಾಗ ಗೌಳ - ಆದಿತಾಳ

ಏನಿದು, ವೈಚಿತ್ರ್ಯ, ವಿಮಲ ಚ,ರಿತ್ರ ॥ ಪಲ್ಲವಿ ॥ ದಾನವಾ,ರಾತಿನೀ,
ಬಂದ ಕಾ,ರ್ಯವ ಪೇಳು ॥ ಅನುಪಲ್ಲವಿ ॥ ಕ್ಷೇಮವೇ, ವಸುದೇವ, ದೇವಕಿ,
ಕುಶಲವೇ? । ಕಾಮಪಾ,ಲಗೆ ಪರಿ,ಣಾಮವೇ,ನಯ್ಯ ॥ ಆ ಮಹಾ,ರುಕ್ಮಿಣ್ಯಾ,
ದ್ಯಷ್ಟಮಹಾಂ,ಗನೆಯರು । ಪ್ರೇಮದೊ,ಳಿರುವರೇ ?, ಪಂಕಜ, ನೇತ್ರ ॥
-ಶಂಬರಾಸುರ ಕಾಳಗ

ರಾಗ ಪಹಾಡಿ - ಆದಿತಾಳ

ಒಪ್ಪುವೆ,ನಿದಕೆ ನಿ,ನ್ನಪ್ಪಣೆ,ಯಂತೆ ॥ ಬಪ್ಪುದ,ಗ್ಗದಕೀರ್ತಿ, ತಪ್ಪದೆ,

ಮುಂತೆ ॥ ಪಲ್ಲವಿ ॥ ದುರುಳರ, ಭಯಕಂಜಿ, ಶರಣು, ಹೊ,ಕ್ಕವರನ್ನು, ಪೊರೆವುದೆ,ಮ್ಮಯ ಬದ್ಧ,ಕಾರ್ಯ ॥ ಧೈರ್ಯ ॥ ಶೌರ್ಯ ॥ ಗುಣವರ್ಯ ॥

–ಕುಮಾರ ವಿಜಯ

ರಾಗ ಮಾಳವಿ – ತ್ರಿವುಡೆತಾಳ

ಜೀಯ ಲಾ,ಲಿಸು ವಿಶ್ವ,ಕಾಯ ಶ್ರೀ, ವೈಕುಂಠ । ನಾಯಕ,ನತ ಪಾಲ,ಕ ಽ ॥ ಮಾಯಪಾವಿ,ರಹಿತನೆ, ಕಾಯೊ ಬೇ,ಗೆಮಗಿನ್ನು । ಪಾಯುವೇ, ನರುಹು ದೇ,ವ ಽ ॥ ಲೋಕ,ಸಂಜೀವ ॥ –ಸಮುದ್ರ ಮಥನ

ವಿಷ್ಣು ಗಣ ಪ್ರಧಾನ ಬಂಧಗಳ ವರಣದಲ್ಲಿ ಕೆಳಗಿನಂತೆ ಅಕ್ಷರ ವಿನ್ಯಾಸವಿರಬಹುದು.

I ಎರಡು ಅಕ್ಷರಗಳು [ಅಥವಾ ಒಂದು ಅಕ್ಷರ]
II ಒಂದು ವಿಷ್ಣು ಗಣ
III ಒಂದು ಅಕ್ಷರ ಮತ್ತು ಒಂದು ವಿಷ್ಣುಗಣ
IV ಎರಡು ಅಕ್ಷರಗಳು ಮತ್ತು ಒಂದು ವಿಷ್ಣುಗಣ
V ಒಂದು ಅಕ್ಷರ ಮತ್ತು ಎರಡು ವಿಷ್ಣುಗಣಗಳು
VI ಎರಡು ಅಕ್ಷರಗಳು ಮತ್ತು ಎರಡು ವಿಷ್ಣುಗಣಗಳು

ಈ ಪದಗಳಲ್ಲಿ ವರಣದ ಪೂರ್ವಪಾದ ಮತ್ತು ಉತ್ತರಪಾದಗಳ ಅಂತ್ಯ ಸ್ಥಾನಗಳಲ್ಲಿ ಗುರುವಾಗಲಿ–ಬ್ರಹ್ಮಗಣವಾಗಲಿ – ವಿಷ್ಣುಗಣವಾಗಲಿ ಬರಬಹುದು.

ರಾಗ ದೇಶಿ – ಅಟತಾಳ

ಏನೆಂದೇ ॥ ಕಾಮ । ಏನೆಂದೆ ॥ ಪಲ್ಲವಿ ॥ ಏನೆಂದೆ, ಕಾಮಯಾ, ಕಾಣುವ, ಜನಕೆ ॥ ನೀನಹಾ,ನಗೆಗೇಡು, ವಸಾಡಿದೆ, ದಿಟಕೆ ॥ ಅನು ಪಲ್ಲವಿ ॥ ಅಜ ವಿಷ್ಣು, ಮೊದಲಾದ, ದೇವರ್ಕ,ಳೆಲ್ಲಾ ॥ ನಿಜದಿ ನಿ,ನ್ನಯ ವಶ,ವಾಗಿ ಹ,ರಲ್ಲಾ ॥ ತ್ರಿಜಗವ,ಗೆಲ್ದ ನಿ,ನ್ನಂಬನು, ಹೂಡಿ ॥ ರಜತಾದ್ರಿ,ವಾಸಗೆ, ಹೆದರಿದೆ, ಹೇಡಿ ॥ –ಗಿರಿಜಾ ಕಲ್ಯಾಣ

ರಾಗ ಸೌರಾಷ್ಟ್ರ – ಅಟತಾಳ

ಏನೆಲಾ ॥ ಕೃಷ್ಣ । ಏನೆಲಾ ॥ ಪಲ್ಲವಿ ॥ ಏನೆಲಾ, ನಿನಗೆ ನಿ,ಧಾನದಿ,

ಪೇಳ್ದರೆ । ಮಾನಕೆ, ಸಾಲದೆ?, ಜಾಣ್ಮೆಯು, ತೋರ್ಪೆಯು ॥ ಅನು ಪಲ್ಲವಿ ॥ ಲಲನೆಯು,ರೆಂಬುದು, ತಿಳಿಯದೆ?, ಕೊಬ್ಬಿನೊಳ್ । ಮಲೆತು ಮೇ,ಲ್ಬೀಳು ವ, ಸಲುಗೆಗ,ಳೇನಿದು? ॥ –ಚಂದ್ರಾವಳೀ ವಿಲಾಸ

ರಾಗ ಸೌರಾಷ್ಟ್ರ – ಅಟತಾಳ

ವಾಣೀ ಸ,ರೀಸೃಪ,ವೇಣಿ ನಂ,ಬಿದೆ ನಿನ್ನ, ಶಾರದಾಂ,ಬಾ ಽ ॥ ಕೀರ।
ವಾಣಿ ವಾ,ಗ್ದೇವಿ ಕ,ಲ್ಯಾಣಿ ನೀ, ಸಲಹೆನ್ನ ಶಾರದಾಂ,ಬಾ ಽ ॥
–ವಿಶ್ವಾಮಿತ್ರ ಪ್ರತಾಪ

ರಾಗ ನಾದ ನಾಮಕ್ರಿಯ – ಅಟತಾಳ

ತಂಗಿಯು, ಕರೆದು ಮಾ,ತಾಡಿದ ॥ ಮಾನ । ಭಂಗದ, ಪರಿಯೆಲ್ಲ, ನೋಡಿದ ॥ ಹಿಂಗದ, ರೌದ್ರವ, ತಾಳಿದ ॥ ಅಂತ । ರಂಗವಿ,ದೇನೆಂದು, ಕೇಳಿದ ॥ –ಪಂಚವಟಿರಾಮಾಯಣ

ರಾಗ ಯಮುನಾಕಲ್ಯಾಣಿ – ಅಟತಾಳ

ಯಾರಿವ,ಳ ಮಮಬಲ್,ವಯ್ಯಾರಿ ॥ ಆಹಾ । ಮಾರನಂ,ಗನೆಯಂತಿ, ಹಳು ಪೋರಿ ॥ ಪಲ್ಲವಿ ॥ ಸಲಿಲಜಾಂ,ಬಕಿ ಕುಜ,ಕೊರಗಿರ್ದು ॥ ದೃಷ್ಟಿ । ಚೆ ಲಿಸಿ ನಿ,ಲಿಸಿ ನೋಡು,ವಳು ಕದ್ದು ॥ ಲಲಿತ ಹ,ಸ್ತಗಳನೆ,ತ್ತುತ ಮೇಲೆ ॥ ಮತ್ತೆ । ನೆಲನ ಗೀ,ಚುತ ನಗು,ವಳು ಬಾಲೆ ॥ –ಕುಮಾರ ವಿಜಯ

ಇದರ ಗಣವಿನ್ಯಾಸವು ಹಿಂದಿನ ಪದದಲ್ಲಿರುವಂತೆಯೇ ಕಂಡು ಬರುವುದು. ಆದರೆ ಇದರ ಪಾದಾಂತ್ಯ ಸ್ಥಾನಗಳಲ್ಲಿ ವಿಷ್ಣುಗಣವರ್ಗದ ಪ್ರಥಮ ದ್ವಿತೀಯ ಭೇದದ ಗಣಗಳೇ ಹೆಚ್ಚಾಗಿ ನಿಲ್ಲುತ್ತವೆ. ಅಲ್ಲದೆ ಪ್ರಾರಂಭದಲ್ಲಿ ಪಲ್ಲವಿಯೂ ಇರುತ್ತದೆ.

ರಾಗ ಮಧುಮಾಧವಿ – ಅಟತಾಳ

ದೇವ ರಾ,ಘವ ನೋಡು, ನೋಡತ್ತ,ಕಡೆಯು ॥ ತಮ್ಮ । ಸಾವಿಗಂ, ಜದೆ ಕಾದು,ತಿರುವ ಸಂ,ಗತಿಯು ॥ ರಾವಣ, ಕಳುಹಿದ, ಭಟರೆಲ್ಲ,ಬಂದು ॥ ಸುತ್ತು । ಕಾವರಾ,ಹುಡುಗನ, ಮೋಸವಾ,ಯ್ತೆಂದು ॥ ತರಣಿಸೇನಕಾಳಗ

ರಾಗ ಭೈರವಿ – ಅಟತಾಳ

ಗಿರಿಜಾತೆ, ಲಾಲಿಸೀ,ಗ ಽ ॥ ಹಿಂ,ದಿರುಗಿದ । ಧುರದಿಮ,ಹೇಶ

ಬೇ,ಗ ಽ ॥ ಸರಿಯಲ್ಲ, ಜಯವಿಂದು, ದೊರಕದು, ನಿನ್ನಯ । ಶಿರದೊಳೆಂ, ತಿಹುದೋ ಯೋ,ಗ ಽ ॥ –ದ್ರೌಪದೀ ಪ್ರತಾಪ

ರಾಗ ಜಂಜೂಟಿ – ಅಟೆತಾಳ

ಬೆದರ,ಬೇ,ಡೆಲೆ ಮುದ್ದು,ಬಾಲೆ ॥ ನಿನ್ನ । ಮದುವೆಯಾ,ಗುವೆ ಗುಣ, ಶೀಲೆ ॥ ಚದುರೆ ನಿ,ನ್ನನು ಕೂಡಿ, ಸದನದೊ,ಳಿರುವೆನು । ಮುದವನು, ತಾಳಿರು, ಪದುಮದ,ಳಾಂಬಕಿ ॥ –ಮೀನಾಕ್ಷೀ ಕಲ್ಯಾಣ

ರಾಗ ಮೋಹನ – ಅಟೆತಾಳ

ಏಳುಕೇ,ಳೆನ್ನನ,ಲ್ಲ ಽ ॥ ಹೀ,ಗಿಹೆಯಲ್ಲ ॥ ಏಳುಕೇ,ಳೆನ್ನನ,ಲ್ಲ ಽ ॥ ಪಲ್ಲವಿ ॥ ಏಳುವಿ,ಳೆಲೆನಲ್ಲ, ಕೇಳು ನ,ನ್ನಯ ಸೊಲ್ಲ ॥ ಪೇಳುವೆ, ನಿನ್ನೊ ಳೆ,ಲ್ಲಾ ॥ ನಿ,ದ್ದೆಯುಸಲ್ಲ ॥ –ಬ್ರಹ್ಮ ಕಪಾಲ

ರಾಗ ಸಾರಂಗ – ಅಟೆತಾಳ

ಭಾವಕಿ, ಭ್ರಮರಾಳ,ಕಿ ಽ ॥ ಪೊಂ,ಚೀಲಕಿ । ಭಾವಕಿ, ಭ್ರಮರಾಳ, ಕೀ ಽ ॥ ಪಲ್ಲವಿ ॥ ಕ್ಷೀರಾಬ್ಧಿ, ಮಥನದ,ಲಿಽ ॥ ಸಂ,ಭವಿಸಿತೀ । ಭೂರುಹ, ಪೂರ್ವದ,ಲಿ ಽ ॥ ನಾರೀ ನಾ, ನಿನಗೆಂದು, ತೋರುವೆ,ನೆಂದೆಂದ । ಚಾರುಪು, ಷ್ಪಗಳುಳ್ಳ, ಪಾರಿಜಾ,ತವು ಕಾಣೆ ॥ –ಪಾರಿಜಾತ ಪ್ರಸಂಗ

ರಾಗ ಸಾವೇರಿ – ಅಟೆತಾಳ

ಅಳುವುದೇ,ತಕೆ ನೀ ತಾ,ರೇ ಽ ॥ ನಿ,ನ್ನಯ ಮನ । ದೊಳು ಧೈರ್ಯ, ತಾಳು ನೀ,ರೇ ಽ ॥ ನೆಲೆಯಲ್ಲ, ಸಂಸಾರ,ವೆಂಬುದು, ಮೊದಲೆ ನೀ । ತಿಳಿದಿರ್ಪ, ಕಾರ್ಯಕಾ,ಣೇ ಽ ॥ ಕೇ,ಳೆಲೆ ಜಾಣೆ ॥ –ವಾಲಿ ಸಂಹಾರ

ರಾಗ ಪಂತುವರಾಳಿ – ಅಟೆತಾಳ

ಭಿಕ್ಷೆಯ, ನೀಡೇ ದೇ,ವಿ ಽ ॥ ಸ,ನ್ಯಾಸಿಗೆ । ಭಿಕ್ಷೆಯ, ನೀಡೇ ದೇ,ವಿ ಽ ॥ ಪಲ್ಲವಿ ॥ ಕುಕ್ಷಿಗಾ,ಹಾರವಿ,ಲ್ಲದೆ ದೇಶ, ದೇಶ ಪ್ರ । ದಕ್ಷಿಣೆ, ಗೆಯ್ದಿಲ್ಲಿ, ಬಂದೆ ಕಾ,ಣಮ್ಮ ॥ –ಪಂಚವಟಿ ರಾಮಾಯಣ

ರಾಗ ಕಾಪಿ – ಅಟೆತಾಳ

ಕುರುರಾಯ, ಮರುಳಾದ, ಸಿದ್ಧ ॥ ತನ್ನ । ಶಿರವನೆ,ನ್ನಂಬಿಗೆ, ಮಾರಿದ, ಬದ್ಧ ॥ ಪಲ್ಲವಿ ॥ ದೊರೆಗಳ, ನಡತೆಯಿ, ಪರಿಯೇ ? ॥ ಬಂದು ।

ತುರುಗಳ, ಪಿಡಿವುದು, ಭಟರಿಗೆ, ಸರಿಯೇ?॥ ದುರುಳತ,ನವನು ವಶಾ,ಡಿದನು॥ ಇನ್ನು । ತರಿದು ಹಾ,ಯ್ಕದೆ ಪೋಗ,ಗೊಡುವೆನೇ, ? ನಾನು ॥ –ವಿರಾಟ ಪರ್ವ

ರಾಗ ಕಾಪಿ – ಅಟತಾಳ

ಕಾಮುಸ,ನ್ನಿಭ ಮಾತ,ಕೇಳು ॥ ಪೇಳಿ । ರಾಮ ಕ,ಳುಹಿದನಿಂ,ದಿ ನೊಳು ॥ ನಾಮುನ,ವಿಟ್ಟು ಕೃ,ಪಾಳು ॥ ನಿನ್ನ । ಕಾಮಿಸಿ, ಬಂದೆ ಮೋ,ಹ ದೊಳು ॥ ಇನ್ನು । ತಾಮಸ,ಗೊಳದಿರು, ತಾಳಲಾ,ರೆನು ನೀಸು । ಪ್ರೇಮ ದಿಂ,ದಲೆ ಕೂಡು, ಸರಸ ಮಾ,ತಾಡು ॥ –ಪಂಚವಟಿ ರಾಮಾಯಣ

ರಾಗ ಕಾಪಿ – ಅಟತಾಳ

ಕೋಪವ, ಸೈರಿಸು, ಜೀಯು ॥ ಕ್ಷಮಾ । ರೂಪವ, ಧರಿಸಲು, ಗುಣ॥ ವಿಪೂರ್ಣ,ದಯ್ಯ ॥ ಪಲ್ಲವಿ ॥ ದಿನಪನ, ಭಜಕನಾ,ಗಿಹನು ॥ ತನ್ನ । ತನುಜೆಯು, ಮಂದರ,ಧರಗಿತ್ತಿ,ರುವನು ॥ ವಿನತಾತ್ಮ,ಜಗೆ ಫಣಿ,ಯಿದಿರೆ ಚಂದ್ರನ, ಬಕ । ಮುನಿದು ನಿಂ,ದಿಪುದುಂಟೆ, ಪೇಳುವೆ,ನೆಲ್ಲಾ ॥ –ಜಾಂಬವತೀ ಕಲ್ಯಾಣ

ರಾಗ ಮೋಹನ – ಅಟತಾಳ

ಲಾಲಿಸ,ಬೇಕು ಜೀ,ಯು ಽ ॥ ಅಂ,ತಕರಾಯು । ಲಾಲಿಸ,ಬೇಕು ಜೀ,ಯು ಽ ॥ ಪಲ್ಲವಿ ॥ ದೇವರ,ಪ್ಪಣೆಯಂತೆ, ಭೂವಲ,ಯಕೆ ಪೋಗಿ, ಜೀವರ, ಹಿಡಿಮುಡಿ,ಯು ॥ ಕ,ಟ್ಟುತಲಿರ । ಲೀವಿಧಿ,ಯಾಯಿತ,ಯ್ಯ ॥ –ರುಕ್ಮಾಂಗದ ಚರಿತ್ರೆ

ರಾಗ ಗೌಳತೋಡಿ ಅಟತಾಳ

ಮೆಚ್ಚಿದೆ, ನಾ ಬಾಲ,ಕನೆ ನಿನ್ನ ॥ ಬಲು । ಹೆಚ್ಚಿನ, ದೃಢಮನ,ಸ್ಸಿಗೆ ಮುನ್ನ ॥ ಬೆಚ್ಚದ,ಗ್ರಜರನ್ನು, ಹೆಚ್ಚಿನ, ತಾಯನು, ಕೊಚ್ಚಿದೆ, ಬೇಡು ನಿ, ನ್ನಿಚ್ಚೆಯ, ಸಲಿಸುವೆ ॥ –ಕಾರ್ತವೀರ್ಯಾರ್ಜುನ ಕಾಳಗ

ರಾಗ ತೋಡಿ – ಅಟತಾಳ

ಏನಯ್ಯ, ನೃಪ ಬಹು,ಮಾನಿ ನೀ,ನಾಗಿರ್ದು । ಮೇನಕಾ,ತ್ಮಜೆಯು ನಿಂ,ತು ಽ ॥ ಅಂ,ಜಿಸಿದೊಡೀ । ದೀನೆ ಜೀ,ವಿಸುವುದೆಂ,ತು? ಽ ॥ ಜ್ಞಾನಮಾ, ರ್ಗದೊಳರಿ,ದೀನಿತಂ,ಬಿನಿಯನು । ಸಾನುರಾ,ಗದಲಿ ನೀ,ನು ಽ ॥ ಕೂ,ಡಿಕೊ ಯೆನ,ಲಾ ನರೇ,ಶ್ವರನೆಂದ,ನು ಽ ॥ –ದುಷ್ಯಂತ ಚರಿತ್ರೆ

ರಾಗ ಪುನ್ನಾಗತೋಡಿ – ಅಟತಾಳ

ಮರುಳಾದೆ,ಯೇನೊ ಪಾ,ರ್ಥ ಽ ॥ ಸಂ,ಗ್ರಾಮದಿ । ಹುರುಳು ತ,
ಪ್ಪಿದೆಯೋ? ವ್ಯ,ರ್ಥ ಽ ॥ ಸರಸದ, ವೇಳೆಯು,ಲ್ಲಾ, ಽ ॥ ಮಾ,ತಾಡೆ ಮು,
ಬರಿವ ತಾ,ನಿದಕೋಽಬು,ಲ್ಲ ಽ ॥ –ಭೀಷ್ಮ ಪರ್ವ

ರಾಗ ಅಹೇರಿ – ಅಟತಾಳ

ಎಲ್ಲಿಗೆ, ಎದ್ದು ಪೋ,ದ ಽ ॥ ಗೋಪಾಲ । ಎಲ್ಲಿಗೆ, ಎದ್ದು ಪೋ,ದ ಽ
॥ ಪಲ್ಲವಿ ॥ ಫುಲ್ಲಲೋ,ಚನ ಪರ,ಮಾತ್ಮನು, ಮುನಿಸಿಂದ ॥ ಅನು ಪಲ್ಲವಿ ॥
ಬೆದರಿಸೆ,ತಾಯಿ ಮಾ,ತಿಂಗೆ ಕೋ,ಪಿಸಿಕೊಂಡು । ಬದಲೊಂದು, ರಾಜ್ಯವ,
ಸೇರಿದ,ನೇನೋ? ॥ –ಕೃಷ್ಣ ಚರಿತೆ

ರಾಗ ಕಾಂಭೋಜ – ಅಟತಾಳ

ಗುರುವರ್ಯ, ಕೇಳೆನ್ನ, ಮಾತ ॥ ನಿನ್ನೊ । ಳರುಹುವೆ,ನೆಲ್ಲ
ಪ್ರ,ಖ್ಯಾತ ॥ ಹರಿಹರ, ಶರಜರ, ಕರುಣಿದಿ, ನಮಗಿನ್ನು । ದುರುಳರ ಭ,ಯ
ವೆಲ್ಲಿ?, ದೊರಕಿತು, ಸೌಖ್ಯವು ॥ –ಕುಮಾರವಿಜಯ

ರಾಗ ಕಾಂಭೋಜಿ – ಅಟತಾಳ

ಭೂಮಿ ಪಾ,ಲಕ ಲಾಲಿ,ಸೆನ್ನ ॥ ಮಾತ । ಪ್ರೇಮದಿ, ದಯವಿಟ್ಟು,

*

ಮುನ್ನ ॥ ಭಾಮಿನಿ, ಕೃತದ್ಯುತಿ, ಗರ್ಭತಾ,ಳ್ದಳುಮನಃ । ಕಾಮಿತ,ಮಾಯಿ
ತಿ,ನ್ನು ಽ ॥ ಪೇ,ಳುವುದೇನು ? ॥ –ಕಾರ್ತವೀರ್ಯಾರ್ಜುನ ಕಾಳಗ

ರಾಗ ತುಜಾವಂತು ಅಟತಾಳ

ಧೀರಲಾ,ಲಿಪುದೆನ್ನ,ಮಾತ ॥ ದಯ।ದೋರಿ ನೀ,ಲೋಕಪ್ರ,
ಖ್ಯಾತ ॥ ಪಲ್ಲವಿ ॥ ಕೀಶಬ,ಲವ ನಿರೀ,ಕ್ಷಿಸಿದೆ ॥ ನಾನಿ।ನ್ನೇಸು ಪೇ,ಳುವೆ
ನೀಗ,ಬರಿದೆ, ಭಾಷಿಸು,ವವನಲ್ಲ,ದಿರದೆ ॥ ಕೃಪಾ।ರಾಶಿಚಿ,ತ್ತೈಸು ಬೇ,ಸರದೆ ॥
ಆ ಸೇನೆ,ಯನು ಪೋಗ,ಲೀಸಮು,ಯುದೊಳು ಮ,ಹೇಶ ಗ,ರಿದು ಕೇಳಿ,ನ್ನಾ
ಸುರಾ,ಗ್ರಣಿಜೀಯ ॥ –ಮೈರಾವಣ ಕಾಳಗ

ರಾಗಪಹಾಡಿ – ಅಟತಾಳ

ಶರಣಯ್ಯ, ದೇವಾಧಿ,ದೇವ ॥ ಎಮ್ಮ । ಪೊರೆವುದು, ಭಕ್ತಸಂ,

ಜೀವ ॥ ಆರೊ।ಳೊರೆಯಲಿ,ನ್ನೆಮ್ಮಯ,ನೋವ ॥ ಸೇವ।ಕರ ಭಕ್ತಿ,ಗೋವ ಸ,ದ್ವರವಿತ್ತು, ಕಾವ ದು।ಷ್ಟರನಟ್ಟಿ, ಸೋವಮಂ, ದರ ಧರ,ಮಾಧವ ॥

–ಸಹಸ್ರ ಕವಚ ಮೋಕ್ಷ

ರಾಗ ಕುರಂಜಿ – ಅಟತಾಳ

ಬಂದಳು, ಕೊರವಂಜಿ, ನೀರೇ ॥ ಮುದ। ದಿಂದ ತ್ರೈ,ಭುವನವಿ, ಸ್ತಾರೆ ॥ ನವ। ಸೌಂದರ್ಯ,ಮಯದ ಶ,ರೀರೇ ॥ ಮನ । ಗುಂದದ, ಶರಧಿ ಗಂ,ಭೀರೇ ॥ ಪೂರ್ಣ । ಚಂದಿರ,ವದನೆ ಆ,ನಂದಿ ಸು,ರದನೆ ಬಾ । ಲೇಂದು ಶೇ,ಖರ ಶರ,ಣೆಂದು ಸಂ,ಸ್ತುತಿಸುತ ॥ –ಕೃಷ್ಣ ಚರಿತೆ

ರಾಗ ಮಧ್ಯಮಾವತಿ – ಅಟತಾಳ

ನೀನೇ –, ಕಲಿಹನು,ಮ ऽ ॥ ನ,ಮ್ಮವರೊಳು । ನೀನೇ –, ಕಲಿ ಹನು,ಮऽ॥ ಪಲ್ಲವಿ ॥ ನೀನೇ ಕ,ಲಿಯು ನಮ್ಮ ವಾನರ, ರೊಳಗೆಲ್ಲ।ಸಾನಂದ, ದಿಂದ ಸಾ,ಗರವ ದಾ,ಟುವುದಕ್ಕೆ ॥ –ಚೂಡಾಮಣಿ

ರಾಗ ಗೌಳಮಲಹರಿ – ಅಟತಾಳ

ಇಂದೂ ಕೊ,ಳಲದನಿ, ಕೇಳುತಿ,ದೆ ऽ ॥ ಶ್ರೀ ಗೋ।ವಿಂದ ಬಂ,ದಿಹ ನೆಂದು, ಹೇಳುತಿ,ದೆ ऽ ॥ ಒಂದುಗೂ,ಡಲು ಮನ,ಸಾಗುತಿ,ದೆ ऽ ॥ ದಿವ್ಯ । ಗಂಧವ, ತಂಗಾಳಿ, ಬೀಸುತಿ,ದೆ ऽ ॥ ಕಂದರ್ಪ,ನಟ್ಟುಳಿ,ಯಿಂದ ನಾ,ಮರು ಗುವೆ । ವೃಂದಾऽ, ವನದಿಂದ, ಬಂದನೇ, ಶ್ರೀಕೃಷ್ಣ ॥ –ಸಭಾ ಲಕ್ಷಣ

ರಾಗ ಶಂಕರಾಭರಣ – ಅಟತಾಳ

ನಗೆಗೇಡು, ಮಾಡಿದಿ,ರಲ್ಲಾ ॥ ಸು,ಮ್ಮನೆ ಬಂದು। ಹಗುರವಾ,ದೆನು ನಿಮ,ಗೆಲ್ಲಾ ॥ ಹಗರಣ,ದೊಳು ಫಲ,ವಿಲ್ಲ ॥ ನೀ,ವೆನ್ನನು । ಮಿಗೆವಂಚಿ ಪುದು ಸರಿ,ಯಲ್ಲ ॥ –ಪಂಚವಟಿ ರಾಮಾಯಣ

ರಾಗ ಶಂಕರಾಭರಣ – ಅಟತಾಳ

ಕಂಡನು॥ ವಿಶ್ವ-ರೂಪವ, ಪದ್ಮನು । ಕಂಡನು ॥ ಪಲ್ಲವಿ ॥ ಕಂಡನು, ವಿಶ್ವನಾ,ಯಕನ ॥ ನೆಲೆ । ಗೊಂಡಿರು ,ವಾದಿ ಮಾ,ಯಕನ ॥ ಆಹಾ । ಘಂಡ ನಿ,ಧಿಯು ದೇವ,ತಂಡವಂ,ದಿತ ಸುಪ್ರ। ಚಂಡ ಮೂ,ರುತಿಯು ಬ್ರ,ಹ್ಮಾಂಡ ನಾ,ಯಕನನ್ನು ॥ ಅನು ಪಲ್ಲವಿ ॥ ಕುಲಗಿರಿ,ಗಳು ದಿವ್ಯ,ಪದದಿ ॥ ಸುತ್ತು। ನೆಲಸೆ ದಿ,ಗ್ಗಜವು ಸ,ದ್ವಿಧದಿ ॥ ನಖ । ವಲಯದೊ,ಳೆಸೆದಿರ,ಲುದಧಿ॥

ಕೊಡಿ । ಜಲಜಾಕ,ರಂಗಳು, ಮುದದಿ ॥ ಓಹೋ।ಚೆಲುವ ಮೂ,ರ್ತಿಯು ಜಂಘೆ,ಯುಲಿ ಪಾಶಿ,ಜಾನೂರು।ಸ್ಥ ಲದಿ ವಿ,ದ್ಯಾಧರ,ರೊಲಿದು ರಾ,ಜಿಸುತಿರೆ॥

–ಕುಮಾರ ವಿಜಯ

ರಾಗ ಎರುಂಕಲ ಕಾಂಭೋಜಿ – ಅಟತಾಳ

ಭಳಿರೆ ಮೆ,ಚ್ಚಿದೆ ಕೇಳು, ಖಳಕುಲ,ಮಣಿಯೇ ॥ ಇಳೆಯು ವಿ,ಕ್ಕಿನ ದೊರೆ,ಗಳು ನಿನ,ಗೆಣೆಯೇ? ॥ ಪಲ್ಲವಿ ॥ ಅತಿಬಲಾ,ನ್ವಿತ ನಿನ್ನ, ಸತತ ಸೇ, ವಿಪರು ದಿ । ಕ್ಷಿತಿಗಳ,ಸುರರೆಲ್ಲ, ಹಿತರಿನ್ನೀ, ಲೋಕದೊ । ಳತುಳ ವಿ,ಖ್ಯಾತ ನೀ,ನು ಽ॥ ನಿ,ನ್ನಯು ವಸು । ಮತಿಗೆ ನಾ, ಪೇಳ್ವುದೇ,ನು?ಽ ॥ ಸೌ,ಭಾಗ್ಯ ಶೋ।ಭಿತವಾದ, ನಗರವಿ,ನ್ನು ಽ ॥ ನಿ,ನ್ನ ಸಮುಭ। ಕುತಿಗಾಗಿ, ಕೋಪಾಬ್ಧಿ, ಯೊಳಗಿರ್ಪೆ, ನಾನು ॥

–ಕುಮಾರ ವಿಜಯ

ರಾಗ ರೇಗುಪ್ತಿ – ಅಟತಾಳ

ಧರಣೇಂದ್ರ, ಲಾಲಿಸ,ಯ್ಯ ಽ ॥ ಮುಂ,ಗತೆಯನು । ಧರಣೇಂದ್ರ, ಲಾಲಿಸಯ್ಯ ಽ ॥ ಪಲ್ಲವಿ ॥ ಧರಣೇಂದ್ರ, ಲಾಲಿಸು, ವರಪುಣ್ಯ, ಚರಿತವ । ನರುಹುವೆ. ನಿನಗೆ ವಿ,ಸ್ತರಿಸಿ ಕಾ,ರುಣ್ಯದಿ ॥ ಅನುಪಲ್ಲವಿ ॥ ನಾರಿ ಶ,ಕುಂತಳೆ, ಯಾ ಋಷ್ಯಾ,ಶ್ರಮದಲ್ಲಿ । ಭೂರಿ ಸಂ,ತೋಷದೊ,ಳಿರುತಿರ,ಲು ಽ ॥ ವೀರ ದು,ಷ್ಯಂತನ, ವೀರ್ಯದಿಂ,ದವಳಲ್ಲಿ । ತೋರಿತು, ಗರ್ಭವು, ದಿನದಿನ, ಕೆ ಽ ॥ ತಿಂ,ಗಳು ನಾಲ್ಕು । ಜಾರಿದು,ದೆಣಿಸಲಿ,ಕೆ ಽ ॥ ತ,ನ್ನಿನಿಯನ । ದಾರಿಯು, ನೋಡುತಾ,ಕೆ ಽ ॥ ಮ,ರೆದನೇಕೆ ।ನೀರನೆ,ನುತ ಶೋಕ,ಭಾರದಿಂ,ದಿರ್ದಳು ॥

–ದುಷ್ಯಂತ ಚರಿತ್ರೆ

ರಾಗ ವೃಂದಾವನ ಸಾರಂಗ – ಅಟತಾಳ

ಲಾಲಿಸು ॥ ವರಾತ । ಲಾಲಿಸು ॥ ಪಲ್ಲವಿ ॥ ಮೂಲೋಕ,ದೊಡೆಯನ, ಮಹಿಮೆಯು, ಕಿವಿಗೊಟ್ಟು ॥ ಅನು ಪಲ್ಲವಿ ॥ ಕಾರೆಂಬ, ಕತ್ತಲೆ, ಕವಿಯಲು, ದಶದಿಕ್ಕು । ಘೋರೆಂದು, ಮಳೆಹೊಯ್ಯು,ತಿರಲಾಗ ॥ ಪುರ । ದ್ವಾರದ, ಲಾಳವಿಂ,ಡಿಗೆ ಬೇಗ॥ ಜಾರಿ । ದಾರಿಯಾ,ಯಿತು ಶೌರಿ,ಬರುವಾಗ ॥ ಕಾಣು, ತಿರುವಾಗ ॥ ಕಾವ, ಜನಕಾಗ ॥ ನಿದ್ದೆ । ಭಾರ್ಯೆಸಿ,ತೆಚ್ಚರಿ,ಲ್ಲವು ಯೋಗ ॥ ಸೂತ್ರ,ಧಾರಿಯು, ಮಹಿಮೆಯಂ,ದವನೀಗ ॥

–ಕೃಷ್ಣ ಚರಿತೆ

ರಾಗ ಮಾರವಿ – ಅಟತಾಳ

ಜಾಣ,ನಹುದಹು,ದೋ ಽ ॥ ಸಂ,ಗರದಿ ಪ್ರ । ವೀಣ, - ನಹುದ ಹು,ದೋ ಽ ॥ ಪಲ್ಲವಿ ॥ ಕ್ಷೋಣಿಯೊಳ್, ನಿನಗೆಣೆ,ಗಾಣೆ ವಿ,ಕ್ರಮ ದೊಳು ॥ ಅನು ಪಲ್ಲವಿ ॥ ಇನವಂಶ,ದರಸುಗ,ಳೊಳಗೆ ॥ ಹಿಂದೆ । ಜನಿಸಿ ದ,ವರು ನಿನ್ನ,ಕೆಳಗೆ॥ ಘನಚೋರ,ತನದ ಶಿ,ಖಂಡಿ ವಿ,ದ್ಯೆಯುನೆಷ್ಟು । ದಿನ ಸಾಧಿ,ಸಿದೆಯೋ ನೀ,ನು ಽ ॥ ವಂ,ಚನೆಯು ದು । ರ್ಗುಣವ ಕೈ,ಗೊಂಡೆ ಯೇನು ಽ॥ ನಿ,ನ್ನಂಥ ಕು । ಜನರಿಲ್ಲ, ಸಾಕ್ಷಿಗಿ,ನ್ನು ಽ ॥ ರಾ,ಘವ ಬಲು । ಜಾಣ,ನಹುದಹು,ದೋ ಽ ॥

–ವಾಲಿ ಸಂಹಾರ

ರಾಗ ನೀಲಾಂಬರಿ – ಏಕತಾಳ

ತಂಗಿ ಪೇ,ಳೇನು ಚೋ,ದ್ಯ ಽ ॥ ಶಕ್ರ,ನೆಲ್ಲೆಂಬು । ದಂಗಜಾಂ,ತಕಗೆ ವೇ,ದ್ಯ ಽ ॥ ಮಂಗಳೆ, ಶಚಿಯುತಾ,ನು ಽ ॥ ತೋರ,ಳಿನ್ನೆತ್ತ । ಹಿಂಗಿದ,ಳೇನಿ ದೇ,ನು ಽ ॥

–ಕುಮಾರ ವಿಜಯ

ರಾಗ ಆನಂದಭೈರವಿ – ಏಕತಾಳ

ಯಾರಯ್ಯಾ, ಮನುಜೇಶ, ತನ್ನ ॥ ಕೂಡಿ । ಕಾರಡ,ವಿಯೊಳು ಸಂ,ಪನ್ನ ॥ ಕಾರಣ,ವೇನಿಲ್ಲಿ, ಬರಲು ॥ ಪೇಳು । ಕಾರುಣ್ಯ, ಭಾವವಿ,ನ್ನಿರಲು ॥

–ರತ್ನಾವತೀ ಕಲ್ಯಾಣ

ರಾಗ ಕಾಪಿ – ಏಕತಾಳ

ನಿನ್ನ ಪು,ಣ್ಯದ ಕಣಿ,ಯು ಽ ಗುಣ ॥ ಚೆನ್ನೆ ಭಾ,ಗ್ಯದ ಮಣಿ ಯು ಽ ॥ ನಿನ್ನೆ ಇ,ರುಳಿನೊಳು, ಕಣ್ಣಿಗೆ, ನಿದ್ರೆಯು । ಹಣ್ಣದೆ, ಉದಯದಿ, ವಿಣ್ಣನೆ, ಬಂದ ॥

–ರುಕ್ಮಿಣೀ ಸ್ವಯಂವರ

ರಾಗ ಕಾಪಿ – ಏಕತಾಳ

ಪೇಳಲೇ,ನೆಲೆ ಮುನಿ ಪಾಲನೆ ।। ನಿನ್ನ । ಬಾಳಿಕೆ,ಯನು ಸತ್ಯ,ಶೀಲನೇ ॥ ಪಲ್ಲವಿ ॥ ಇನಿಯ ದು,ಷ್ಯಂತನು, ವೀರನು ॥ ಎನ್ನ । ಜನಕ ಕೌಶಿಕನ ತಿ, ಧೀರನು ॥ ಪೆತ್ತ । ಜನನಿ ಮೇ,ನಕೆಯಾದೊ,ಡೆನಗಿವ,ರೊಲವಿಲ್ಲ ॥

ದುಷ್ಯಂತ ಚರಿತ್ರೆ

ರಾಗ ಶಹಾನೆ – ಏಕತಾಳ

ಕರುಣಾಸಾ,ಗರ ಮಧು,ಸೂದನ ॥ ಕರಿ।ವರದ ಶಾ,ಶ್ವತ ಶತ್ರು,

ಭಂಜನ॥ ಮರೆಹೊಕ್ಕ,ವರಕಾವ, ಶರಣರಿ.ಷ್ಟವನೀವ। ಉರಗಶ,ಯನ ಜಗ, ದ್ಭರಿತ ಜ,ನಾರ್ದನ ॥ –ಪ್ರಹ್ಲಾದಚರಿತ್ರೆ

ರಾಗ ರೇಗುಪ್ತಿ - ಏಕತಾಳ

ನೋಡಿದೆ,ಯಾ ऽ ॥ ತಮ್ಮ। ನೋಡಿದೆ,ಯಾ ऽ ॥ ಪಲ್ಲವಿ ॥ ಪುಣ್ಯ ಕು.ಲದಿ ಪುಟ್ಟಿ। ನಿನ್ನೊಳು,ಗ್ರಹಿಸದೆ। ಮಿಣ್ಣನೆ, ಸ್ತ್ರೀಹತ್ಯ,ವನ್ನು ಮಾ, ಡುವಿರೆ ?॥ ಪುಣ್ಯಾತ್ಮೆ, ದ್ರೌಪದಿ, ಪರಮ ಪತಿ,ವ್ರತೆ। ನಿರ್ಣಯ,ವರಿಯದೆ, ಕಣ್ಣಾರೆ,ಕೊಲುತಿಹೆ ॥ –ರತಿಕಲ್ಯಾಣ

ರಾಗ ಕಮಾಚ್ - ಏಕತಾಳ

ಆಡಿದರ್, ತರುಣಿಯ,ರು ऽ ॥ ಮೋ,ದದಿ ಜಲ। ಕ್ರೀಡೆಯ, ಸುದ ತಿಯ,ರು ऽ ॥ಪಲ್ಲವಿ॥ ಖೋಡಿ ಮ,ನ್ಮಥ ಶರ,ದುರಿಯ ನಿ,ವಾರಿಪ। ಜೋಡಿಗ,ನಿಲ್ಲೆನು,ತ ऽ ॥ ತ,ಮ್ಮೊಳು ತಾಮೆ। ಗಾಢಾಲಿಂ,ಗನಗೆಯ್ಯು,ತ ऽ ॥ ಅನು ಪಲ್ಲವಿ॥ ಶರದಿಂದು,ಮುಖಿಯರಾ,ಗ ऽ ॥ ನಿ,ರ್ಮಲವಾದ । ಸರಸಿ ಯೊಳ್, ಮುಳುಗಿ ಬೇ,ಗ ऽ ॥ ಚರಣವ, ಪಿಡಿದೊರ್ವ,ಳನ್ನು ಮ,ತ್ತೊರ್ವ ಳು । ಹರುಷದಿಂ,ದೆಳೆಯುತ್ತ,ಲಿ ऽ ॥ ಹಿ,ಗ್ಗುತಲಾಗ । ಪರಿಪರಿ, ಚೇಷ್ಟೆಯ,ಲಿ ऽ ॥ –ದೇವಯಾನೀ ಕಲ್ಯಾಣ

ರಾಗ ಕಾಂಭೋಜಿ – ಆದಿತಾಳ

ಆರು, ಸುಪ್ರೀತ,ರು ऽ ॥ ನೀ, ಹೊರತೆನ್ನ। ನಾರು, ಕಾವವ,ರು ऽ ॥ ಪಲ್ಲವಿ॥ ಧರ್ಮ, ಸಂಭ,ವನು ऽ ॥ ಶಾ,ಸ್ತ್ರೋಕ್ತ ಸ। ದ್ಧರ್ಮ,ದಿಂದಿ ಹನು ऽ ॥ ನಿಮ್ಮನು,ಜರು ಯಮ,ಜನ ಮಹಾ,ವೀರರು। ಮರ್ಮವಿ,ಲ್ಲ ನಿಖರಿ,ಗೆ ऽ ॥ ಈ,ಬಗೆಗೆ ॥ –ಕೃಷ್ಣ ಸಂಧಾನ

ರಾಗ ನೀಲಾಂಬರಿ – ತ್ರಿವುಡೆತಾಳ

ಬಾಲನೇ,ನಾದ ಕಾಂ,ತ ऽ ॥ ಮೋ,ಹನಕಂಠ । ಮಾಲಮೌಕ್ತಿಕ ಜಯಂ,ತ ऽ ॥ ಶೀಲಸುಂ,ದರ ಗುಣ,ಜಾಲ ಕೋ,ಮಲನಂಶು । ಮಾಲಿ ಶೋ,ಭಿತನೇನಾ,ದ ऽ ॥ ದಾ,ವಲ್ಲಿ ಪೋ,ದ ऽ ॥ –ಕುಮಾರ ವಿಜಯ

ರಾಗ ಮುಖಾರಿ – ತ್ರಿವುಡೆತಾಳ

ಬೇಡ,ಪೈ ಛಲ,ವು ऽ ॥ ನಿ,ಮ್ಮೊಳಗಿಂತು। ಬೇಡ,ಪೈ ಛಲ,ವು ऽ ॥

ಪಲ್ಲವಿ ॥ ಬೇಡ ವೈ,ಭಲವು ನಿ,ಮ್ಮೊಳಗಿಂತು, ಸುಮ್ಮನೆ । ರೂಢಿಯೊ,ಳಪ
ಕೀರ್ತಿ,ಗೀಡಾಗ,ದಿರಿ ನೀವು ॥ ಅನು ಪಲ್ಲವಿ॥ ದೇಶ ಕಾ,ಲವನು ಹಿ,ತಾ
ಹಿತ, ಗುಣಗಳ । ಲೇಸಿನಿಂ,ದರಿಯದೆ, ಮೂರ್ಖರ,ತೆರದಿಂದ । ದ್ವೇಷವ,
ಪಿಡಿದು ನಿ,ಮ್ಮೊಳಗೆ ವಿ,ರೋಧಿಸಿ ಮೋಸ,ಹೋಗುವಿ,ರೇ? ॥ ಸು,ಕಾರ್ಯ
ವಿ । ನಾಶ,ರಾಗುವಿ,ರೇ?ऽ ॥ ಸಾಸಿರ,ಮಾತೇನು, ಬರ್ಪುದು, ಬರಲಿಯೊಂ ।
ದಾಸೆ, ತೀರುವು,ದೈಸೆ, ನೋಡಬಾ,ರದೆ ? ಮುಂದೆ ॥ –ಸುಭದ್ರಾ ಕಲ್ಯಾಣ

ಬ್ರಹ್ಮಗಣ ಪ್ರಧಾನ ಬಂಧಗಳು

ಕೆಲವು ಬ್ರಹ್ಮಗಣ ಪ್ರಧಾನಬಂಧಗಳು ನಿರ್ದಿಷ್ಟ ಪಾದಾಂತ್ಯ ಸ್ಥಾನಗಳಲ್ಲಿ ವಿಷ್ಣುಗಣವು ನಿಲ್ಲುತ್ತದೆ, ಆದರೆ ಇದನ್ನು ಬ್ರಹ್ಮಗಣ ಮತ್ತು ಗುರುವಿನಂತೆ ಉಚ್ಚರಿಸಬೇಕಾಗುವುದು. ಆದುದರಿಂದ ಬ್ರಹ್ಮಗಣ ಮತ್ತು ಗುರು ಎಂದು ವಿಭಜಿಸುವುದು ವಿಹಿತವೆನಿಸುತ್ತದೆ ಬ್ರಹ್ಮಗಣ ಪ್ರಧಾನಗೀತಗಳಲ್ಲಿ ವಿರಳವಾಗಿ ಬ್ರಹ್ಮಗಣ ಯುಗ್ಮಕದ ಸ್ಥಾನದಲ್ಲಿ ವೈಕಲ್ಪಿಕವಾಗಿ ರುದ್ರಗಣವೂ ಬರುತ್ತದೆ. ಈ ರುದ್ರಗಣವು ಪಠಣಕಾಲದಲ್ಲಿಬ್ರಹ್ಮಗಣ ದ್ವಯದಲಯವನ್ನೇ ಪಡೆಯುತ್ತದೆ.

ರಾಗ ತೋಡಿ – ಅಟತಾಳ

ಭರತ.ಕುಲಕೆ ತಕ್ಕ, ಶೌರ್ಯ । ಪರಮ, ಧೈರ್ಯೋತ್ಸಾಹ,ವೀರ್ಯ।
ವಿರುವು,ವಿವನೊ,ಳೈಸೆ, ಸಾಕಿ,ನ್ನು ऽ॥ ಮರುಗಿ, ಮಹಾಳ್ವ.ದೇನು ?, ಕಡೆಗಿ।
ನ್ನೊರೆವೆ, ಮಾತ,ನೊಂದ,ನೆಂದು। ಕುರುವ,ರೇಣ್ಯ,ನೊಡನೆ, ನುಡಿದ,ನು ऽ॥
–ಭೀಮ ವಿಜಯ

ರಾಗ ಭೂಪಾಳಿ - ಏಕತಾಳ

ಆವು,ದೋ ಪ್ರ,ಯಾಸ, ಬಲಿದು । ಠಾವು, ತಪ್ಪಿ, ಬರುವ, ನೊಲಿದು ।
ನಾವು, ಮೊದಲೇ, ಶಿವನ,ತಪುದು । ಸೋವು, ಪುತ್ತೆ, ತಿಳಿಯ,ಬಹುದು ॥
–ಬ್ರಹ್ಮ ಕಪಾಲ

ರಾಗ ಶಂಕರಾಭರಣ – ಏಕತಾಳ

ಏನೇ, ರಂಭೆ, ನರನ, ನಿಂತು। ನೀನು, ಹೊಗಳು,ತಿರುವೆನಿಂತು ।
ಮಾನ,ಸಕ್ಕೆ, ಬಂತೇ?,ಭ್ರಾಂತು। ಗಾನ,ಕೇಳ್ವಂತು ऽ ॥ –ಕಂಜಾಕ್ಷೀಕಲ್ಯಾಣ

ರಾಗತೋಡಿ ವಿಕತಾಳ

ಒಲಿದು,ಬಾರ.ದಿರ್ಪ,ವಧುಪ,ಗೆಳೆವು,ದೇಪಾ,ತಕವು ॥ ಒಲುಮೆ, ಯಿಂದ,ಬಾಧಿ,ಸುವದ,ರೊಳಗಿ,ನ್ನಾವ, ಸುಖವು ॥ ಖಲನು, ನೀನು, ನಿನಗೆ, ಸಾನು, ಸಿಲುಕು,ವಾಕೆ,ಯಲ್ಲ ॥ ಹಲವು ಮಾತಿ,ನ್ನೇಕೆ, ಪೋಗು,ಚಳಕದಿಂದ, ಖುಲ್ಲ ॥ –ನಿಕುಂಭಾಸುರ ವಧೆ

ರಾಗ ನೀಲಾಂಬರಿ ಆದಿತಾಳ

ತರುಣಿ,ಬಾರೇ, ಮೊಗವ,ತೋರೇ। - ಜರೆದೆ, ನಿನ್ನ,ನೆಂದು ॥
ಕೆರಳ,ದೆನಗಾ,ನಂದ, ಪಡಿಸೆ । ಕರುಣ,ದಿಂದ,ಲಿಂದು ॥
–ವಿಶ್ವಾಮಿತ್ರ ಪ್ರತಾಪ

ಬ್ರಹ್ಮಗಣ ಪ್ರಧಾನ ಬಂಧಗಳ ವರಣದಲ್ಲಿ ಕೆಳಗಿನಂತೆ ಅಕ್ಷರ ವಿನ್ಯಾಸವಿರಬಹುದು.

। ಒಂದು ಬ್ರಹ್ಮಗಣ
।। ಎರಡು ಬ್ರಹ್ಮಗಣಗಳು
।।। ಒಂದು ಗುರು ಮತ್ತು ಎರಡು ಬ್ರಹ್ಮಗಣಗಳು

ಈ ಛಂದೋಬಂಧಗಳಲ್ಲಿ ವರಣದ ಪೂರ್ವಪಾದ ಮತ್ತು ಉತ್ತರ ಪಾದಗಳ ಅಂತ್ಯ ಸ್ಥಾನಗಳಲ್ಲಿ ಗುರುವಾಗಲೀ - ಬ್ರಹ್ಮಗಣವಾಗಲೀ ಬರುವುದು.

ರಾಗ ಮಧುಮಾಧವಿ – ಅಟತಾಳ

ಅಳದಿ,ರೋ ಽ ॥ ಭೂಪ ॥ ಅಳದಿ,ರೋ ಽ ॥ ಪಲ್ಲವಿ ॥ ಅಳಲ, ಬೇಡೈ, ನಿನ್ನ, ಮಗನ ! ನಲವಿ,ನಿಂದ, ಕೂಡಿ, ಮುದದೋಳಿಳೆಯು, ಪಾಲಿ, ಸಯ್ಯ, ನೀನು । ತಳುವ.ದೀಗ, ಪೋಪೆ, ನಾನು ॥ –ಮದಾಲಸಾ ಕಲ್ಯಾಣ

ರಾಗ ಘಂಟಾರವ – ಅಟತಾಳ

ಒಳ್ಳಿ,ತಾಯ್ತು ॥ ಹರಿಯೆ । ಒಳ್ಳಿ,ತಾಯ್ತು ॥ ಪಲ್ಲವಿ ॥
ಒಳ್ಳಿ,ತಾಯ್ತು, ನನ್ನ, ಕೆಳಗೆ । ತಳ್ಳಿ,ದೆಯಲಾ,ರಕ್ಕಿ,ನೊಳಗೆ । ಸುಳ್ಳಿ,ನಲ್ಲಿ, ಶ್ರೇಷ್ಠ, ನಿನಗೆ । ಮುಳ್ಳಿ,ನಂತೆ, ಮನಸು, ಹೀಗೆ ॥ –ಬ್ರಹ್ಮ ಕಪಾಲ

ರಾಗ ಪೂರ್ವಿ – ಅಟತಾಳ

ಪರರು, ಬಂದು, ವನವ,ಪೊಕ್ಕು, ತರುವ,ನೊಯ್ವು,ದುऽ ॥
ಕೇಳು । ತರವೇ ?, ಪ್ರಾಣ,ಕಾಂತ, ಸುಪ್ಮ್ರ,ನಿರಲು, ಸಲ್ಲ,ದುऽ ॥
ಸುರರ, ಸರ್ವ,ಭೀಷ್ಟ,ವೀವ, ಚೆಲ್ವ,ದ್ರುಮವಿ,ದುऽ ॥ ನಾವು ।
ಬರಿದೆ, ಜೀವಿ,ಸುವುದು, ಹೇಗೆ?, ನೀತಿ,ಯಲ್ಲಿ,ದುऽ ॥ –ಪಾರಿಜಾತ

ರಾಗ ವರಾಳಿ – ಏಕತಾಳ

ಲೇಸು,ಕಾರ್ಯ,ವೇನೋ, ನಿನಗೆ, ಕಂಸ,ರಾಯ ॥ ಇವಳ । ಘಾಸಿ, ಮಾಳ್ಪ,ದುಚಿತ,ವೇನೋ, ಕಂಸ,ರಾಯ ॥ ಹೇಸ,ದಿಹಳೇ, ಭಾಗ್ಯ,ಲಕ್ಷ್ಮಿ? ಕಂಸ,ರಾಯ । ಕೀರ್ತಿ । ನಾಸ,ದಿರದು, ನಿಮಿಷ,ದಲ್ಲಿ, ಕಂಸ,ರಾಯ ॥

–ಕೃಷ್ಣ ಚರಿತೆ

ರಾಗ ವರಾಳಿ – ಏಕತಾಳ

ಏನು, ಬುದ್ಧಿ, ನೆನೆದೆ,ಯಯ್ಯೋ, ರಾಮ ॥ ನೀ,ನೆನ್ನ, ಕೊಂದು । ಕಾನ,ನಕ್ಕೆ, ಮತ್ತೆ,ಪೋಗು, ರಾಮ,ರಾಮ ॥ ದಾನವರು, ತಿನ್ನ,ರೇನೋ, ರಾಮ ॥ ನಿ,ನ್ನೀಕೈ,ವಿಡಿದ, ಮಾನಿನಿಗಿ,ನ್ನೇನು, ಗತಿಯೋ, ರಾಮ,ರಾಮ ॥

–ರಾಮ ಪಟ್ಟಾಭಿಷೇಕ

ರಾಗ ನೀಲಾಂಬರಿ – ಏಕತಾಳ

ದಾನ,ವಾರಿ, ಮಾಡ,ಲಾಲಿ,ಸುऽ ॥ ಸು,ಪ್ರೇಮ,ದಿಂದ । ಲೀನ,ರಂಗೆ, ಮತಿಯ,ಪಾಲಿ,ಸು ऽ ॥ ನಾನು, ಬೆರೆತ,ದೆಸೆಯೊ,ಳಿವರಿ,ಗೆऽ ॥ ಈ, ರೀತಿ, ಬಹಳ, । ಹಾನಿ,ಯಾಯ್ತಿ,ನ್ನಾದೊ,ಡಿವರಿ,ಗೆ ऽ ॥ –ಕರ್ಣಪರ್ವ

ರಾಗ ತೋಡಿ – ಏಕತಾಳ

ಮೋಸ, ಮಾಡಿ, ಪೋದ,ಕಾಣ,ಮ್ಮ ऽ ॥ ಆ, ಪೊಡವಿ,ಯಧಿಪ । ಏಸು,ಕೃತಕ,ಕಾರ,ತಾನ,ಮ್ಮ ऽ ॥ ಈ ಸು,ದತಿಯ, ಮೆರೆವ, ಮೈಯ । ಮೊಸಲೂ ಯಾ,ವನವ, ಕಂಡು । ಆ ಸ,ಮಯಕೆ, ತನ್ನ, ಕೆಲಸ । ತಾಪಾಧಿ ಸು,ತಿವಳ ತೊರೆದು ॥ –ಶಕುಂತಳಾ ಪರಿಣಯ

ರಾಗ ಪೂರ್ವಿ – ಏಕತಾಳ

ದಂಡು, ಬಂದಿ,ತು ऽ ॥ ಭಾ,ವಯ್ಯ, ರಾಮ । ದಂಡು, ಬಂದಿ,ತು ऽ

॥ ಪಲ್ಲವಿ ॥ ಕಂಡ,ರೇ ಕೌ,ತುಕವು, ನಿಮ್ಮ । ಗಂಡು,ತನವು,ನಡೆಯು,ದಿಂದು ॥ ಅನುಪಲ್ಲವಿ ॥ ಆನೆ, ಕುದುರೆ, ರಥ ಪ,ದಾತಿ ಸೇನೆ,ಗಳ ಸಂ,ದೋಹ,ವು ऽ ॥ ಏನ,ನೆಂಬೆ, ಪರಿಕಿ,ಸಿದರೆ, ಜೇನು,ನೊಣದ, ವ್ಯೂಹವು ऽ ॥ ನೀನೆ,ನೋಡು, ಪಟುಭ,ಜರ ವಿ,ತಾನ,ದತ್ಯು,ತ್ಸಾಹವು ऽ ॥ ಶ್ವಾನೆ, ಬಂದಿ,ರುವುದು, ನಮ್ಮ, ಮಾನ,ರರ ಸ,ಮೂಹ,ವು ऽ ॥ —ರಾಮಾಂಜನೇಯ ಕಾಳಗ

ರಾಗ ಆನಂದ ಭೈರವಿ – ಏಕತಾಳ

ಮೂರು, ಲೋಕ,ಕಗ್ರ,ಗಣ್ಯ । ವೀರ,ದನುಜ, ಕುಲವರೇಣ್ಯ । ರಕ್ಷಿ,ಸು ऽ ॥ ಎನ್ನ । ನೀಕ್ಷಿ,ಸು ऽ ॥ —ಅತಿಕಾಯ ಕಾಳಗ

ರಾಗ ಆನಂದ ಭೈರವಿ – ಏಕತಾಳ

ಎಷ್ಟು, ಪೇಳಿ,ದಡೆಯೂ, ಮನವು । ತುಷ್ಟಿ, ಹೊಂದ,ದಮ್ಮ, ನಿತ್ಯ ।
*
ಕಷ್ಟ,ಪಡುವೆ,ನೆಂತು, ಬಿಡಲಿ, ಕ್ಲೇಶವ ऽ ॥ ಮೋಹ । ಪಾಶ,ವ ऽ ॥

—ಶ್ರೀಕೃಷ್ಣ ಬಾಲಲೀಲೆ

ರಾಗ ಆನಂದ ಭೈರವಿ – ಏಕತಾಳ

ಮಾನ,ವಂತೆ, ಅಕ್ಕ,ನಿನ್ನ । ನೂನ, ಚಂದ್ರ,ವದನ, ಬಾಡಿ । ಹೀನ, ತೇಜ,ವಾಸಿ, ತೋರ್ಪ । ದೇನಿ,ದೆನ್ನೊ,ಳುಸಿರೆ, ಸುಬಲ । ನಂದಿ,ನೀ ऽ ॥ ನಳಿನ । ಗಂಧಿ,ನೀ ऽ ॥ —ಪಾಂಡವ ವಿಜಯ

ರಾಗ ಘಂಟಾರವ – ಆದಿತಾಳ

ಅಕ್ಕ, ನೋಡಿ,ದೇನು, ಚೋದ್ಯ,ವೇ ? ऽ ॥ ಮನೆಯ,ನಾರೋ । ಪೊಕ್ಕ,ನಾತ,ಗೆಷ್ಟು, ವಿದ್ಯ,ವೇ ? ऽ ॥ ಸಿಕ್ಕದೊಳಿ,ಟ್ಟಿರ್ಪ,ಪಾಲು । ನೆಕ್ಕಿ, ದಂತಾ,ಗಿರ್ಪ,ವಲ್ಲೆ । ಮಕ್ಕಳಿಗೆಂ,ದಿಟ್ಟ,ನಾದ । ರಿಕ್ಕ,ಲೇನು, ಇಲ್ಲ,ವಲ್ಲೆ ॥

—ಶ್ರೀಕೃಷ್ಣ ಬಾಲಲೀಲೆ

ರಾಗ ಪಂತುವರಾಳಿ – ಆದಿತಾಳ

ಲಾಲಿ,ಸಯ್ಯ ॥ ಭೂಪ ॥ ಲಾಲಿ,ಸಯ್ಯ ॥ ಪಲ್ಲವಿ ॥ ಲಾಲಿ,ಸೈ ಸು,ಶೀಲ, ಧರಣೀ। ಪಾಲ, ನಾನು, ಪೇಳು,ವುದನು॥ ಅನುಪಲ್ಲವಿ॥ ಬರಿದೆ, ಮೂಢ,ರಂತೆ, ನೀನು । ಮರುಗಿ, ಮಾಳ್ಪ, ಕಾರ್ಯ,ವೇನು? । ನರರಿ,

ಗಜನ,ಲಿಖಿತ, ತಪ್ಪ,ಲರಿದು, ಭಾವಿ,ಸೆ ॥ ಅರಸಿ,ಯುಗಲಿ, ಪೋದ,ಳೆಂದು। ಕೊರಗು,ತಿರ್ಪೆ, ಯೆಮ್ಮ,ಕಾಯು। ಸ್ಥಿರವೇ?,ಮೂರು,ದಿನದ, ಬಾಳ್ವೆ। ಯರಿಯೆ,ಯೇನು?, ದೊರೆಯೆ,ನೀನು ॥ –ದುಷ್ಯಂತ ಚರಿತ್ರೆ

ರುದ್ರಗಣ ಪ್ರಧಾನ ಬಂಧಗಳು

ಕೆಲವು ರುದ್ರಗಣ ಬಂಧಗಳ ನಿಶ್ಚಿತಪಾದಾಂತ್ಯ ಸ್ಥಾನದಲ್ಲಿ ಗುರುವಾಗಲಿ ಬ್ರಹ್ಮಗಣವಾಗಲಿ ಬರುವುದು. ಕೆಲವು ಪದಗಳಲ್ಲಿ ರುದ್ರಗಣ ಸ್ಥಾನದಲ್ಲಿ ವೈಕಲ್ಪಿತವಾಗಿ ವಿಷ್ಣುಗಣವು ಬರುತ್ತದೆ.

ರುದ್ರಗಣ ಪ್ರಧಾನ ಬಂಧಗಳಲ್ಲಿ ಬ್ರಹ್ಮಗಣ ಪ್ರಧಾನ ಬಂಧಗಳ ಲಯವೇ ಗೋಚರಿಸುತ್ತದೆ.

ರಾಗ ಕಾಂಭೋಜಿ – ಏಕತಾಳ

ಬಾಲೆ ಕೇಳ್ ಪೂ,ಮಾಲೆ ಚಾರು। ಶೀಲೆಯಿಂದು, ನಿನ್ನ ಕಾಂತ।
ಭೂಲೋಕವ, ರಾಮನಿಗೆ। ಪಾಲಿಸಬೇ,ಕೆಂದ ಹೀಗೆ ॥

–ರಾಮ ಪಟ್ಟಾಭಿಷೇಕ

ರಾಗ ಕಾಂಭೋಜಿ – ಏಕತಾಳ

ಸೃಷ್ಟಿಜಾತೆ, ನಿನ್ನ ಮಕ್ಕಳ್। ಪುಟ್ಟಿದ ಲ,ಗ್ನದ ಗುಣದಿ। ಅಷ್ಟದಿಕ್ಪಾ,ಲಕರಿಂದಲೂ, ಶ್ರೇಷ್ಠರೆನ್ನಿ,ಸಿ ಽ ॥ ಕಷ್ಟದಿಂದ, ತಂದೆಗೆ ಮ। ತ್ತಿಷ್ಟವಾಗಿ, ಮುಂದಯೋಧ್ಯಾ। ಪಟ್ಟಣವಾ,ಳ್ವರು ಕೇಳವ್ವ, ದೃಷ್ಟಾಂತವಿ,ದು ಽ ॥ –ಕುಶಲವರ ಕಾಳಗ

ರಾಗ ಘಂಟಾರವ – ಏಕತಾಳ

ಮಾರನಸ್ತ್ರ,ತಾಗ ಬಿಗು,ಪೇರಿತಲ್ಲೆ, ಬಾಲೆ ॥ ನಾರಿ ಯೆನ್ನ,ಮೇಲೆ ದಯು,ದೋರೆ ನೀ ದ,ಮ್ಮಯ್ಯ ॥ ಪಲ್ಲವಿ ॥ ಇಪ್ಪತ್ತು ತೋ,ಳಲ್ಲಿ ತೆಗೆ, ದಪ್ಪಿಕೊಂಬು,ದಕ್ಕೆ। ಅಲ್ಪ ಮನ,ಸಲ್ಲ ಕೇಳೆ, ಕರ್ಪೂರ ಸು,ಗಂಧಿ ॥

–ಚೂಡಾಮಣಿ

ರಾಗ ಎರುಕಲ ಕಾಂಭೋಜಿ – ಏಕತಾಳ

ಬಂದಿರೇನ್ನೈ ॥ ನಡೆ। ತಂದಿರೇನ್ನೈ ॥ ಪಲ್ಲವಿ ॥ ಅಂಗಭೂಮಿ,ಪಾಲನಮೋ, ವಂಗದೇಶಾ,ಧೀಶ ನಮೋ। ಬಂಗಾಳದ,ರಾಯನೇ ಕ,ಳಿಂಗನೇ ಸ,ಮೋ ॥ –ಸೀತಾ ಕಲ್ಯಾಣ

ಯಾಲಪದ

ಪ್ರಾಚೀನ ಯಕ್ಷಗಾನ ಕೃತಿಗಳಲ್ಲಿ ಯಾಲಪದವೆಂಬ ಅಂಶಿಗಣ ಬಂಧವು ಕಂಡು ಬರುವುದು. ಇದನ್ನು ಇಚ್ಛಾನುಸಾರವಾಗಿ ಯಾವ ರಾಗ ತಾಳಗಳಲ್ಲಿಯೂ ಹಾಡಬಹುದು.

ಕೆಳಗಿನ ಯಾಲಪದದಲ್ಲಿ ಬ್ರಹ್ಮಗಣಗಳಿರುತ್ತವೆ.

ಹುಲಿಯ, ಮೆಯ್ಯ, ಚರ್ಮ,ವನ್ನು । ಸುಲಿದು, ಶೂಲ,ಧರನು, ಕೊಂಡ । ತಲೆಯ, ತರಿದು, ಬ್ರಹ್ಮ.ಕೊಂಡ,ನು ॥ ಅ, ಹುಲಿಯ । ಜಲಜ, ನಯನ, ಹರಣ,ಕೊಂಡ,ನು ॥ –ಗೋವಿನ ಚರಿತ್ರೆ

ಕೆಳಗಿನ ಯಾಲಪದದಲ್ಲಿ ಬ್ರಹ್ಮಗಣ ರುದ್ರಗಣಗಳು ಮಿಶ್ರವಾಗಿ ಬರುತ್ತವೆ.

ಎನ್ನ ಸತೀ,ಸುತರು, ಗೃಹವು । ಎನ್ನ, ರಾಷ್ಟ್ರ, ಪುರಜನರು । ನಿನ್ನ ದರ್ಶ,ನದೊಳು, ಧನ್ಯ,ರು ॥ ಹೇ, ಬ್ರಹ್ಮ,ಋಷಿಯೆ । ಜಿನ್ನಪವ, ಲಾಲಿಸು ॥ ಅಜಾಮಿಳ ಚರಿತ್ರೆ

ಯಾಲಪದವನ್ನು ಹಾಡುವಾಗ ಬ್ರಹ್ಮಗಣದ ಲಯವೇ ಗೋಚರಿಸುತ್ತದೆ.

ಅಂಶಿಗಣ ಮಾತ್ರಾಗಣ ಮಿಶ್ರಿತ ಗೀತಗಳು

ಕೆಲವು ಯಕ್ಷಗಾನ ಪದಗಳ ಪೂರ್ವಭಾಗದಲ್ಲಿ ಅಂಶಿಗಣಗಳೂ ಉತ್ತರ ಭಾಗದಲ್ಲಿ ತ್ರಿಮಾತ್ರಾಗಣ ಚತುರ್ಮಾತ್ರಾಗಣಗಳೂ ಬರುತ್ತವೆ.

ರಾಗ ತೋಡಿ – ಅಟತಾಳ

ವಿ ವಿ ವಿ ವಿ ವಿ ವಿ ಗ
ಲಾಲಿಸಿ, ಭೂಪರು, ಕೇಳುಬ,ಲರೊಳಿಂದು। ಕಾಳಗ,ದೊಳು ನಮ,ಗೆ ऽ ॥
ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ಸೋಲ,ವಾಯಿತು,ಯೆಂದು, ಚಿಂತೆಯ । ತಾಳ,ಬೇಡಿರಿ, ಶಿವನು, ಮುಂದಕೆ
ತ್ರಿ ಚ ತ್ರಿ ಚ
ಪಾಲಿ,ಸುವನೈ, ಜಯವ, ಯುದ್ಧದಿ ॥ –ರೇವತೀ ಕಲ್ಯಾಣ

ರಾಗ ದೇಶಿ – ಅಟತಾಳ

ಬ್ರ ವಿ ವಿ ವಿ ತ್ರಿ ಚ ತ್ರಿ
ನಿಲ್ಲು, ನಿಲ್ಲೆಲೋ, ಖುಲ್ಲ ದಾ,ನವ ನಿನ್ನ । ಗೆಲ್ಲು,ವೆಂಕ್ಷಣ,ದಲ್ಲಿ,
ಚ ತ್ರಿ ಚ ತ್ರಿ ಗ
ನನ್ನಯ । ಮಲ್ಲ, ಸಾಹಸ, ಬಲ್ಲೆ,ಯಶಾ ऽ ॥ –ಚಂದ್ರಮೌಳಿ ಕಾಳಗ

ರಾಗ ಮಾರವಿ – ಅಟತಾಳ

ಬ್ರ ವಿ ವಿ ಬ್ರ ತ್ರಿ ಚ ತ್ರಿ
ರಾಮ, ದೇವನೆ, ಕೇಳೆಮ್ಮ,ನುಡಿಯ ॥ ಸ್ವಾಮಿ,ಯೆಮ್ಮಲಿ, ಪ್ರೇಮ,ದ
ಚ ತ್ರಿ ಚ ತ್ರಿ ಚ ಬ್ರ
ಭಯವ,ನೀವೊ,ದಲೆ ಕೊಡಿ,ಸೀಮು,ಹೂರ್ತದಿ ॥ ಪಲ್ಲವಿ ॥ ಇಂದು,
ವಿ ವಿ ಬ್ರ ಬ್ರ ವಿ ವಿ ಬ್ರ ಬ್ರ
ಖೂಳನಿ,ಕುಂಭನ, ಪುರಕೆ ॥ ಮಂದಿ, ಮಾರ್ಬಲ,ವೆರಸಿ ಬೆಂ,ಬಲಕೆ॥ ಇಂದಿ,
ವಿ ವಿ ಬ್ರ ತ್ರಿ ಚ ತ್ರಿ ಚ ತ್ರಿ
ರೇಶ್ವರಾ,ದಿಗಳ್ಯೆದಿ,ರಣಕೆ ॥ ಬಂದ, ರಾಕ್ಷಸ,ವೃಂದ,ವನುಸಲೆ।ಕೊಂದ,
ಚ ತ್ರಿ ಚ
ಕೆಡಹುತ, ಮುಂದುವರಿದರು ॥ –ನಿಕುಂಭಾಸುರವಧೆ

ರಾಗ ಬೇಗಡೆ – ತ್ರಿವುಡೆತಾಳ

ವಿ ವಿ ವಿ ಬ್ರ ವಿ
ಮರುಗದಿ,ರೆಲೆ ವಿಪ್ರ, ಕೇಳು ನೀ, ಮುದದಿ ॥ ಧುರದೊಳು,
ವಿ ವಿ ಬ್ರ ವಿ ವಿ ವಿ ಬ್ರ
ಘನದುಷ್ಟ, ಭೂಪನ ಭರದಿ ॥ ತರಿದು ನಾ, ಯಮಪುರ, ಕಟ್ಟುವೆ, ನಿನಗೆ ॥
ವಿ ವಿ ವಿ ಬ್ರ ತ್ರಿ ಚ ತ್ರಿ
ದುರುಳನ, ಭಯಬೇಡೆಂ,ದೆನುತಲಾ,ತನಿಗೆ ॥ ತರಿಸು,ತಲೆ ಬಹು,ವಿಧದ,
ಚ ತ್ರಿ ಚ ತ್ರಿ ಚ ತ್ರಿ ಚ ತ್ರಿ
ವಸ್ತ್ರಾ। ಭರಣ, ಭೂಷಣ,ಕೊಡುತ, ಷಡ್ರಸ। ಭರಿತ, ಭೋಜನ, ಗೈಸು,
ಚ ತ್ರಿ ಚ ತ್ರಿ ಚ
ತಾಮುರ। ಹರನು, ಸಾತ್ಯಕಿ,ಗೆಂದ, ನಗುತಲಿ ॥ –ರೇವತೀ ಕಲ್ಯಾಣ

ಅಂಶಿಗಣ ಮಾತ್ರಾಗಣ ಮಿಶ್ರಿತ ಗೀತಗಳ ಪೂರ್ವಭಾಗದಲ್ಲಿ ಮಾತ್ರವೇ ವರಣಗಳು ಬರುವುವು. ಕೆಳಗಿನ ಪದಗಳ ಪೂರ್ವಭಾಗದಲ್ಲಿ ಅಂಶಿಗಣಗಳೂ ಉತ್ತರಭಾಗದಲ್ಲಿ ತ್ರಿಮಾತ್ರಾಗಣ ಚತುರ್ಮಾತ್ರಾಗಣಗಳೂ ಕಂಡುಬರುವುವು.

ರಾಗ ಜಂಜೂಟಿ – ಅಟತಾಳ

ವಿ ವಿ ಬ್ರ ಶೇ ವಿ ವಿ
ಒಡೆಯುಗ,ಲ್ಲದ ವಸ್ತು,ವುಂಟೇ ? ॥ ಮತ್ತಾ । ಬಡಜಿಷ್ಣು,ವಿಗೆ ಶಚಿ,
ಬ್ರ ವಿ ವಿ ವಿ ವಿ ತ್ರಿ ಚ
ಗಂಟೇ ? ॥ ಒಡನೆ ಗ,ಮಿಸುತಂಚೆ, ನಡೆಯು ತಂ,ದಪೆನಿತ್ತು । ತಡೆದೊ,ಡಮರರ,
ತ್ರಿ ಚ ತ್ರಿ ಚ ತ್ರಿ ಚ
ಬಡೆದು, ಶಕ್ರನ। ಕೆಡಹಿ,ತಾರದೆ, ಬಿಡೆನು, ನಿಶ್ಚಯು ॥ –ಕುಮಾರ ವಿಜಯ

ರಾಗಸಾರಂಗ ಅಟತಾಳ

ವಿ ವಿ ಗ ಶೇ ವಿ ವಿ
ಚರರೆಂದ, ನುಡಿಕೇಳು,ತ ಽ ॥ ರಾ,ಮನು ಘನ।ಪರಿತೋಷ,ಮನು
ವಿ ಗ ವಿ ವಿ ವಿ ವಿ ತ್ರಿ ಚ
ತಾಳು,ತ ಽ ॥ ವರಯುತಿ,ಗಳನು ಕಂ,ಡೆರಗದಾ,ತನ ಜನ್ಮ।ನರಕ, ಭಾಜನ.
ತ್ರಿ ಚ ತ್ರಿ ಚ ತ್ರಿ ಚ
ಮೆಂಬು,ದನು ನಾ।ನರಿತು, ಸುಮ್ಮನೆ, ಕುಳಿತೊ,ಡುಚಿತದೆ?, –ಸುಭದ್ರಾಕಲ್ಯಾಣ

ರಾಗ ಕಾಪಿ – ಅಟತಾಳ

ವಿ ವಿ ಬ್ರ ಶೇ ವಿ ವಿ ವಿ
ಆಹಾ ಯಶಾ,ದವರೆಲ್ಲ, ಕೇಳಿ ॥ ನೀವು । ಸಾಹಸ,ವಂತರು, ಸೈರಣೆ,
ಬ್ರ ವಿ ವಿ ವಿ ವಿ ತ್ರಿ ಚ ತ್ರಿ
ತಾಳಿ ॥ ಬೇಹಭ,ಟರ ಸತ್ವ,ಶಾಹುರ,ವಡಗಿದು । ದೀಹ,ದನ ತರ,ವಲ್ಲ,
ಚ ತ್ರಿ ಚ ತ್ರಿ ಚ
ಮರೆಪೊಗ । ಲಾಹ,ವದಿ ಭಟ,ರಿರಿಯ,ಲಾಗದು ॥ –ರೇವತೀ ಕಲ್ಯಾಣ

ರಾಗ ಕಲ್ಯಾಣಿ – ಅಟತಾಳ

ಬ್ರ ವಿ ಗ ವಿ ಬ್ರ ವಿ ಗ
ಏನ,ನುಸಿರಿದೆ,ಯೋ ಽ ॥ ಎಲೊ ತಮ್ಮ । ಏನ, - ನುಸಿರಿದೆ,ಯೋ ಽ

ತ್ರಿ ಚ ತ್ರಿ ಚ ತ್ರಿ ಚ ತ್ರಿ
॥ಪಲ್ಲವಿ॥ ಏನ,ನುಸಿರಿದೆ,ಯೆಲವೊ, ತಮ್ಮ ನಿ । ಧಾನಿ,ಸದೆ ಶ್ರೀ,ಗುರುವ,
ಚ ತ್ರಿ ಚ ತ್ರಿ ಚ ತ್ರಿ ಚ
ರರ ಮಹಿ । ಮಾನು,ಭಾವವ,ನರಿಯ,ದೀಪರಿ । ಹೀನ, ಕಟಕಿಯೆ,
ತ್ರಿ ಚ
ಬರಿದೆ,ಯೆನ್ನೊಳು ॥ —ಸುಭದ್ರಾ ಕಲ್ಯಾಣ

ರಾಗ ಕಲ್ಯಾಣಿ – ಅಟತಾಳ

ವಿ ವಿ ಗ ಶೇ ವಿ ವಿ ವಿ ಗ
ಏಕಿನಿ,ತುಸಿರುವಿ,ರಿs ॥ ಎ,ನ್ನೊಳುಬರಿ । ದೇಕಿನಿ,ತುಸಿರುವಿ,ರಿs ॥
ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ಏಕ,ದಿನಿತುಸಿ,ರುವಿರಿ,ಸುಮ್ಮಗ । ನೇಕ,ರೈತಂ,ದೊರಲು,ತನ್ನಯ ।
ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ಶೋಕ,ತಮ್ಮಟೆ,ಗರುಹಿ,ದಂಡದಿ । ಪಾಕ,ಶಾಸನ,ಧಿಷಣ,ಮುಖ್ಯರು ॥
—ಕುಮಾರ ವಿಜಯ

ರಾಗ ಕಲ್ಯಾಣಿ – ಅಟತಾಳ

ವಿ ವಿ ಗ ಶೇ ವಿ ವಿ ವಿ
ಕೇಳಯ್ಯ,ಪಾರ್ಥನೀ,ನುs ॥ ನಿ,ನ್ನೊಳುನಾನು । ಪೇಳುವ,ನುಡಿಗಳ,
ಗ ಶೇ ವಿ ತ್ರಿ ಚ ತ್ರಿ ಚ ತ್ರಿ
ನ್ನುs ॥ ಸಾಂ,ಗದೊಳಿನ್ನು । ಜಾಲ,ವಲ್ಲಾ,ಯಿದಿರು,ನಿನ್ನೊಳು । ಕಾಳ,
ಚ ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ಗಕೆನಿಂ,ದಿರುವ,ಭಟಕ । ಟ್ಟಾಳು,ವೈಷ್ಣವ,ರೆರೆಯ,ಪೃಥ್ವೀ । ಪಾಲ,ರೊಳಗ,
ತ್ರಿ ಚ
ಗ್ಗಳಬ,ಲಾನ್ವಿತ ॥ —ತಾಮ್ರಧ್ವಜ ಕಾಳಗ

ರಾಗ ಮಾರವಿ – ಅಟತಾಳ

ಬ್ರ ವಿ ಗ ಶೇ ವಿ ಬ್ರ ವಿ ಗ
ಆರೆ,ಲೋಮನು,ಜs ॥ ಬಂ,ದಿರುವವ । ನಾರೆ,ಲೋಮನು,ಜs
ತ್ರಿ ಚ ತ್ರಿ ಚ ತ್ರಿ ಚ ತ್ರಿ
॥ಪಲ್ಲವಿ॥ ಆರೊ,ಸುಮ್ಮನೆ,ಹುಲಿಯ,ತುತ್ತಿಗೆ । ಹಾರಿ,ಬಂದಿಹ,ಕುರಿಯ,

ಚ ತ್ರಿ ಚ ತ್ರಿ ಚ ತ್ರಿ ಚ
ತೆರದಲಿ । ನಾರಿ,ಯನ್ನೊಡ,ಗೊಂಡು,ಯಮುನೆಡೆ । ಸೇರು,ವೊಡೆ ಸರಿ,
ತ್ರಿ ಚ ಬ್ರ ವಿ ಗ ವಿ
ಯಾಗಿ,ಬಂದವ ॥ ನಾರೆ,ಲೋಮನು,ಜ ॥ಅನು ಪಲ್ಲವಿ ॥ ಮನುಜರ,
ವಿ ಬ್ರ ಶೇ ವಿ ವಿ ಬ್ರ ತ್ರಿ
ಮಾಂಸವ,ಮೆಲದೆ ॥ ಬಲು । ದಿನವಾಯ್ತು,ಸಾನಿತ್ತ,ಬರದೆ ॥ ಮನಕೆ,
ಚ ತ್ರಿ ಚ ತ್ರಿ ಚ ತ್ರಿ ಚ ತ್ರಿ
ತೋಷವ,ದಾಯ್ತು,ಬಿಡದೀ । ಕ್ಷಣದಿ,ಹಿಡಿದೊಡ,ನೀಕೆ,ಯನುನಾ । ಮನೆಗೆ,
ಚ ತ್ರಿ ಚ ತ್ರಿ ಚ ತ್ರಿ ಚ
ಕೊಂಡೊ,ಯ್ದಿಡುವೆ,ಕೊಬ್ಬಿಸಿ । ಘನದಿ,ಬೋನವ,ಗೆಯ್ವೆ,ನಂತರ ॥

—ರತ್ನಾವತೀ ಕಲ್ಯಾಣ

ರಾಗ ಪಂತುವರಾಳಿ ಅಟತಾಳ

ವಿ ವಿ ವಿ ವಿ ವಿ
ಕೇಳ್ದಿರೇ ॥ ನೀವು ಸ,ರ್ವರು ಬೇಗ॥ ಕೇಳ್ದಿರೇ॥ ಪಲ್ಲವಿ॥ ಅಮ್ಮಮ್ಮ,
ವಿ ವಿ ಬ್ರ ವಿ ವಿ ವಿ ಬ್ರ
ಈ ಪಾಟಿ, ಸವಿಗಾಣೆ, ನೇಸು ॥ ಕಮ್ಮಗಾ,ಗಿಹುದು ಕೌ,ರವನೆನೋ,ಡೀಸು॥
ವಿ ವಿ ವಿ ವಿ ವಿ ವಿ
ತಮ್ಮನ, ರಕ್ತವೆಂ,ದಿನಿತು ಹೇ,ಸದೆ ನೀ ಬಂ।ದೊಮ್ಮೆ ಸೇ,ವಿಸಿದೊಡೆ,
ವಿ ಬ್ರ ತ್ರಿ ಚ ತ್ರಿ ಚ ತ್ರಿ ಚ
ತೋರ್ಪುದು,ಲೇಸು ॥ ಸುಮ್ಮ,ನಿರ ಬೇ,ಡತ್ತ, ಬಾಸುರ। ರಮ್ಮ,ಕೊಂಡಿಹ,
ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ಸುಧೆಗೆ, ಮಿಗಿಲಹು। ದುಮ್ಮ,ಳಿಸದೀ,ಗೆಂದ, ಮಾತಿನ। ಸೊಮ್ಮ,ನಾದರೂ,
ತ್ರಿ ಚ
ನೀ ಪ,ರಿಕ್ಷೀಸು ॥ ಕರ್ಣಪರ್ವ

ರಾಗ ಕಾಂಭೋಜಿ – ತ್ರಿವುಡೆತಾಳ

ವಿ ವಿ ಗ ಶೇ ವಿ ವಿ ವಿ ಗ
ಪಾಹಿಶ್ರೀ, ಪದ್ಮನಾ,ಭ ಽ ॥ ನಾ,ರಾಯಣ। ಪಾಹಿಶ್ರೀ, ಪದ್ಮನಾ,ಭ ಽ
ತ್ರಿ ಚ ತ್ರಿ ಚ ತ್ರಿ ಚ ತ್ರಿ
॥ ಪಲ್ಲವಿ ॥ ಪಾಹಿ,ಸತತಾ,ನಂದ, ಮುರಹರ । ತ್ರಾಹಿ, ಇಂದ್ರಾ,ವರ ಜ,

ಚ ವಿ ವಿ ಗ ಶೇ ವಿ ವಿ
ಸುರವರ ॥ ಅನುಪಲ್ಲವಿ ॥ ಪುಂಡರೀ,ಕಾಕ್ಷ ದೇ,ವ ऽ॥ ಕೈ,ಟಭಮದ। ಖಂಡನಾ,
ವಿ ಗ ತ್ರಿ ಚ ತ್ರಿ ಚ ತ್ರಿ ಚ
ನತ ಸಂಜೀ,ವ ऽ ॥ ದಂಡ, ಧರನುತ, ಪಾಣಿ, ಜನವಾ,ರ್ತಾಂಡ, ವಿಧುಭವ,
ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ನಾಶ, ಖಳಗಜ । ಗಂಡ,ಭೇರುಂ,ಡಾಂಡ, ಕೋಟಿ ಬ್ರ।ಹ್ಮಾಂಡ,ನಾಯಕ,
ತ್ರಿ ಚ
ಚಂಡ, ವಿಕ್ರಮ ॥ –ಕುಮಾರ ವಿಜಯ

ರಾಗ ಸಾರಂಗ – ತ್ರಿವುಡೆತಾಳ

ವಿ ವಿ ಗ ಶೇ ವಿ ವಿ ವಿ ಗ
ಏತಕೆ, ಮರುಳಾಹಿ,ರಿ ऽ ॥ ಅ,ಣ್ಣಯ್ಯ ನೀ । ಏತಕೆ ಮರುಳಾಹಿ,ರಿ ऽ
ತ್ರಿ ಚ ತ್ರಿ ಚ ತ್ರಿ ಚ ತ್ರಿ
॥ ಪಲ್ಲವಿ ॥ ಏತ,ಕೀಪರಿ, ಮರುಳ, ಹಿರಿಬಂ। ದಾತಿ,ರುಕುಳನ, ನೆಲೆಯ,
ಚ ತ್ರಿ ಚ ತ್ರಿ ಚ ತ್ರಿ ಚ ತ್ರಿ
ನರಿಯದೆ। ನೀತಿ,ಬಾಹಿರ,ರಾಗಿ, ತಂಗಿಯ । ನೋತು, ಒಪ್ಪಿಸಿ, । ಕೊಡುವಿ,
ಚ ವಿ ವಿ ಗ ಶೇ ವಿ
ರೇದಿಟ ॥ ಅನುಪಲ್ಲವಿ ॥ ಆ,ಪದೇ,ಶಗಳಹು,ದೋ ऽ ॥ ಅ,ರದು ಬುದ್ಧಿ ।
ವಿ ವಿ ಗ ಶೇ ವಿ ವಿ ವಿ ಗ
ಯಠಾವಂಗ,ದಲಿ ಇಹು,ದೋऽ ॥ ಆ,ತನಚಿತ್ತ।ನಾವರಿಯ,ಲುಬಹು,ದೋऽ ॥
ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ಈ ವಿ,ಧವ ನರಿ,ಯದೆ ಸು,ಭದ್ರಾ। ದೇವಿ,ಯನು ಬಂ,ದವನ, ಸೇವೆಗೆ ।
ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ನೀವು, ಪರುಠವ, ಗೆಯ್ದು, ಬಂಡರ । ಭಾವ,ರಾದಿರಿ, ಭಾವಿ,ಸದೆ ಬರಿ ।
ವಿ ವಿ ಗ
ದೇತಕೆ, ಮರುಳಾಹಿ,ರಿ ऽ ॥ –ಸುಭದ್ರಾ ಕಲ್ಯಾಣ

ರಾಗ ಸಾವೇರಿ – ತ್ರಿವುಡೆತಾಳ

ವಿ ವಿ ಗ ಶೇ ವಿ ವಿ ವಿ
ಬಂದೆಯಾ, ಪಾರ್ಥನೀ,ನು ऽ ॥ ಸಂ,ಶಪ್ತ ಕ।ರಿಂದಲ್ಲಿ, ಬಿಟ್ಟ

ಗ ಶೇ ಪ ವಿ ವಿ ಗ ಶೇ
ರೇ,ನು ? ऽ ॥ ಸಂ,ಗ್ರಾಮದಿ। ನೊಂದುಬಿ,ದ್ದಿರುವೆ ನಾ,ನಃ ऽ ॥ ಪೋ,ದಲ್ಲಿ
ವಿ ಗ ತ್ರಿ ಚ ತ್ರಿ ಚ ತ್ರಿ ಚ ತ್ರಿ
ನೀ,ನು॥ ಚೆಂದ,ವಾದ:ದೆ ?, ರಣದೊ,ಳಾ ರವಿ। ನಂದ,ನಗೆಹದ,ನೇನು'
ಚ ತ್ರಿ ಚ ತ್ರಿ ಚ ತ್ರಿ
ವಮಾಡಿದೆ ? । ಕೊಂದೆ,ಯೋ ವಿ:ಗೆ, ಕಲಹಿ,ದೆಯೊ ಮೇ।ಣೆಂದು, ನುಡಿ
ಚ ತ್ರಿ ಚ
ನುಡಿ, ತಡೆಯು,ದೀಕ್ಷಣ ॥ ಕರ್ಣಪರ್ವ

ರಾಗ ಬೇಗಡೆ ತ್ರಿವುಡೆತಾಳ

ವಿ ವಿ ಗ ಶೇ ವಿ ವಿ
ಏನಿದು, ದುಗುಡ ಪ್ರಿ,ಯ ऽ ॥ ನಿ,ರ್ಜರರಾಯ । ಏನಿದು,
ವಿ ಗ ತ್ರಿ ಚ ತ್ರಿ ಚ
ದುಗುಡ ಪ್ರಿ,ಯ ऽ ॥ ಪಲ್ಲವಿ ॥ ಏನು, ದುಗುಡವಿ,ದುಸಿದು, ಕನ್ನೊಡ।
ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ನಾನ,ನದ ಸಿರಿ,ಕುಂದಿ,ತೇಕನು । ವಮಾನ,ವನು ಬಿಡು,ಬಿಡು ಗು,ಣಾಂಬುಧಿ।
ತ್ರಿ ಚ ತ್ರಿ ಚ ವಿ ವಿ
ಕಾಣೆ,ಧೂರ್ಜಟಿ, ಯಮಾಣೆ, ಸತ್ಯವ॥ ಅನುಪಲ್ಲವಿ ॥ ದುರುಳರ, ಭಯವೇ?
ಗ ಶೇ ವಿ ವಿ ವಿ ಗ ತ್ರಿ
ಪೇ,ಳು ॥ ಅ,ಲ್ಲದೊಡೆಮ್ಮ । ಸುರರ ಭೇ,ದವೆ? ಕೃಪಾ,ಳು॥ ಒರೆದ,ನೇ
ಚ ತ್ರಿ ಚ ತ್ರಿ ಚ ತ್ರಿ ಚ ತ್ರಿ
ಕೃ,ತ್ರಿಮವ, ನಾರದ । ಜರೆದ,ನೇ ? ಕರಿ,ಗೊರಳ, ದಯವನು । ತೊರೆ
ಚ ತ್ರಿ ಚ ತ್ರಿ ಚ ತ್ರಿ ಚ
ದ,ನೇ ? ಶ್ರೀ,ಹರಿಯು, ಶರಣರ। ಮರೆದ,ನೇ ? ಬೇ,ರಿಹುದೆ ?, ಕಪಟ
ತ್ರಿ ಚ ತ್ರಿ ಚ ತ್ರಿ ಚ ತ್ರಿ ಚ
ಗ।ಳರಿಯೆ,ನೆಲೆ ಪ್ರಾ,ಣೇಶ, ನೀನೀ । ತೆರೆದಿ,ದುಃಖಿಪ,ರೇನ,ಕಟಯಿಂದ ।
ತ್ರಿ ಚ ತ್ರಿ ಚ ತ್ರಿ ಚ ತ್ರಿ
ನರುಹ,ದಿರೆ ಬಿಡೆ, ಬಿಡೆನು, ಪದಯುಗ । ಕೆರಗು,ವೆನು ಕೇಳ್, ಕರುಣೆ,
ಚ
ಯಿಂದಲಿ ॥ ಕುಮಾರವಿಜಯ

ಕೆಲವು ಪದಗಳ ಪೂರ್ವ ಭಾಗದಲ್ಲಿ ಅಂಶಿಗಣಗಳೂ ಉತ್ತರ ಭಾಗದಲ್ಲಿ ಚತುರ್ಮಾತ್ರಾಗಣಗಳೂ ಬರುವುವು.

ರಾಗ ಶಂಕರಾಭರಣ – ಏಕತಾಳ

ವಿ ವಿ ವಿ ಜ ವಿ ವಿ
ಸಾಕು ಯು,ದ್ಧ ವುಬೇಡ,ತೆಗೆನಿನ್ನ,ಪಡೆಯ ॥ ನಾಕಪ,ಟ್ಟಣವಾಳು,
ವಿ ಬ್ರ ಚ ಚ ಚ ಚ ಚ
ಸುಖದಿಕೇಳ್,ನುಡಿಯ ॥ ಆಕಮ,ಲಜನುವಿ,ವೇಕದಿ,ಪೇಳಿದ । ವಾಕ್ಯಗ,
ಚ ಚ ಚ ಚ ಚ ಚ ಚ ಚ
ಳಿದುವೆನಿ,ರಾಕರಿ,ಸದಿರವ ।ಲೋಕಿಸಿ,ನೀತವ,ಲೋಕಕೆ,ನಡೆನಡೆ । ವಾಕಾಂ,
ಚ ಚ ಚ
ತನುಕರು,ಣಾಕರ,ಪೊರೆವನು ॥ –ಸಮುದ್ರ ಮಥನ

ರಾಗ ಜಂಜೂಟಿ – ಏಕತಾಳ

ವಿ ವಿ ಬ್ರ ಶೇ ವಿ ವಿ
ತನುಜೆಯ,ಕೊಡುವೆನೈ,ನಿಮಗೆ ॥ ಸಂ,ಶಯವಿಲ್ಲ । ಮುನಿಯೆನಾ,
ವಿ ಬ್ರ ಚ ಚ ಚ ಚ ಚ
ನಿಮಗೆಂದ,ನುಡಿಗೆ ॥ ದನುಜಾ,ರಿಯಕೃಪೆ,ತನಗಿಹ,ಕಾರಣ । ಘನಮಹಿ,
ಚ ಚ ಚ
ಮರನಿ,ತ್ರನುಸುತೆ,ಗಿಂದು s ॥ –ಕಾರ್ತವೀರ್ಯಾರ್ಜುನ ಕಾಳಗ

ರಾಗ ಪಂತುವರಾಳಿ – ಏಕತಾಳ

ವಿ ವಿ ಗ ಶೇ ವಿ ವಿ ವಿ
ಶಂಕೆಯೋ,ನಯ್ಯ ವಿ,ಷ್ಣ s ॥ ಜ,ನಾರ್ದನ । ಪಂಕಜ,ಲಾದ್ರಿ
ಗ ಚ ಚ ಚ ಚ ಚ ಚ ಚ
ಜಿ,ಷ್ಣ s ॥ ಕಿಂಕರ,ನುತ ಸುರ,ಸಂಕಲ, ರಕ್ಷ ಭ।ಯಂಕ,ರ ದಾನವ,ಬಿಂಕವಿ,
ಚ ಚ ಚ ಚ ಚ ಚ ಚ ಚ
ಮರ್ದನ। ಕುಂಕುಮ, ಚರ್ಚಿತ, ಸಂಕಟ,ಹರಣ ಶು।ಭಂಕರ, ಹರಿಶ್ರೀ,ವೆಂಕ
ಚ
ಟ,ರಮಣನೆ ॥
–ದ್ರೌಪದೀ ಪ್ರತಾಪ

ರಾಗ ಸೌರಾಷ್ಟ್ರ ಏಕತಾಳ

ವಿ ವಿ ವಿ ಗ ಶೇ ವಿ ವಿ
ಹರಸಿ ಕ,ಳುಹಿದಳು, ಸ್ಕಂದನ,ನುಽ ॥ ಹಿಮ।ಗಿರಿಜೆ **ತನ್ನಯ ಮುದ್ದು.**
ವಿ ಗ ವಿ ವಿ ವಿ ವಿ **ಶೇ** ವಿ
ಕಂದನ,ನು ಽ ॥ ಖಳರವ,ರೊಳಗೆಸ,ದಳ ಬವ,ರ ಽ ॥ **ನೀನು । ತಿಳಿದಿಳಿ,**
ವಿ ವಿ ಗ ಚ ಚ ಚ * ತ್ರಿ ಪ *
ಕಾಳಗ, ಕೆಲೆ ಕುವ,ರ ಽ ॥ ಅಳವಿಗೆ,ಳಸಿ ಮ,ತ್ತಳುಕಿ, ಹಿಂದಿರುಗ, । ಲಿಳಿ
ಪ ಚ ಚಿ
ಯೊ,ಳಖ್ಯಾತಿ, ಬಂದಪು,ದೆನ್ನುತ ಕುಮಾರವಿಜಯ

ರಾಗ ಮುಖಾರಿ - ಏಕತಾಳ

ವಿ ವಿ ಬ್ರ ವಿ ಬ್ರ ವಿ
ಬೇಟೆಯಾ,ಡುತ ಬಂದ, ದೇವ ॥ ಭಕ್ತ ಸಂ,ಜೀವ ॥ ಬೇಟೆಯಾಡು,ತ
ವಿ ಬ್ರ ಚ ಚ ಚ ಚ ಚ
ಬಂದ, ದೇವ ॥ ಪಲ್ಲವಿ ॥ ಮೀಟಾ,ಗಿ ಹವರ, ಘೋಟಕ,ವೇರಿ ವಿ।ರಾಟ
ಚ ಚ ಚ ಚ ಚ ಚ ಚ
ಪು,ರುಷ ಬಳಿ, ಕೀಟಕ, ತಾರಿಯ। ನಾಟಿಸಿ, ಕಟಿಯೊಳು, ಕೋಟಿ ಕಿ,ರಾತರ।
ಚ ಚ ಚ ಚ
ಕೂಟವ, ಕೂಡಿಮು, ಹಾಟವಿ,ಯೊಳಗೆ ಽ ॥ –ಪದ್ಮಾವತೀ ಕಲ್ಯಾಣ

ರಾಗ ಪಂತುವರಾಳಿ – ಆದಿತಾಳ

ವಿ ವಿ ಗ ಶೇ ವಿ ವಿ ವಿ
ಹೋ ಹೋ ಮೆ,ಚ್ಚಿದೆ ನಿದ,ಕೆ ಽ ॥ ನಿ,ಮ್ಮಯ ಘನ । ಸಾಹಸ, **ಶುಭ**
ಗ ವಿ ವಿ ವಿ ವಿ ಚ **ಚ**
ಗುಣ,ಕೆ ಽ ॥ ಈಹದ, ನಾದರೆ,ನಾ ಹೇಳು,ವೆನು ಮುಂದಾ । ವಾಹಿಸಿ,**ಕೊಂಡ**
ಚ ಚ ಚ ಚ ಚ ಚ
ವಿ,ವಾಹಕೆ ನಿಮ್ಮಿಂ । ದಾಹುದ, ವಾಳ್ಪಿರಿ, ಬಾಹು ಬ,ಲಾಢ್ಯರು ।
–ಸುಭದ್ರಾ ಕಲ್ಯಾಣ

ರಾಗ [illegible]

ವಿ ವಿ [illegible]

ದೇವ ಸಂ,ಕುಲವೆಲ್ಲ, [illegible]

ತ್ರಿ ಚ [illegible]

ಭಾವ,ಜಾರಿ ಹಿತ, ಭಾಪನಿ, [illegible]

ವಿ ವಿ [illegible]

॥ ಪಲ್ಲವಿ ॥ ಗಿರಿಜೆಯು, [illegible]

ಬ್ರ ವಿ ವಿ [illegible]

ಪಾ,ರ್ಶ್ವದೊಳು ॥ [illegible]

ವಿ ಬ್ರ [illegible]

ಸದಿಕಾಂ,ತನೊಳ್ ॥ [illegible]

ಚ ಚ ಚ

ಶರಣರ, ಮರೆವುದು, [illegible] ? ॥ [illegible]



ಶ್ರೀ। ಕ. ಪು. ಸೀತಾರಾಮ ಕೆದಿಲ್ಲಾಯ, ಶಿಶಿ
ಇವರು ರಚಿಸಿದ "ಯಕ್ಷಗಾನ ಛಂದೋವಿವೇಕ
ಒಂದು ಅಪೂರ್ವ ಕೃತಿ. ಯಕ್ಷಗಾನ ಕವಿಗಳಿಗೂ
ಭಾಗವತರಿಗೂ ಆಧುನಿಕ ಕವಿಗಳಿಗೂ ಉಪ
ಯುಕ್ತವಾದ ಗ್ರಂಥ.

ಸೂಕ್ತಿ ಮಂಜರಿ - ದುರ್ಯೋಧನ ವಧೆ- ಛಂದೋ
ದರ್ಪಣಂ– ಯಕ್ಷಗಾನ ಛಂದೋವಿವೇಕಗಳು ಇವರ ಪ್ರಕಟಿ
ಸ್ವತಂತ್ರ ಕೃತಿಗಳು. ವಾಲಿ–ಸುಗ್ರೀವರ ಕಾಳಗ - ವಿದ್ಯುನ್ಮತಿ
ಕಲ್ಯಾಣಗಳು ಇವರ ಸಂಪಾದಿತ ಯಕ್ಷಗಾನ ಪ್ರಸಂಗಗಳ
ಮುದ್ರಣ ಪ್ರಶಸ್ತಿ - ಯಕ್ಷಗಾನ ಪ್ರಕಾಶಿಕೆ - ಮೈಸೂರು ವಿಶ್ವ
ವಿದ್ಯಾನಿಲಯದ ಕನ್ನಡ ಛಂದಸ್ಸಿನ ಚರಿತ್ರೆ - ಯಕ್ಷಗಾನ
ಮಕರಂದ–ರಂಗವೈಖರಿ–ಇತ್ಯಾದಿ ಗ್ರಂಥಗಳಲ್ಲಿಯೂ ಕನ್ನಡದ
ವಿವಿಧ ಸುಪ್ರಸಿದ್ಧ ಪತ್ರಿಕೆಗಳಲ್ಲಿಯೂ ಇವರ ಅನೇಕ ಲೇಖನ
ಗಳು ಪ್ರಕಟಿತವಾಗಿವೆ.

ಕನ್ನಡ ಛಂದಸ್ಸಿನ ಇತಿಹಾಸ - ವಿಚಾರಧಾರೆ - ಶಿಶ
ಗೀತಾವಳಿ - ಭಜನ ಗೀತಾಂಜಲಿ ಮುಂತಾದ ಇವರ ಅಮೂಲ್
ಕೃತಿಗಳು ಇನ್ನೂ ಪ್ರಕಟವಾಗಬೇಕಾಗಿದೆ.

ಪ್ರಕಾಶ



ಶ್ರೀ ಕ. ಪು. ಸೀತಾರಾಮ ಕೆದಿಲ್ಲಾಯ, ಶಿಶಿಲ ಇವರು ರಚಿಸಿದ "ಯಕ್ಷಗಾನ ಛಂದೋವಿವೇಕ" ಒಂದು ಅಪೂರ್ವ ಕೃತಿ. ಯಕ್ಷಗಾನ ಕವಿಗಳಿಗೂ ಭಾಗವತರಿಗೂ ಆಧುನಿಕ ಕವಿಗಳಿಗೂ ಉಪಯುಕ್ತವಾದ ಗ್ರಂಥ.

ಸೂಕ್ತಿ ಮಂಜರಿ - ದುರ್ಯೋಧನ ವಧೆ - ಛಂದೋದರ್ಪಣಂ – ಯಕ್ಷಗಾನ ಛಂದೋವಿವೇಕಗಳು ಇವರ ಪ್ರಕಟಿತ ಸ್ವತಂತ್ರ ಕೃತಿಗಳು. ವಾಲಿ–ಸುಗ್ರೀವರ ಕಾಳಗ - ವಿದ್ಯುನ್ಮತೀ ಕಲ್ಯಾಣಗಳು ಇವರ ಸಂಪಾದಿತ ಯಕ್ಷಗಾನ ಪ್ರಸಂಗಗಳು ಮುದ್ದಣ ಪ್ರಶಸ್ತಿ - ಯಕ್ಷಗಾನ ಪ್ರಕಾಶಿಕೆ - ಮೈಸೂರು ವಿಶ್ವ ವಿದ್ಯಾನಿಲಯದ ಕನ್ನಡ ಛಂದಸ್ಸಿನ ಚರಿತ್ರೆ - ಯಕ್ಷಗಾನ ಮಕರಂದ–ರಂಗವೈಖರಿ–ಇತ್ಯಾದಿ ಗ್ರಂಥಗಳಲ್ಲಿಯೂ ಕನ್ನಡದ ವಿವಿಧ ಸುಪ್ರಸಿದ್ಧ ಪತ್ರಿಕೆಗಳಲ್ಲಿಯೂ ಇವರ ಅನೇಕ ಲೇಖನಗಳು ಪ್ರಕಟಿತವಾಗಿವೆ.

ಕನ್ನಡ ಛಂದಸ್ಸಿನ ಇತಿಹಾಸ - ವಿಚಾರಧಾರೆ - ಶಿಶುಗೀತಾವಳಿ - ಭಜನ ಗೀತಾಂಜಲಿ ಮುಂತಾದ ಇವರ ಅಮೂಲ್ಯ ಕೃತಿಗಳು ಇನ್ನೂ ಪ್ರಕಟವಾಗಬೇಕಾಗಿದೆ.

ಪ್ರಕಾಶಕ